# ಅಧ್ಯಾಯ-೦೪

## ಆಧುನಿಕತೆಯ ವಿನ್ಯಾಸಗಳು ಮತ್ತು ಬಿಡುಗಡೆಯ ಸ್ವರೂಪ

ಪುರುಷ ಪ್ರಧಾನ ವ್ಯವಸ್ಥೆಯು ಸ್ತ್ರೀಯರ ಸ್ವಾತಂತ್ರ್ಯ, ಅಧಿಕಾರ, ಸಮಾನತೆಗಳನ್ನು ಮೊಟಕುಗೊಳಿಸಿ ಭೂಮಿಯ ಮೇಲೆ ತಮ್ಮ ಅಧಿಪತ್ಯ ಸ್ಥಾಪಿಸಿದೆ. ನಾಗರಿಕತೆ ಬೆಳೆದಂತೆ ಅವಳನ್ನು ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ಕೌಟುಂಬಿಕವಾಗಿ ಶೋಷಿಸುತ್ತಲೆ ಬಂದಿದೆ. 'ಹೆಣ್ಣಿನ ಬುದ್ಧಿ ಮೊಣಕಾಲ ಕೆಳಗೆ' ಎನ್ನುತ್ತಲೆ ಅವಳನ್ನು ತುಳಿಯುತ್ತಿದೆ. ತಮ್ಮ ಕೈಗೊಂಬೆಯನ್ನಾಗಿಸಿಕೊಂಡು ತಮಗೆ ಹೇಗೆ ಬೇಕೊ ಹಾಗೆ ಕುಣಿಸುವಂತೆ ಸಾಮಾಜಿಕ ರಚನೆ ಮಾಡಿಕೊಂಡಿದೆ. ಸ್ತ್ರೀಯನ್ನು ಕೇವಲ ದುಡಿಮೆಯ ಯಂತ್ರವಾಗಿ ಕಾಣುತ್ತಾ ಬಂದಿದೆ.

ಪಿತೃಪ್ರಧಾನ ಸಮಾಜದ ಈ ಸುಳಿಯಲ್ಲಿ ಸಿಲುಕಿರುವ ಹೆಂಗಳೆಯರು ಹೊರಬರುವ ಪ್ರಯತ್ನ ಮಾಡದೆ ಪುರುಷರ ದಬ್ಬಾಳಿಕೆ, ದೌರ್ಜನ್ಯಗಳಿಗೆ ಒಗ್ಗಿಕೊಂಡು ಅವರ ಪರಿಪಾಲಕರಾಗಿದ್ದಾರೆ. "ಅಸ್ವಸ್ಥ ಸಮಾಜದಲ್ಲಿ ಬದುಕಬೇಕಾದ ಮಹಿಳೆಗೆ ತಾನೇನು? ಎಂಬುದೆ ಮರೆತು ಹೋಗುವಂತಹ, ತಾನೂ ಓರ್ವ ಜೀವಿ ತನಗೂ ವ್ಯಕ್ತಿತ್ವ, ಅಸ್ತಿತ್ವಗಳು, ಬೇಕು, ಬೇಡಗಳು ಇವೆ ಎಂಬ ಸತ್ಯವನ್ನೆ ಕಾಣಲಾಗದಂತಹ ಸ್ಥಿತಿಯೂ ಇದೆ. ಅಂತಹ ಸಂದರ್ಭದಿಂದ ಹೊರಬಂದು ಮಹಿಳೆ ಮೊದಲಿಗೆ ತನ್ನನ್ನು ತಾನು ಅರಿಯುವ, ತನ್ನ ಅಸ್ತಿತ್ವ ಅನನ್ಯತೆಯನ್ನು ಗುರುತಿಸಿಕೊಳ್ಳುವ, ತನ್ನ ಸ್ವಂತಿಕೆಯನ್ನು ಸ್ಥಾಪಿಸಿಕೊಳ್ಳುವ ಕಾರ್ಯ ಅತ್ಯಂತ ತುರ್ತಾಗಿ ನಡೆಯಬೇಕಾಗುತ್ತದೆ"[೧] ಆಗ ಮಾತ್ರ ಅಸಮಾನತೆಯ ಸಮಾಜದಲ್ಲಿ ಪರಿವರ್ತನೆ ಕಾಣಲು ಸಾಧ್ಯ ಎಂಬ ಅಭಿಪ್ರಾಯ ಲೇಖಕಿ ಎಂ.ಎಸ್.ವೇದಾರವರದು. ಇವರ ಅಭಿಪ್ರಾಯ ಅಕ್ಷರಶಃ ನೈಜವಾಗಿದೆ; ಬಂಧನದ ವ್ಯವಸ್ಥೆಯಲ್ಲಿರುವ ಮಹಿಳೆಯರು ಎಚ್ಚೆತ್ತು ಬಂಧನಮುಕ್ತ ಮಾರ್ಗಗಳನ್ನು ಕಂಡುಕೊಳ್ಳುವ ಸಂದೇಶವನ್ನು ನೀಡಿದ್ದಾರೆ.

'ಸಂಕೋಲೆಯಿಂದ ಬಿಡುಗಡೆ' ಎಂಬ ಪದಪರಿಕಲ್ಪನೆಯಲ್ಲಿಯೇ ಹೆಣ್ಣಿನ ಮಟ್ಟಿಗೆ ಬಹುಮುಖತೆಯ ಸಂಕೀರ್ಣತೆ ಇದೆ. "ಯಾವೆಲ್ಲದರಿಂದ ಆಕೆಗೆ ಬಿಡುಗಡೆ ಬೇಕು? ತನಗೆ ತಾನೇ ಹಾಕಿಕೊಳ್ಳುವ ನಿರ್ಬಂಧಗಳಿಂದಲೆ? ತನ್ನ ಮೇಲೆ ಹೇರಲಾಗಿರುವ ನಿರ್ಬಂಧಗಳಿಂದಲೆ? ಹೇರಲಾಗಿದೆಯೆಂದು ತನಗೆ ತಾನೇ ಭ್ರಮಿಸಿಕೊಳ್ಳುವ ನಿರ್ಬಂಧಗಳಿಂದಲೆ? ಬಿಡುಗಡೆ ಎನ್ನುವುದು ತನಗೆ ಬೇಕಾಗಿ ತಾನು ಪಡೆದುಕೊಳ್ಳುವುದೋ, ತನ್ನ ಸಲುವಾಗಿ ಇತರರು ತಂದುಕೊಡಬೇಕಾಗಿರುವುದೋ ಎನ್ನುವ ದ್ವಂದ್ವದಿಂದಲೆ?"[೨] ಎಂಬ ಪ್ರಶ್ನೆಗಳಿಗೆ ಆಧುನಿಕ

ವಿನ್ಯಾಸಗಳಾದ ಶಿಕ್ಷಣ, ಉದ್ಯೋಗ, ಪ್ರತಿಭಟನೆ ಉತ್ತರವಾಗಿವೆ. ಈ ಮೂರು ಪ್ರತಿಯೊಬ್ಬ ಮಾನವರಲ್ಲೂ ಸ್ವತಂತ್ರ ಆಲೋಚನೆ ಸ್ವತಂತ್ರ ಜೀವನವನ್ನು ಬೆಳೆಸುತ್ತದೆ. ಈ ಮೂಲಕ ಹೆಣ್ಣು ತನ್ನ ಅಸ್ತಿತ್ವ, ಅನನ್ಯತೆ ಸ್ಥಾಪಿಸುತ್ತಾಳೆಂಬುದು ಈ ಕಾದಂಬರಿಗಳ ಅಧ್ಯಯನದಿಂದ ವೇದ್ಯವಾಗುತ್ತದೆ.

ಎಲ್ಲಾ ಕಾಲಕ್ಕು ಸ್ತ್ರೀಯರ ಮೇಲೆ ದಮನಕಾರಿ ಪ್ರವೃತ್ತಿ ನಡೆಯುತ್ತಿತ್ತು. ಅದನ್ನು ಅರಿತ ಸ್ತ್ರೀಯರು ಅವರ ಶೋಷಿತ ನೆಲೆಯಿಂದ ಆಧುನಿಕ ವಿನ್ಯಾಸಗಳಾದ ಶಿಕ್ಷಣ ಉದ್ಯೋಗ, ಪ್ರತಿಭಟನೆಯಿಂದ ಹೇಗೆ ಬಿಡುಗಡೆ ಹೊಂದಿದರು ಎಂಬುದು ಪ್ರಸ್ತುತ ಅಧ್ಯಯನವಾಗಿದೆ. ಶಿಕ್ಷಣದಿಂದ ಹಳೇ ತಲೆಮಾರಿನವರ ವಿರುದ್ಧ ಹೊಸ ಆಲೋಚನೆಗಳನ್ನು ಪಡೆದದ್ದನ್ನು, ಉದ್ಯೋಗ ಪಡೆಯುವ ಮೂಲಕ ಆರ್ಥಿಕ ಸ್ವಾತಂತ್ರ್ಯಗಳಿಸುವುದನ್ನು, ತಮ್ಮ ಅಸ್ತಿತ್ವಕ್ಕೆ ಧಕ್ಕೆಯಾಗುವ ವೇಳೆಗೆ ತಮ್ಮತನ ಉಳಿಸಿಕೊಳ್ಳಲು ಪ್ರತಿಭಟಿಸುವುದನ್ನು ಚರ್ಚಿಸುತ್ತ ಅವರದೇ ಛಲ, ಸ್ವಾಭಿಮಾನ, ಗಟ್ಟಿತನ, ಪರಿಸ್ಥಿತಿಗೆ ಬೆನ್ನು ಹಾಕದೆ ದಿಟ್ಟತನದ ಮೂಲಕ ತಮ್ಮ ಜೀವನವನ್ನು ಹೇಗೆ ರೂಪಿಸಿಕೊಂಡರು ಎಂಬುದನ್ನು ಈ ಅಧ್ಯಾಯ ವಿಶ್ಲೇಷಿಸಲಾಗಿದೆ.

## ೪.೧ ಶಿಕ್ಷಣ

ಶಿಕ್ಷಣದಿಂದ ಜ್ಞಾನವೃದ್ಧಿ, ಜ್ಞಾನದಿಂದ ಬದುಕು, ಬದುಕಿನಾಸರೆಯೇ ಸುಸಂಸ್ಕೃತಿ. ಪ್ರತಿಯೊಬ್ಬರಿಗೂ ಶಿಕ್ಷಣ ಅಗತ್ಯವಾಗಿದೆ. ಆ ಶಿಕ್ಷಣವು ಎಲ್ಲ ವರ್ಗದ ಜನರ ಬದುಕಿಗೆ ಆಸರೆಯಾಗಬೇಕು. ಜ್ಞಾನ ಮತ್ತು ತಿಳುವಳಿಕೆಗೆ ದಾರಿ ದೀಪವಾಗಿರುವ ಶಿಕ್ಷಣ ಸಾಮಾಜಿಕ ಬದಲಾವಣೆಗೆ ಅತ್ಯಗತ್ಯ. "ಶಿಕ್ಷಣವು ಜ್ಞಾನವನ್ನು ಕೊಡುವುದರ ಜೊತೆಗೆ ವ್ಯಕ್ತಿಯು ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕಾರ್ಯಗಳನ್ನು ಕೈಗೊಳ್ಳಲು ಬೇಕಾಗುವಂತಹ ಸಾಮರ್ಥ್ಯವನ್ನು ಪಡೆಯುವಂತೆ ಮಾಡುತ್ತದೆ"[೩] ಮತ್ತು ವ್ಯಕ್ತಿಯನ್ನು ಉತ್ತಮ ನಾಗರಿಕರನ್ನಾಗಿ ರೂಪಿಸುತ್ತದೆ. ಶಿಕ್ಷಣದ ಮೂಲಕ ಸಾಮಾಜಿಕ ಅರಿವನ್ನು ಪಡೆಯುವುದಲ್ಲದೆ ಆರ್ಥಿಕ ಸ್ವಾವಲಂಬನೆಯನ್ನು ಗಳಿಸಲು ಮಾರ್ಗವಾಗಿದೆ. ಬದುಕಿಗೆ ಆಸರೆಯಾಗಿರುವ ಶಿಕ್ಷಣವು ವ್ಯಕ್ತಿಯ ವೈಯಕ್ತಿಕತೆಗೆ ಮಾತ್ರವಲ್ಲದೆ, ಒಂದು ದೇಶದ ಮೇಲೂ ಪರಿಣಾಮ ಬೀರುತ್ತಿದೆ. ದೇಶದ ಆಚಾರ-ವಿಚಾರ, ಉಡುಗೆ-ತೊಡುಗೆ, ಸ್ತ್ರೀ-ಪುರುಷರ ಸ್ಥಾನಮಾನ, ಸ್ವಾತಂತ್ರ್ಯ, ಸಂಸ್ಕೃತಿ ಶಿಕ್ಷಣವನ್ನು ಅವಲಂಬಿಸಿದೆ. ಸ್ತ್ರೀ-ಪುರುಷರ ಸಾಕ್ಷರತೆಯ ಮಟ್ಟ ದೇಶದ ಅಭಿವೃದ್ಧಿಗೆ ಹೊಂದಿಕೊಂಡಿರುವುದರಿಂದ ಸುಶಿಕ್ಷಿತರಾದ ಪುರುಷರಿಂದ ಮಾತ್ರ ದೇಶದಲ್ಲಿ ಪ್ರಗತಿಪರ ಏಳಿಗೆ

ಕಾಣಲು ಸಾಧ್ಯವಿಲ್ಲ. ಪುರುಷರೊಂದಿಗೆ ಎಲ್ಲಾ ಸ್ತ್ರೀಯರು ಶಿಕ್ಷಿತರಾದಾಗಲೇ ಸುಶಿಕ್ಷಿತ ಸಮಾಜ ನಿರ್ಮಾಣವಾಗಿ ದೇಶದ ಪ್ರಗತಿ ಸಾಧ್ಯವಾಗುತ್ತದೆ.

ಭಾರತೀಯ ಪರಂಪರೆಯನ್ನು ಸ್ಥೂಲವಾಗಿ ಗಮನಿಸಿದಾಗ ಸ್ತ್ರೀ–ಪುರುಷರ ಅಸಮಾನತೆ ಎಲ್ಲಾ ರಂಗದಲ್ಲೂ ಎದ್ದು ಕಾಣುತ್ತದೆ. ಮಾತೃಪ್ರಧಾನ ವ್ಯವಸ್ಥೆಯಿಂದ ಅತೀ ವೇಗವಾಗಿ ಪಿತೃಪ್ರಧಾನ ವ್ಯವಸ್ಥೆಗೆ ಜಾರಿದ ಸಮಾಜ ಸ್ತ್ರೀಯನ್ನು ಎರಡನೇ ದರ್ಜೆಯಲ್ಲಿ ಕಾಣುತ್ತಿದೆ. ಸ್ತ್ರೀಯನ್ನು ಅಡುಗೆ ಮನೆಗೆ ಸೀಮಿತಗೊಳಿಸಿ ಗಂಡ, ಮನೆ, ಮಕ್ಕಳು, ಸಂಸಾರಗಳಲ್ಲಿ ಆಕೆಯನ್ನು ಬಂಧಿಸಲಾಗಿದೆ. ತಾಯಿಯಾಗಿ, ಹೆಂಡತಿಯಾಗಿ, ಸೊಸೆಯಾಗಿ, ಸಹೋದರಿಯಾಗಿ ಮಾತ್ರ ಬದುಕುವ ಹೆಣ್ಣಿಗೆ ಪುರುಷಪ್ರಧಾನ ವ್ಯವಸ್ಥೆ ಶಿಕ್ಷಣದಿಂದ ಅವಕಾಶ ವಂಚನೆ ಮಾಡಿದೆ. ಪುರುಷರು ಸಮಾಜದಲ್ಲಿ ಜಾತಿ, ಧರ್ಮ, ವರ್ಣ, ಭಾಷೆ, ವರ್ಗ, ಜನಾಂಗ ನೆಪದಲ್ಲಿ ಶಿಕ್ಷಣದಿಂದ ವಂಚಿತರಾದರೆ, ಸ್ತ್ರೀಯು ಇವುಗಳೆಲ್ಲವೂ ಸೇರಿದಂತೆ ಮಾನವ ಇತಿಹಾಸದುದ್ದಕ್ಕೂ ಲಿಂಗದ ತಾರತಮ್ಯದ ಹಿನ್ನೆಲೆಯಿಂದಾಗಿ ಶಿಕ್ಷಣದಿಂದ ವಂಚಿತಳಾಗುತ್ತಿದ್ದಾಳೆ.

ಇತಿಹಾಸದ ಪುಟಗಳಲ್ಲಿ ದಾಖಲಿಸಿರುವಂತೆ, ವೇದಕಾಲದಲ್ಲಿ ಮಹಿಳೆಯರ ಸ್ಥಾನಮಾನ ಗೌರವಯುತವಾಗಿದ್ದವು. ಬ್ರಹ್ಮವಾದಿನಿಯರಾದ ಘೋಷಾ, ಮೈತ್ರೇಯಿ, ಗೋದಾ, ಲೋಪಮುದ್ರಾ, ಗಾರ್ಗಿ ಮೊದಲಾದವರು ಶಿಕ್ಷಣ ಪಡೆದಿದ್ದ ಉಲ್ಲೇಖಗಳಿವೆ. ಮಧ್ಯಕಾಲೀನ ಯುಗದಿಂದ ಸ್ತ್ರೀಯರ ಅವನತಿ ಉಂಟಾಯಿತು. ಇದರಿಂದ ಸ್ತ್ರೀ ಶಿಕ್ಷಣದಲ್ಲೂ ಏರುಪೇರುಂಟಾಯಿತು. ಆನಂತರ ಭಾರತದಲ್ಲಿ ಬ್ರಿಟಿಷರ ಆಳ್ವಿಕೆ 'ಸ್ತ್ರೀಶಿಕ್ಷಣಕ್ಕೆ' ತೀವ್ರ ಪರಿಣಾಮಗಳನ್ನುಂಟು ಮಾಡಿದೆ. ಮತ್ತೊಂದೆಡೆ ಸಮಾಜ ಸುಧಾರಕರಾದ "ರಾಜರಾಮ್ ಮೋಹನ್ ರಾಯ್, ಈಶ್ವರಚಂದ್ರ ವಿದ್ಯಾಸಾಗರ್, ಕೇಶವಚಂದ್ರಸೇನ್, ಎಂ.ಜಿ. ರಾನಡೆ, ದಯಾನಂದ ಸರಸ್ವತಿ, ಮಹಾತ್ಮ ಜ್ಯೋತಿರಾವ್‌ಪುಲೆ, ರಾವ್ ಬಹುದ್ದೂರ್, ಬೆಹರಾಂಜೀ ಮಲಬಾರಿ, ಡಿ.ಜಿ.ಕಾರ್ವೆ, ಅನಿಬೆಸೆಂಟ್, ಸರೋಜಿನಿನಾಯ್ಡು, ಕಮಲಾದೇವಿ ಚಟ್ಟೋಪಾಧ್ಯಾಯ, ಮಾರ್ಗರೆಟ್ ಕಸಿನ್ಸ, ಪಂಡಿತ ರಮಾಬಾಯಿ, ರೇಣುಕಾರಾಯ್, ಸರಳಾದೇವಿ ಮುಂತಾದ ಧೀಮಂತ ವ್ಯಕ್ತಿಗಳು ಮಹಿಳೆಯರಿಗಾಗುತ್ತಿದ್ದ ತಾರತಮ್ಯ, ಅನ್ಯಾಯಗಳ ಬಗ್ಗೆ ಜಾಗೃತಿ ಮೂಡಿಸಿ ಅವುಗಳನ್ನು ತೊಡೆದು ಹಾಕಲು ಅವಿರತ ಶ್ರಮಿಸಿದರು".[೪] ಇವರ ಜೊತೆಗೆ ಕ್ರೈಸ್ತ ಮಿಷನರಿಗಳು ಸೇರಿದವು. ಇದರ ಫಲವಾಗಿ ಮಹಿಳಾ ಶಿಕ್ಷಣಕ್ಕೆ ಪ್ರೋತ್ಸಾಹ ದೊರಕಿದೆ.

೧೮೨೪ರಲ್ಲಿ ಮೊಟ್ಟಮೊದಲು ಮುಂಬಯಿಯಲ್ಲಿ ಸ್ತ್ರೀಯರಿಗೆಂದೇ ಶಾಲೆಯನ್ನು ತೆರೆಯಲಾಯಿತು. ೧೮೪೮ರಲ್ಲಿ ಪುಣೆಯಲ್ಲಿ ಕನ್ಯಾಶಾಲೆ, ೧೮೪೯ರಲ್ಲಿ ಕಲ್ಕತ್ತಾದಲ್ಲಿ

ಜಿಥುನೇಶಾಲೆಯು ಪ್ರಾರಂಭವಾಯಿತು. ೧೮೫೨ರಲ್ಲಿ ಸ್ತ್ರೀಶಾಲೆಗಳು ಪ್ರಾರಂಭವಾದವು. ಕರ್ನಾಟಕದಲ್ಲೂ ೧೮೩೦ರ ಸುಮಾರಿಗೆ ವಿವಿಧ ಪ್ರಾಂತ್ಯಗಳಲ್ಲಿ ಸ್ತ್ರೀ ಶಾಲೆಗಳು ಆರಂಭಗೊಂಡವು. ೧೮೩೩ರಲ್ಲಿ ಬಳ್ಳಾರಿ ಮತ್ತು ಮೈಸೂರಿನಲ್ಲಿ, ೧೮೫೩ರಲ್ಲಿ ಬೆಳಗಾವಿಯಲ್ಲಿ ಹಾಗೂ ೧೮೪೦ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಶಾಲೆಗಳನ್ನು ಆರಂಭಿಸಲಾಯಿತು. ಮೈಸೂರು ಒಡೆಯರ ಕಾಲದಲ್ಲೂ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾದವು.

ತದನಂತರದಲ್ಲಿ ಬಂದ ಆಯೋಗಗಳು, ಯೋಜನೆಗಳಿಂದ ಮಹಿಳಾ ಶಿಕ್ಷಣಕ್ಕೆ ಪ್ರೋತ್ಸಾಹ ದೊರೆಯಿತು. ಆದರೂ ಶಿಕ್ಷಣ ಪಡೆಯುವಲ್ಲಿ ಮಹಿಳೆಯರ ಸಂಖ್ಯೆ ಕಡಿಮೆಯೇ ಇತ್ತು. ಕಾರಣ ಸ್ತ್ರೀಯರು ತಮಗಿಂತಲೂ ಬುದ್ಧಿವಂತರಾಗಬಾರದು. ಮಹಿಳೆಯರಿಗಿಂತ ಪುರುಷರು ಎತ್ತರದಲ್ಲಿರಬೇಕೆಂಬ ಪುರುಷಷಾಹಿ ವ್ಯವಸ್ಥೆ ಸ್ವಾರ್ಥ ಮನೋಭಾವ ಹೆಣ್ಣನ್ನು ಬಂಧಿಸಿತ್ತು. ಸಾಮಾಜಿಕ ಕಟ್ಟುಪಾಡುಗಳನ್ನು ಆಕೆಯ ಮೇಲೆ ಹೇರಿ ಪುರುಷರು ಸ್ವತಂತ್ರರೆನಿಸಿಕೊಂಡರು. ಬಾಲ್ಯವಿವಾಹ, ಪರದಾಪದ್ಧತಿ, ಸತಿಪದ್ಧತಿಗಳಂತಹ ಕ್ರೂರ ಪದ್ಧತಿಗಳ ಆಚರಣೆಗಳೇ ಸ್ತ್ರೀ ಶಿಕ್ಷಣಕ್ಕೆ ಮಾರಕವಾಗಿದ್ದವು. ಕಾಲಕ್ರಮೇಣ ಮೇಲ್ವರ್ಗದ ಮಹಿಳೆಯರು ಶಿಕ್ಷಣ ಪಡೆಯುವಂತಾದರೂ ಎಲ್ಲರೂ ಮುಕ್ತವಾಗಿ ದೊರಕಿಸಿಕೊಳ್ಳಲಾಗಲಿಲ್ಲ. ಕೆಳವರ್ಗದ ಹೆಣ್ಣುಮಕ್ಕಳು ಬಡತನ, ಪೋಷಕರ ಅನಕ್ಷರತೆ, ಮೌಢ್ಯ, ಅಜ್ಞಾನಗಳಿಂದ ವಂಚಿತರಾದರು ಮತ್ತೊಂದೆಡೆ ಈ ಎರಡೂ ವರ್ಗದವರಿಗೆ ಮೈನೆರೆಯುವಿಕೆ, ಹತ್ತಿರದಲ್ಲಿ ಶಾಲೆ ಇಲ್ಲದಿರುವುದು, ಅಸುರಕ್ಷತೆ ಮುಂತಾದ ಕಾರಣಗಳಿಂದ ಶಿಕ್ಷಣದಿಂದ ದೂರವೆ ಉಳಿಯಬೇಕಾದ ಪರಿಸ್ಥಿತಿ ಉಂಟಾಯಿತು.

ಭಾರತ ಸರ್ಕಾರ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು 'ಮಹಿಳಾ ಶಿಕ್ಷಣದ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗಾಗಿ ವಿದ್ಯಾರ್ಥಿವೇತನ, ಹಾಜರಾತಿ ವಿದ್ಯಾರ್ಥಿವೇತನ, ಹೆಚ್ಚು ಶಿಕ್ಷಕಿಯರ ನೇಮಕ, ಹುಡುಗಿಯರ ಶಾಲೆ ಸ್ಥಾಪನೆ, ಗ್ರಾಮಗಳಲ್ಲೆ ಶಾಲೆಗಳ ಸ್ಥಾಪನೆ, 'ಕಸ್ತೂರಿ ಬಾ ಗಾಂಧಿ ಬಾಲಿಕಾ ವಿದ್ಯಾಲಯ' ಮುಂತಾದ ಯೋಜನೆಗಳಿಂದ ಶಾಲೆಗೆ ಹೆಣ್ಣು ಮಕ್ಕಳ ದಾಖಲಾತಿ ಹೆಚ್ಚಾಗಿದೆ. ವಿಧವೆಯರು ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಸಮಾಜ ಸುಧಾರಕರಾದ ವಿದ್ಯಾಸಾಗರರು ಮಹಿಳಾ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟು ಐದು ಮಹಿಳಾ ವಿದ್ಯಾಲಯಗಳನ್ನು ಆರಂಭಿಸಿದರು ಮಹರ್ಷಿ ಕರ್ವೇಯವರು. ೧೯೦೦ರಲ್ಲಿ ಪುಣೆಯಲ್ಲಿ 'ವಿಧವಾಶ್ರಮ ಅಥವಾ ಅನಾಥ ಬಾಲಿಕಾಶ್ರಮ' ಆರಂಭಿಸಿದರು. ಇದರ ಉದ್ದೇಶದಂತೆ ವಿಧವೆಯರಿಗೆ ಆಶ್ರಮದಲ್ಲಿ ಶಿಕ್ಷಣ ಮತ್ತು ತರಬೇತಿಯನ್ನು ಕೊಡಲಾಗುತ್ತಿತ್ತು.

ಭಾರತದ ಸಂವಿಧಾನವು ಮಹಿಳಾ ಶಿಕ್ಷಣವನ್ನು ಉತ್ತೇಜಿಸಲು ಅನುಚ್ಛೇದ ೪೫ರಲ್ಲಿ ೧೪ವರ್ಷ ಪೂರ್ಣವಾಗುವವರೆಗೆ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಿದೆ. ಶಿಕ್ಷಣ ಎಲ್ಲರ ಸ್ವತ್ತಾಗಬೇಕೆಂಬ ಆಶಯದಿಂದಲೆ ಶಿಕ್ಷಣ ಎಲ್ಲರ 'ಮೂಲಭೂತ ಹಕ್ಕು' ಎಂದು ಘೋಷಿಸಿದೆ. ಈ ಅವಕಾಶಗಳಿಂದ ಮಹಿಳಾ ಶಿಕ್ಷಣ ದಶಕದಿಂದ ದಶಕಕ್ಕೆ ಹೆಚ್ಚಾಗುತ್ತಿದೆ, ೨೦೦೧ರಲ್ಲಿ ೫೪.೧೬% ರಷ್ಟಿದ್ದ ಮಹಿಳಾ ಸಾಕ್ಷರತೆಯ ಪ್ರಮಾಣವು ೨೦೧೧ರ ಜನಗಣತಿ ವೇಳೆಗೆ ೭೪ರಷ್ಟು ವೃದ್ಧಿಸಿದೆ. ಉನ್ನತ ಶಿಕ್ಷಣ ಪಡೆಯುವಲ್ಲಿ ಮಹಿಳಾ ಶಿಕ್ಷಣ ಹಿಂದುಳಿದಿದೆ. ಆದರೂ ಸ್ವಲ್ಪ ಮಟ್ಟಿಗೆ ಸುಧಾರಿಸುತ್ತಿದೆ.

'ಅಕ್ಷರ ಕಲಿತ ಹೆಣ್ಣು ದೇಶದ ಕಣ್ಣು', 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎಂಬ ಮಾತುಗಳು ಸ್ತ್ರೀ ಶಿಕ್ಷಣದ ಅವಶ್ಯಕತೆ ಮತ್ತು ಮಹತ್ವವನ್ನು ತಿಳಿಸುತ್ತದೆ. ಶಿಕ್ಷಣ ಮಹಿಳೆಯರನ್ನು ಸ್ವಾಭಿಮಾನಿ-ಸ್ವಾವಲಂಬಿಗಳನ್ನಾಗಿ ರೂಪಿಸುತ್ತದೆ. ಸ್ವತಂತ್ರ ಚಿಂತನೆ, ಅಭಿವ್ಯಕ್ತಿ, ಆತ್ಮವಿಶ್ವಾಸ, ಆತ್ಮಗೌರವಗಳನ್ನು ಬೆಳೆಸುತ್ತದೆ. ಜೀವಮಾನವಿಡೀ ನಮ್ಮವರೆಲ್ಲ ನಮ್ಮನ್ನು ಬಿಟ್ಟು ಹೋದರು ನಮ್ಮ ಜೊತೆಯಲ್ಲಿದ್ದು ನಮ್ಮ ಕೀರ್ತಿ ಹೆಚ್ಚಿಸುವುದು ಶಿಕ್ಷಣ. ಶಿಕ್ಷಣದಿಂದ ತಮ್ಮ ಜೀವನವನ್ನು ರೂಪಿಸಿಕೊಳ್ಳುವ ಸ್ತ್ರೀ ಪಾತ್ರಗಳು ಇಲ್ಲಿನ ಕಾದಂಬರಿಗಳಲ್ಲಿ ಕಂಡುಬರುತ್ತವೆ. ಪುರುಷ ಪ್ರಧಾನ ವ್ಯವಸ್ಥೆಯ ದಬ್ಬಾಳಿಕೆ, ದೌರ್ಜನ್ಯಗಳಿಗೆ ಒಳಗಾದರು ಶಿಕ್ಷಣ ಪಡೆದು ಅಥವಾ ಪಡೆದಿದ್ದ ಶಿಕ್ಷಣದಿಂದ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುತ್ತಾರೆ. ಇಲ್ಲಿನ ಅನೇಕ ಮಹಿಳೆಯರಿಗೆ ಬದುಕಲು ಶಿಕ್ಷಣ, ಮಾರ್ಗವಾಗುತ್ತದೆ. ಪರಾವಲಂಬಿಗಳಾಗದೆ ಪುರುಷ ರಾಜಕಾರಣದ ವಿರುದ್ಧ ನಿಂತು ಸ್ತ್ರೀಯರ ಮೇಲೆ ಹೇರುವ ಅಮಾನವೀಯ ಕೃತ್ಯಗಳನ್ನು ಧಿಕ್ಕರಿಸಿ ಬದುಕುವ ದಿಟ್ಟತನವನ್ನು ಶಿಕ್ಷಣದಿಂದ ಕಂಡುಕೊಂಡು ಇತರರಿಗೂ ಮಾದರಿಯಾಗಿ ನಿಲ್ಲುತ್ತಾರೆ.

ಶಿಕ್ಷಣದಿಂದ ಆತ್ಮವಿಶ್ವಾಸ, ಆತ್ಮಾಭಿಮಾನ, ಅಭಿವ್ಯಕ್ತಿ ಸಾಮರ್ಥ್ಯ, ಸ್ವ-ಅರಿವು, ಸಕಾರಾತ್ಮಕ ಸ್ವ ಪ್ರತೀಕವನ್ನು ಬೆಳೆಸಿಕೊಂಡ ಅನೇಕ ಹೆಣ್ಣು ಮಕ್ಕಳನ್ನು ಸ.ಉಷಾರವರ 'ಕಸೂತಿ' ಕಾದಂಬರಿಯಲ್ಲಿ ಕಾಣಬಹುದು. ಇಲ್ಲಿನ ಹಲವಾರು ಸ್ತ್ರೀ ಪಾತ್ರಗಳು ವಿದ್ಯೆಯಿಂದಾಗಿ ಸ್ವಾವಲಂಬನೆ, ಸ್ವಾಭಿಮಾನದ ಜೀವನ ಕ್ರಮರೂಪಿಸಿಕೊಳ್ಳುವ ಮೌನಕ್ರಾಂತಿಯ ಒಳಸುಳಿ ಕಾದಂಬರಿಯಲ್ಲಿ ಅಂತರ್ಗತವಾಗಿ ಒಡಮೂಡಿದೆ. ಮೂರು ತಲೆಮಾರಿನ ಜೀವನ ಕ್ರಮ ಬದಲಾದಂತೆ ಸ್ತ್ರೀ ಶಿಕ್ಷಣದಲ್ಲೂ ಬದಲಾವಣೆಗಳು ಈ ಕಾದಂಬರಿಯಲ್ಲಿ ಕಂಡುಬರುತ್ತವೆ. ಮೊದಲ ತಲೆಮಾರಿನವರಲ್ಲಿ ಓದಲು-ಬರೆಯಲು ಬಂದರೆ ಸಾಕೆಂಬಂತೆ ಸ್ತ್ರೀಯರಿಗೆ ಕನಿಷ್ಠ ಮಟ್ಟದ ಶಿಕ್ಷಣ ಮಾತ್ರ ದೊರೆಯುತ್ತಿದ್ದಿತು. ಬಾಲ್ಯ ವಿವಾಹ ಪದ್ಧತಿ ಜಾರಿಯಲ್ಲಿದ್ದರಿಂದ ಮನೆಯ

ಹಿರಿಯರು ಹೆಣ್ಣು ಮಕ್ಕಳ ಮದುವೆ ಮಾಡಿ ಜವಾಬ್ದಾರಿ ಕಳೆದುಕೊಳ್ಳುವತ್ತ ಗಮನ ಹರಿಸಿದ್ದರು. ಎರಡನೇ ತಲೆಮಾರಿನ ವೇಳೆಗೆ ಶಿಕ್ಷಣದ ಹಕ್ಕು ಪುರುಷರ ಸ್ವತ್ತೆಂಬಂತೆ ಈ ಕಾದಂಬರಿಯ ಪುರುಷ ಪಾತ್ರಗಳು ಸ್ವತಂತ್ರವಾಗಿ ಉನ್ನತ ಮಟ್ಟದ ಶಿಕ್ಷಣ ಪಡೆಯುವ ಅವಕಾಶ ಪಡೆದಿದ್ದರು. ಇಲ್ಲಿನ ಸ್ತ್ರೀ ಪಾತ್ರಗಳು ಹಿರಿಯರ ಆದ್ಯತೆಯ ಮೇರೆಗೆ ಉನ್ನತ ಶಿಕ್ಷಣದಿಂದ ವಂಚಿತರಾಗಿ ಕನಿಷ್ಠ ಜೀವನ ರೂಪಿಸಿಕೊಳ್ಳಲು ಸೂಕ್ತವಾದ ಶಿಕ್ಷಣ ಪಡೆಯುತ್ತಿದ್ದರು. ಮೂರನೇ ತಲೆಮಾರಿನ ವೇಳೆಗೆ ಉನ್ನತ ಶಿಕ್ಷಣ ಪಡೆದು ಸ್ವಾವಲಂಬಿ ಜೀವನಕ್ಕೆ ಪಾದಾರ್ಪಣೆ ಮಾಡುವ ಹೆಣ್ಣು ಮಕ್ಕಳ ಧೈರ್ಯ, ದಿಟ್ಟತನ ಕಂಡು ಬರುತ್ತದೆ.

ಹೆಣ್ಣು ಗಂಡಿನ ಆಶ್ರಯದಲ್ಲಿರಬೇಕೆಂಬ ಭಾವನೆ ನಮ್ಮ ಸಮಾಜದಲ್ಲಿ ಬೇರೂರಿದ್ದು, ವಾಸ್ತವದಲ್ಲು ಮುಂದುವರೆದಿದೆ. ಆಶ್ರಯದಾತರು ಬರಿಗೈಯಾದಾಗ ಸಂಸಾರ ಬೀದಿಗೆ ಬರುವಂತಹ ಸಂದರ್ಭಗಳಲ್ಲಿ ಹೆಣ್ಣು ಆಶ್ರಯದಾತೆಯಾಗಿ ಜವಾಬ್ದಾರಿ ಹೊರುವಂಥವಳು ಆಗಿದ್ದಾಳೆ. 'ಕಸೂತಿ' ಕಾದಂಬರಿಯ ಅನೇಕ ಸ್ತ್ರೀ ಪಾತ್ರಗಳು ಅಂಜದೆ, ಅಳುಕದೆ ತಾವು ಪಡೆದಿದ್ದ ವಿದ್ಯೆಯನ್ನು ಅಸ್ತ್ರವಾಗಿ ಬಳಸಿಕೊಂಡು ಸಂಸಾರವೆಂಬ ನೌಕೆ ನಡೆಸುವುದನ್ನು ಮೊದಲನೇ ತಲೆಮಾರಿನವರಾದ ಸರಸ್ವತಿ, ಸೀತೆಯಂತಹವರ ಬಗ್ಗೆ ಮೆಚ್ಚುಗೆ ಹುಟ್ಟಿಸುತ್ತದೆ. ವೆಂಕಣ್ಣನ ಸಿ.ಟಿ.ಸಿ ಕಾಲೇಜು ಅವನತಿಯತ್ತ ಸಾಗಿ ನಷ್ಟವಾದಾಗ ಜೀವನ ಸಾಗಿಸುವುದು ವೆಂಕಣ್ಣ ದಂಪತಿಗೆ ಕಷ್ಟವಾದಂತಹ ಸಂದರ್ಭದಲ್ಲಿ ಸರಸ್ವತಿ ಸಂಸಾರವನ್ನು ನಿಬಾಯಿಸುವ ಚಾಕಚಕ್ಯತೆ ಗೆಳತಿ ಜಯಮ್ಮಳ ಜೊತೆಯಲ್ಲಿ ಮಾಡಿದ್ದ ಮೆಟ್ರಿಕ್‌ನಿಂದ ಸಾಧ್ಯವಾಗುತ್ತದೆ. ಮುಂದೆ ಇವಳ ವಿದ್ಯಾರ್ಹತೆ ಮೇಲೆ ಹೊಲಿಗೆ ಮೇಡಂ ಆಗಿ ಗಂಡನಿಗೆ ಆಸರೆಯಾಗುತ್ತಾಳೆ.

ಸೀತೆಯ ಪತಿ ಊರೂರು ಸುತ್ತುತ್ತ, ಸ್ವಾತಂತ್ರ್ಯ ಹೋರಾಟಗಾರನಾಗಿ ಓಡಾಡುತ್ತ, ಆದಾಯರಹಿತನಾಗಿ ಕಾಲಕಳೆಯುತ್ತಾ, ಬೇಜವಬ್ದಾರಿ ಮನುಷ್ಯನಾಗಿರುತ್ತಾನೆ. ಇದರಿಂದ ಮೂರು ಮಕ್ಕಳ ತಾಯಿಯಾಗಿದ್ದ ಸೀತೆ ಸಂಸಾರವನ್ನು ಸಾಗಿಸುವಂತಹ ಭಾರ ಹೊರ ಬೇಕಾಗುತ್ತದೆ. ಗೆಳತಿ ನಾಗವೇಣಿ ಕಟ್ಟಿದ್ದ ಸಮಾಜಕ್ಕೆ ಹೊಲಿಗೆ ಹೇಳಿಕೊಡುತ್ತಿದ್ದ ಸೀತೆ ಮುಂದೆ 'ಸೀತಾಸದನ'ವೆಂಬ ಸಮಾಜ ಸ್ಥಾಪಿಸುತ್ತಾಳೆ. ಎಲ್.ಎಸ್. ಮಾಡಿ ಶಿಶು ವಿಹಾರದ ಮೇಡಂ ಆಗಿದ್ದವಳು, ಅದೇ ಶಿಶು ವಿಹಾರವನ್ನು ಹೈಸ್ಕೂಲಾಗಿ ಬೆಳೆಸಿ, ಹೆಡ್ ಮೇಡಂ ವೃತ್ತಿಯಲ್ಲಿ ಯಶಸ್ವಿಯಾಗುತ್ತಾಳೆ. ಮುಂದೆ ಡೆಪ್ಯುಟೇಷನ್ ಮೇಲೆ ಬಿ.ಎ.ಬಿ.ಟಿ. ಮಾಡಿ ಉತ್ತಮ ಜೀವನ ನಡೆಸುವಲ್ಲಿ ಯಶಸ್ವಿಯಾಗುತ್ತಾಳೆ.

ಸರಸ್ವತಿ, ಸೀತೆ ತಾವು ಪಡೆದ ಶಿಕ್ಷಣದಿಂದ ಗಂಡನಿಗೆ, ಸಂಸಾರಕ್ಕೆ ಆಶ್ರಯರಾದರೆ ವಿಧವೆಯರಾದ ಜಯಾ ಮತ್ತು ಸಾವಿತ್ರಿಯವರು ಶಿಕ್ಷಣದಿಂದ ಸ್ವಾವಲಂಬಿಯಾಗಿ ಜೀವನ

ನಡೆಸುತ್ತಾರೆ.  ಜಯಾ ಬುದ್ಧಿಹೀನನಂತೆ ತೋರುವವನೊಂದಿಗೆ ಮನೆಯವರ ಇಚ್ಛೆ ಮೇರೆಗೆ ವಿವಾಹವಾಗಬೇಕಾಗುತ್ತದೆ. ಮನಸ್ಫೂರಕವಾಗಿ ಗಂಡನೆಂದು ಒಪ್ಪಿಕೊಳ್ಳಲಾಗದೆ ವಿದ್ಯಾಭ್ಯಾಸ ಮುಂದುವರೆಸುತ್ತಾಳೆ.  ಸಾವಿತ್ರಿ ಗಂಡ ಸತ್ತ ನಂತರ  ತಂದೆಯ ಸಹಾಯದಿಂದ ವಿದ್ಯಾಭ್ಯಾಸದತ್ತ ಆಸಕ್ತಿ ತೋರುತ್ತಾಳೆ. ಒಂದು ಹೆಣ್ಣು ಏಕಾಂಗಿಯಾಗಿ ಸಮಾಜದಲ್ಲಿ ಬದುಕುವುದು ಕಷ್ಟ ಎಂಬುದನ್ನು ಅರಿತ್ತಿದ್ದ ಸಾವಿತ್ರಿ ತಂದೆ ಸಾವಿತ್ರಿಗೆ ಓದುವ ಅವಕಾಶ ಕಲ್ಪಿಸುತ್ತಾರೆ. ಮೆಟ್ರಿಕ್ ಫಸ್ಟ್‌ಕ್ಲಾಸ್ನಲ್ಲಿ ಪಾಸಾಗಿ ಶಿಕ್ಷಕ ತರಬೇತಿ ಕಾಲೇಜಿಗೆ ಸೇರಿ ಉತ್ತಮ ಅಂಕ ಪಡೆದು ಚಾಮರಾಜನಗರದ ಶಾಲೆಯಲ್ಲಿ ಕೆಲಸಕ್ಕೆ ಸೇರುತ್ತಾಳೆ. ನಂತರದಲ್ಲಿ ಡೆಪ್ಯೂಟೇಷನ್ ಮೇಲೆ ಬಿ. ಎ ಪರೀಕ್ಷೆ ಕಟ್ಟಿ ಪಾಸಾಗುತ್ತಾಳೆ.  ಜಯಾ ಗಂಡನ ಮನೆಗೆ ಹೋಗಲಿಚ್ಛಿಸದೆ ಮೆಟ್ರಿಕ್ ಪೂರೈಸಿ ಶಿಶುವಿಹಾರದ ಮೇಡಂ ಆಗುವುದು ಭವಿಷ್ಯದಲ್ಲಿ ಏಕಾಂಗಿಯಾಗಿ ಬದುಕುವುದಕ್ಕೆ ಮಾರ್ಗವಾಗಿರುತ್ತದೆ.

ಹೆಣ್ಣು ಮದುವೆಯಾಗುವವರೆಗೂ ತಂದೆ ಆಶ್ರಯದಲ್ಲಿ, ಮದುವೆಯ ನಂತರ ಗಂಡನ ಆಶ್ರಯದಲ್ಲಿರಬೇಕೆಂಬ ಮನೋಭಾವದವರಾದ ತಂದೆ– ತಾಯಂದಿರು ತಮ್ಮ ಹೆಣ್ಣು ಮಕ್ಕಳನ್ನು ಮದುವೆ ಮಾಡಿ ಜವಾಬ್ದಾರಿ ಕಳೆದುಕೊಳ್ಳುವತ್ತಲೇ ಯೋಚಿಸುತ್ತಿರುತ್ತಾರೆ. ಮದುವೆಯ ನಂತರದ ಜೀವನ ಅವಳ 'ಹಣೆಬರಹ' ಎಂದು ಕೈ ತೊಳೆದುಕೊಳ್ಳುವ ಎಷ್ಟೋ ಕುಟುಂಬದವರು ವಾಸ್ತವದಲ್ಲು ಕಾಣಸಿಗುತ್ತಾರೆ. ಮದುವೆಯ ನಂತರವೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ವಿದ್ಯಾಭ್ಯಾಸ ಮುಂದುವರೆಸಿ ಹೆಣ್ಣು ಸ್ವತಂತ್ರವಾಗಿ, ಸ್ವಾವಲಂಬಿಯಾಗಿ ಬದುಕಬಲ್ಲಳು ಎಂಬುದನ್ನು ಜಯಾ ಮತ್ತು ಸಾವಿತ್ರಿ ಪಾತ್ರಗಳು ತೋರಿಸಿಕೊಟ್ಟಿವೆ.

ಎರಡನೇ ತಲೆಮಾರಿನವರಾದ ಸ್ವರ್ಣಾ ಸೀನಿಯರ್ ಇಂಟರ್ ಓದಿದ್ದು ಪತಿಯ ಮೇಲೆ ಅವಲಂಬಿತಳಾಗದೆ ಶಿಕ್ಷಕಿ ವೃತ್ತಿ ಪಡೆದು ವೃದ್ಧರಾದ ತಂದೆ– ತಾಯಿಗೆ ಆಸರೆಯಾಗುತ್ತಾಳೆ. ತನ್ನ ಮಕ್ಕಳಿಗೂ ಉತ್ತಮ ಶಿಕ್ಷಣ ಕೊಡಿಸುತ್ತಾಳೆ. ಎರಡನೇ ತಲೆಮಾರಿನ ವೇಳೆಗೆ ಪ್ರತಿಯೊಂದು ಹೆಣ್ಣು ಓದುವಲ್ಲಿ ಆಸಕ್ತಿ ಹೊಂದಿದ್ದು ಮಾತ್ರವಲ್ಲದೆ, ಶಿಕ್ಷಣದಿಂದ ಉನ್ನತ ಸ್ಥಾನಕ್ಕೇರಿ ನಿಲ್ಲುತ್ತಾರೆ. ಸ್ವರ್ಣಾಳ ಗೆಳೆತಿಯರಾದ ರುಕ್ಮಿಣಿ ಎಂ.ಎ., ಮೀರಾ–ಎಂ.ಬಿ.ಎ ಮಾಡಿದ್ದರೆ, ಅಂಬಿಕಾ–ಬಿ.ಎ ವ್ಯಾಸಂಗ ಮಾಡಿ ಕಥೆ–ಕಾದಂಬರಿಗಳ ಮೂಲಕ ಜನಪ್ರಿಯಳಾಗಿದ್ದಾಳೆ.  ಗಾಯತ್ರಿ–ಹಿಂದಿ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದ ಮಾಡುವುದರಲ್ಲಿ ಹೆಸರು ಮಾಡಿದ್ದಾಳೆ.

ಎರಡನೇ ತಲೆಮಾರಿನವರಲ್ಲಿ ಶಿಕ್ಷಣ ಪಡೆಯುವಲ್ಲಿ ಸುಧಾರಣೆ ಕಂಡು ಬರುತ್ತಾದರು ಉನ್ನತ ವ್ಯಾಸಂಗಕ್ಕೆ ಪ್ರೋತ್ಸಾಹವಿರಲಿಲ್ಲ. ಹೆಣ್ಣು ಮಕ್ಕಳು ಮುಕ್ತವಾಗಿ ಶಿಕ್ಷಣ ಪಡೆಯಲು ಇದ್ದ ಅಡ್ಡಗೋಡೆ ಎಂದರೆ ಕಾಲೇಜು ಶಿಕ್ಷಣ. ಆಕೆಗೂ ಮನಸ್ಸಿದೆ, ಸ್ವಾತಂತ್ರ್ಯವಿದೆ, ತನ್ನ ಜೀವನವನ್ನು ರೂಪಿಸಿಕೊಳ್ಳುವ ಹಕ್ಕಿದೆ. ಎಂಬ ಅರಿವೂ ಇಲ್ಲದೆ ವಿದ್ಯೆ ಕಲಿಯುವ ಹೆಣ್ಣು ಮಕ್ಕಳನ್ನು ನಮ್ಮ ಸಮಾಜ ನೋಡುವ ದೃಷ್ಟಿಕೋನವೆ ಬದಲಾಗಿ ಬಿಟ್ಟಿದೆ. ಶಾಂತಮ್ಮಣ್ಣಿ ಎಂಬ ಅರಸು ಮನೆತನದ ಹೆಣ್ಣು ಎಂ.ಎ ವ್ಯಾಸಂಗ ಮಾಡಿ ಅಂತರ್ಜಾತಿ ವಿವಾಹವಾಗುವುದರ ಮೂಲಕ ಸಮಾನತೆಯನ್ನು ಮೆರೆದರೆ "ಶಾಂತಮ್ಮಣ್ಣಿ ಬೇರೆ ಜಾತಿಯ ಹುಡುಗನನ್ನು ಮದುವೆಯಾಗಿದ್ದು ಅವಳು ಬಿ.ಎ ಆನರ್ಸ್ ಮಾಡಿ ಎಂ.ಎ ಮಾಡಿದ್ದಕ್ಕೆ"[೫] ಎಂಬ ಅಮಾನುಷ ವರ್ತನೆಯ ಮಾತುಗಳು ಕೇರಿಯಲ್ಲಿನ ಅವಿದ್ಯಾವಂತ ಜನರಿಂದ ಕೇಳಿಬರುತ್ತದೆ. 'ಹೆಣ್ಣು ಮಕ್ಕಳನ್ನು ಕಾಲೇಜಿಗೆ ಕಳುಹಿಸಬಾರದು, ಅವಳು ಯಾವನೊ ಹಿಂದೆ ಓಡಿ ಹೋಗುತ್ತಾಳೆ' ಇಂತಹ ಮಾತುಗಳು ಇವತ್ತಿಗು ನಿಂತಿಲ್ಲ. 'ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ' ಎಂಬ ಗಾದೆ ಮಾತಿನಂತೆ ಕಲಿಯುವ ಆಸೆ ಇರುವ ಹೆಂಗಳೆಯರು ಶಿಕ್ಷಣ ವಂಚಿತರಾಗಿ ಬದುಕಬೇಕಾಗಿದೆ. ಮೊದಲಿಗೆ ಹೆಣ್ಣಿನ ಮೇಲಿರುವ ಇಂತಹ ಆಪಾದನೆಗಳು ನಿಲ್ಲಬೇಕು. ಶಿಕ್ಷಣ ವಿವೇಕವನ್ನು ನೀಡುತ್ತದೆ. ಆ ಮಾರ್ಗದಲ್ಲಿ ಯೋಚಿಸುವ ಪರಿ ಸಮಾಜದಲ್ಲಿ ಬೆಳೆಯಬೇಕಿದೆ.

ಮೂರನೆ ತಲೆಮಾರಿಗೆ ಉನ್ನತ ಶಿಕ್ಷಣ ಪಡೆದು ತಮ್ಮ ಜೀವನವನ್ನು ಕಟ್ಟಿಕೊಳ್ಳುವ ಧೈರ್ಯ, ದಿಟ್ಟತನ ಹೆಣ್ಣು ಮಕ್ಕಳಲ್ಲಿ ಕಂಡುಬರುತ್ತದೆ. ಎಂ.ಎ. ಸಾಹಿತ್ಯ ಓದಿರುವ ವೀಣಾ ತನ್ನಂತೆಯೇ ಸಾಹಿತ್ಯ ಓದಿದವನನ್ನು ಬಾಳ ಸಂಗತಿಯಾಗಿ ಪಡೆಯಲು ಎಲ್ಲರ ಅನುಮತಿಯನ್ನು ದಕ್ಕಿಸಿಕೊಳ್ಳುತ್ತಾಳೆ. ಡಾಕ್ಟರ್ ಆಗುವ ಕನಸು ಹೊತ್ತವಳು ವಿದ್ಯಾ. ಅಣ್ಣನಿಗೆ, ಅಮ್ಮನಿಗೆ ಚಿಕ್ಕಂದಿನಿಂದಲೇ ಸಲಹೆ–ಸೂಚನೆ ನೀಡುತ್ತಿರುತ್ತಾಳೆ. 'ಕಾಫಿ ಕುಡಿಬೇಡ ಕಾಫೀಲಿ ಕೆಫೇನ್ ಎಂಬ ವಿಷವಸ್ತು ಇರುತ್ತೆ', 'ಸೊಪ್ಪನ್ನು ಹಚ್ಚುವಾಗ ತೊಳೆದು ಹಚ್ಚಬೇಕು, ಹಚ್ಚಿ ತೊಳೆಯಬಾರ್ದು ಅದರೊಳಗಿನ ಜೀವಸತ್ವ ಎಲ್ಲಾ ಹೋಗಿ ಬಿಡುತ್ತೆ' ಎನ್ನುತ್ತ ತುಂಟತನದಿಂದ ಎಲ್ಲರನ್ನು ಪೀಡಿಸುತ್ತಿದ್ದ ವಿದ್ಯಾ ಡಾಕ್ಟರ್ ಆಗುತ್ತಾಳೆ. ತನ್ನಂತೆ ಡಾಕ್ಟರ್ ಆಗಿದ್ದ ಗೆಳೆಯನೊಂದಿಗೆ ಅಂತರ್ಜಾತಿ ವಿವಾಹವಾಗುವ ಮೂಲಕ ಅಜ್ಜಿಯ ಕಾಲದ ಅಂಧಶ್ರದ್ಧೆಯನ್ನು ಕಿತ್ತೆಸೆದು ನವ ಸಮಾಜದ ಮೂರ್ತಿಯಾಗಿದ್ದಾಳೆ.

ಉನ್ನತ ವ್ಯಾಸಂಗ ಪಡೆದ ವೀಣಾ, ಕಲಾ ಇವರಿಗಿಂತ ವಿದ್ಯಾ ವಿಭಿನ್ನವಾಗಿ ನಿಲ್ಲುತ್ತಾಳೆ. ಮೂರನೆ ಬಿ.ಕಾಂನಲ್ಲಿ ಎರಡು ವಿಷಯಗಳಲ್ಲಿ ಅನುತ್ತೀರ್ಣಳಾಗಿದ್ದರು ಸುಮ್ಮನೆ ಕೂರಲಿಲ್ಲ. ತನ್ನ

'ವಿದ್ಯಾಜ್ಞಾನ'ದಿಂದ ಶ್ರೀಲತಾ–ಮಾಲಿನಿಯರ ಸಹಾಯ ಪಡೆದು ಬ್ಯಾಂಕ್‌ಲೋನ್‌ನಿಂದ 'ಲಾವಣ್ಯ ಮ್ಯಾಚಿಂಗ್ ಸೆಂಟರ್', ಎಂಬ ಅಂಗಡಿ ಮಾಲೀಕಳಾಗಿ ಸ್ವಉದ್ಯೋಗ ಪ್ರಾರಂಭಿಸುವ ಮೂಲಕ ಜೀವನ ರೂಪಿಸಿಕೊಳ್ಳುತ್ತಾಳೆ.

ಈ ಕಾದಂಬರಿಯಲ್ಲಿ ವಿದ್ಯೆ ಪಡೆದ ಹೆಣ್ಣಿನ ಜ್ಞಾನ ವಿಸ್ತಾರಗೊಳ್ಳುತ್ತದೆ ಎಂಬುದು ಬಿಂಬಿತವಾಗಿದೆ. ಸ್ವಾಭಿಮಾನದಿಂದ ಬದುಕುವ ಎದೆಗಾರಿಕೆ ಎದ್ದು ಕಾಣುತ್ತದೆ. "ಮಿಷನ್ ಸ್ಕೂಲಿನಲ್ಲಿ ಏಬಿಸೀಡಿ ಓದಿದೋರೆಲ್ಲ ಉಪಾದ್ರ ಮನೇಲಿ ಸಂಸಾರ ಮಾಡ್ತಾರ್ಯೇ"[೬] ಎಂಬ "ಸಾಂಪ್ರದಾಯಿಕ ರೂಢಿಮಾತು, ನಂಬಿಕೆಗಳಿಗೆ ಸವಾಲೆಸೆಯುವಂತೆ ಇಲ್ಲಿ ಬಾಳು ಬದುಕುವ ಸರಸ್ವತಿ, ಸ್ವರ್ಣಾ, ಮೀರಾ, ಸೀತಾ, ವೀಣಾ, ವಿದ್ಯಾ, ಕಲಾ ಮುಂತಾದ ಎಲ್ಲ ಪಾತ್ರಗಳು ವಿದ್ಯೆಯ ಪ್ರಾಮುಖ್ಯತೆಯನ್ನು ಬಿಂಬಿಸುವವರು."[೭] ಪ್ರತಿಯೊಬ್ಬರಿಗೂ ಶಿಕ್ಷಣದ ಮೇಲಿದ್ದ ಒಲವು–ಆಸಕ್ತಿ ಎಂತಹ ಸನ್ನಿವೇಶಗಳಲ್ಲು ಮತ್ತೊಬ್ಬರ ಆಶ್ರಯದಲ್ಲಿರದೆ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಹಂತ–ಹಂತವಾಗಿ ಮೇಲಕ್ಕೇರುತ್ತ ಸಮಾಜದಲ್ಲಿ ಭದ್ರ ನೆಲೆಯನ್ನು ಶಿಕ್ಷಣದಿಂದ ಕಂಡುಕೊಳ್ಳುತ್ತಾರೆ. 'ಅಕ್ಷರಸ್ಥ ನಾರಿ ಸಮಾಜಕ್ಕೆ ಮಾದರಿ' ಎಂಬಂತೆ ಇಲ್ಲಿನ ಸ್ತ್ರೀ ಪಾತ್ರಗಳು ಗೋಚರಿಸುತ್ತವೆ. ಸ.ಉಷಾರವರ 'ಕಸೂತಿ' ಕಾದಂಬರಿಯಲ್ಲಿ ಸ್ತ್ರೀಯರು ಅನುಭವಿಸಿದ ವೇದನೆಗಳು ಅವರು ಛಲವಂತಿಕೆಯಿಂದ ಎತ್ತರಕ್ಕೆ ಏರಿದ ಅಂಶಗಳನ್ನು ನಿರೂಪಿಸಿದ್ದಾರೆ.

'ಕಸೂತಿ' ಕಾದಂಬರಿಯಲ್ಲಿ ಬರುವ ಜಯಾ ಮತ್ತು ಸಾವಿತ್ರಿಯಂತೆ ವಿಧವೆಯಾದ ನಂತರ ವಿದ್ಯಾಭ್ಯಾಸ ಪಡೆದು ಪ್ರಬುದ್ಧಳಾಗುವುದನ್ನು ತ್ರಿವೇಣಿಯವರ 'ಹಣ್ಣೆಲೆ ಚಿಗುರಿದಾಗ' ಕಾದಂಬರಿಯಲ್ಲಿ ಮಾಲತಿ ಪಾತ್ರದಲ್ಲಿ ನಿರೂಪಿತಗೊಂಡಿದೆ. ವಕೀಲ ವೃತ್ತಿಯಲ್ಲಿರುವ ರಾಯರು ಐದು ಜನ ಗಂಡು ಮಕ್ಕಳಿಗೂ ಉನ್ನತ ವಿದ್ಯಾಭ್ಯಾಸ ಕೊಡಿಸುತ್ತಾರೆ. ಡಾಕ್ಟರ್, ಲಾಯರ್, ಇಂಜಿನಿಯರಿಂಗ್‌ನಂತಹ ಉದ್ಯೋಗಗಳನ್ನು ಗಂಡು ಮಕ್ಕಳು ಪಡೆಯುತ್ತಾರೆ. ಒಬ್ಬಳೇ ಮಗಳಾದ ಮಾಲತಿಗೆ ಎಸ್.ಎಸ್.ಎಲ್.ಸಿ ಓದಿಸಿ ಕಾಲೇಜಿಗೆ ಕಳುಹಿಸಲು ನಿರಾಕರಿಸುತ್ತಾರೆ. "ಅವಳು ಕಾಲೇಜಿಗೆ ಹೋಗಿ ಮೇಡಮ್ಮಾಗಬೇಕೆ? ಹುಡುಗಿ ಬಿಸಿಲು, ಗಾಳಿಯಲ್ಲಿ ಅಲೆದು ಸೊರಗುತ್ತಾಳೆ".[೮] ಎಂಬ ಮಾತು ಮಗಳ ಮೇಲಿನ ಅತಿಯಾದ ಪ್ರೀತಿ ಎಂದು ಕಂಡುಬಂದರೂ ರಾಯರ ಅಂತಃ ಸತ್ವದಲ್ಲಿರುವ  ಅಂಧತೆ, ಅಧಿಕಾರತ್ವಗಳು ಕಂಡುಬಂದಿವೆ.

ಬ್ರಾಹ್ಮಣ ಕುಟುಂಬದ ಸಾಂಪ್ರದಾಯಿಕ ಆಚರಣೆಗಳನ್ನು ಮೈಗೂಡಿಸಿಕೊಂಡು ತಪ್ಪದೇ ಆಚರಿಸುತ್ತಿರುವ ರಾಯರ ಮಾತುಗಳಿಗೆ ವಿರುದ್ಧವಾಗಿ ಮಾಲತಿ ಎಂದೂ ನಡೆದುಕೊಂಡವಳಲ್ಲ. ಹಳೆಯ ಸಂಸ್ಕೃತಿಗೆ ಒಗ್ಗಿಕೊಂಡಿರುವ ರಾಯರು ಆಧುನಿಕ ಜೀವನಕ್ಕೆ ಹೊಂದಿಕೊಳ್ಳುವ ಪ್ರಯತ್ನ

ಮಾಡುವುದಿಲ್ಲ. ಹೆಣ್ಣೆಂದರೆ ಪರಾವಲಂಬಿ, ಗಂಡಿನ ಆಶ್ರಯದಲ್ಲಿರಬೇಕಾದವಳು ಎಂಬ ಮನೋಭಾವ ತಂದೆಯಿಂದ ಕಲಿತ ಪಾಠ ಮಾಲತಿಯ ಮನಸ್ಸಿನಲ್ಲಿ ಬೇರೂರಿಬಿಟ್ಟಿತ್ತು. ಎಸ್.ಎಸ್.ಎಲ್.ಸಿ ವ್ಯಾಸಂಗ ಮಾಡಿದ್ದ ಮಾಲತಿಯ ಜ್ಞಾನವು ಬಾವಿಯೊಳಗಿನ ಕಪ್ಪೆಯಂತೆ ತಂದೆಯ ಅಭಿಪ್ರಾಯಗಳಿಗೇ ಸೀಮಿತವಾಗಿ ಬಿಟ್ಟಿತ್ತು. ಅಚಾತುರ್ಯವೆಂಬಂತೆ ಸಂಸಾರಕ್ಕೆ ಕಾಲಿಟ್ಟ ಏಳು ತಿಂಗಳೊಳಗೆ ಪತಿಯ ಮರಣದಿಂದ ಕಂಗೆಡುತ್ತಾಳೆ. ಅಲ್ಲಿಗೆ ಜೀವನ ಮುಗಿಯಿತು ಎಂದುಕೊಳ್ಳುವಷ್ಟರಲ್ಲಿ ಅವಳ ಜೀವನ ಪ್ರಾರಂಭವಾಗುವುದೇ ಕಾಲೇಜಿಗೆ ಸೇರಿದ ನಂತರ.

ಶಿಕ್ಷಣವನ್ನು ಕೇವಲ ಉದ್ಯೋಗಪೇಕ್ಷವಾಗಿ ನೋಡದೆ ಹೊಸ ಭಾವನೆಗಳನ್ನು ಸೃಷ್ಟಿಸಿಕೊಳ್ಳಲು ಹೊಸ ಮನುಷ್ಯತ್ವ ಪಡೆಯಲು ಸಾಧ್ಯವಾಗುವಂತೆ ಲೇಖಕಿ ಚಿತ್ರಿಸಿದ್ದಾರೆ. ಸಂಪ್ರದಾಯವಾದಿ ರಾಯರು "ಡಿಗ್ರಿ ತಗೊಂಡು ಅವಳೇನು ಮಾಡಬೇಕು? ಮಾಲತಿ ಕೆಲಸಕ್ಕೆ ಸೇರುವುದು ಖಂಡಿತವಾಗಿಯೂ ಇಷ್ಟವಿಲ್ಲ"[೯] ಎಂಬ ಮಾತಿಗೆ "ಡಿಗ್ರಿ ತೊಗೊಂಡ ಮಾತ್ರಕ್ಕೆ ಕೆಲಸಕ್ಕೆ ಸೇರಲೇಬೇಕೆಂಬುದೇನೂ ಇಲ್ಲ. ಮೊದಲು ಅವಳು ಕಾಲೇಜು ಸೇರಿ ವಿದ್ಯಾಭ್ಯಾಸ ಮುಗಿಸಲಿ. ಮುಂದಿನ ಮಾತು ಈಗಿನಿಂದ ಆಡುವ ಧೈರ್ಯ ನಮಗಿಲ್ಲ"[೧೦] ಎಂದು ಉತ್ತರಿಸುವ ಆಧುನಿಕ ವಯಸ್ಸಿಗರ ಸ್ತ್ರೀಪರವಾದ ಮಾತುಗಳು ವಿದ್ಯಾಭ್ಯಾಸ ಪಡೆದ ಮಾಲತಿ ಸಮಾಜ ಹೇರಿರುವ ಆಚರಣೆಗಳನ್ನು ಧಿಕ್ಕರಿಸುತ್ತಾಳೆಂಬ ನಂಬಿಕೆಯ ಮಾತುಗಳಾಗಿವೆ.

ಮಾಲತಿ ಕಾಲೇಜಿಗೆ ಸೇರಿದ ಪ್ರಾರಂಭದಲ್ಲಿ ಸಂಕೋಚಪಡುತ್ತಾಳೆ. ತರುವಾಯ ಅಲ್ಲಿನ ಪರಿಸರಕ್ಕೆ ಹೊಂದಿಕೊಳ್ಳುತ್ತಾಳೆ. ಕಾಲೇಜಿನ ಶಿಕ್ಷಣದಿಂದ ಅವಳ ಮುದುಡಿದ ಮನಸ್ಸು ಮತ್ತೆ ಅರಳುವಂತಾಗುತ್ತದೆ. "ಹಿಂದಾದುದನ್ನು ನೆನೆದು ದುಃಖಿಸುತ್ತಾ ಕುಳಿತುಕೊಳ್ಳುವುದಕ್ಕಿಂತಲೂ ಆದದ್ದು ಆಗಿ ಹೋಯಿತು. ಈಗ ಕಲಿಯಬೇಕು ಎನ್ನುವ ಕೆಚ್ಚು ಅವಳಲ್ಲಿ ಒಡೆದು ಮೂಡತೊಡಗಿತು"[೧೧] ಎನ್ನುವಲ್ಲಿ ಶಿಕ್ಷಣ ಧನಾತ್ಮಕ ಭಾವನೆ ಬೆಳೆಸುತ್ತದೆ. ಅದಕ್ಕೆ ಮಾಲತಿಯ ಆಲೋಚನೆಗಳೇ ಸಾಕ್ಷಿಯಾಗಿವೆ. "ತಾನು ವಿದ್ಯಾವತಿಯಾದಂತೆಯೂ, ದೊಡ್ಡ ಉದ್ಯೋಗ ಮಾಡಿ ತನ್ನಂತೆ ಅಸಹಾಯಕರಾಗಿರುವ ಹೆಂಗಸರಿಗೆ ಸಹಾಯ ಮಾಡಿದಂತೆಯೂ"[೧೨] ಯೋಚಿಸುವ ಪರಿ ಶಿಕ್ಷಣದಿಂದ ಒಂದು ಹೆಣ್ಣಿನಲ್ಲಿ ಆದ ಮನಃಪರಿವರ್ತನೆಯ ಹಂಬಲವನ್ನು ಒಳಗೊಂಡಿದೆ. ಅಬಲೆಯಾದವರಿಗೆ ಸಹಾಯಮಾಡಬೇಕೆಂಬ ಮನೋಭಾವ ಶಿಕ್ಷಣದಿಂದ ಉಂಟಾಗಿರುವುದನ್ನು ಹೇಳುತ್ತದೆ. ಅದರಂತೆ ಮಾಲತಿಯಲ್ಲೂ ಕಾಲೇಜು ಸೇರಿದ ವರ್ಷದೊಳಗೆ ಬದುಕುವ ಆತ್ಮವಿಶ್ವಾಸ, ಆತ್ಮಾಭಿಮಾನ ಬೆಳೆಯುತ್ತದೆ ಮತ್ತು ಪ್ರಬುದ್ಧ ಚಿಂತಕಿಯಾಗಿ ಕಂಡುಬರುತ್ತಾಳೆ. ಎಷ್ಟರಮಟ್ಟಿಗೆ

ಎಂಬುದು ಅಣ್ಣನ ಅಂತರ್ಜಾತಿ ವಿವಾಹವನ್ನು ಪ್ರೋತ್ಸಾಹಿಸುವ ವಿಶಾಲ ಹೃದಯದಲ್ಲಿಯೇ ಅರಿವಾಗುತ್ತದೆ.

ಆನಂತರ ತಂದೆಯ ಆಚರಣೆ, ಸಂಪ್ರದಾಯಗಳಿಗೆ ಒಗ್ಗಿಕೊಂಡಿದ್ದ ಮಾಲತಿ ಶಿಕ್ಷಣದ ಜ್ಞಾನದಿಂದ ಆಧುನಿಕ ಜೀವನದ ಸತ್ಯ ಅರಿತುಕೊಂಡಳು. ಹಿಂದಿನ ಸಂಸ್ಕೃತಿಗಳಿಗೆ ಒಗ್ಗಿಕೊಂಡಿರುವ ತಂದೆಯ ಮಾನಸಿಕ ತೊಳಲಾಟವನ್ನು ಅರಿತಳು. ವಿದುರನಾದ 'ಪ್ರಸಾದ್'ನೊಂದಿಗೆ ಪ್ರೇಮಾಂಕುರವಾಗಿ ವಿವಾಹದವರೆಗೆ ನಿಂತಾಗ ತಂದೆಯ ಮನಸ್ಸಿಗೆ ನೋವುಂಟುಮಾಡದೆ ಮುಳ್ಳನ್ನು ಮುಳ್ಳಿನಿಂದಲೇ ತೆಗೆಯುವಂತೆ ಮೌನದಿಂದಲೇ ತಂದೆಯ ಮನಸ್ಸನ್ನು ಗೆಲ್ಲುತ್ತಾಳೆ. ವಿಧವೆಯಾಗಿ ಮನೆಯಲ್ಲೇ ಕುಳಿತು ಆ ನೋವಿನಲ್ಲೇ ಬೆಂದುಹೋಗದೆ ಶಿಕ್ಷಣ ಪಡೆದು ಹೊಸ ಬದುಕು ಕಟ್ಟಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾಳೆ.

ಈ ಕಾದಂಬರಿಯಲ್ಲಿ ಕಂಡುಬರುವ ನಿರೂಪಿತ ಪಾತ್ರದ ಹೆಸರುಗಳು ದೈನಂದಿನ ಆಗುಹೋಗುಗಳನ್ನು ಅವಲಂಬಿಸಿವೆ. ಸ್ತ್ರೀ ಪಡುವ ಪರಿಪರಿಯಾದ ಸಂಕಷ್ಟಗಳನ್ನು ಲೇಖಕಿ ನಿರೂಪಿಸಿರುವುದು ಔಚಿತ್ಯಪೂರ್ಣವಾಗಿದೆ. ಸ್ತ್ರೀಯರು ಉನ್ನತ ಶಿಕ್ಷಣ ಪಡೆದಷ್ಟು ಹೆಣ್ಣಿನಲ್ಲಿ ವಿವೇಕತನ ಬೆಳೆಯುತ್ತಾ ಹೋಗುತ್ತದೆ. ಪರಿಸ್ಥಿತಿಗೆ ಮಣಿದು ತಪ್ಪುಹಾದಿ ತುಳಿದರು ಕೊನೆಗೆ ವಿವೇಕದಿಂದ ಹೊರಬರುವ ಆತ್ಮಸ್ಥೈರ್ಯ ವೀಣಾ ಶಾಂತೇಶ್ವರ ಅವರ 'ಗಂಡಸರು' ಕಾದಂಬರಿಯ ಶಾಂತಿ ಪಾತ್ರದಲ್ಲಿ ಕಾಣುತ್ತದೆ. ಇವಳಲ್ಲಿ ಮುಗ್ಧತೆ ಕಂಡರೂ ಪ್ರಗತಿಪರ ಚಿಂತನೆಗಳು ಚಿಕ್ಕಂದಿನಿಂದಲೇ ಬೆಳೆದಿದ್ದವು. ಓದಿನಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದ ಶಾಂತಿ ಮೊದಲ ಪ್ರೇಮಿ ಶಂಕರನಂತೆ ಟೆಕ್ನಾಲಜಿ ಕಲಿಯಬೇಕೆಂಬ ಆಸೆ ಶಾಲಾ ಹಂತದಲ್ಲೇ ಚಿಗುರೊಡೆದಿರುತ್ತದೆ. ಓದುವುದು ಮಾತ್ರ ಇವಳ ಗುರಿಯಾಗಿರುವುದಿಲ್ಲ. ರ್‍ಯಾಂಕ್ ಪಡೆಯಬೇಕೆಂಬುದು ಕೂಡ ಇವಳ ಹಠವಾಗಿದ್ದಿತ್ತು.

ಶಾಂತಿ ಕಾಲೇಜಿನ ಶಿಕ್ಷಣದಿಂದ ಮತ್ತಷ್ಟು ಪ್ರಬುದ್ಧಳಾಗುತ್ತಾಳೆ. ಸ್ತ್ರೀಪರವಾದಿಯಾಗಿ ಹೋರಾಡುವ ನಿಜ ಸ್ವರೂಪದ ಹೆಣ್ಣಾಗಿ ಗೋಚರಿಸುತ್ತಾಳೆ. 'ಸ್ತ್ರೀ ಸ್ವಾತಂತ್ರ್ಯ' ಕುರಿತಂತಹ ಪುಸ್ತಕಗಳನ್ನು ಓದುವುದು. ಭಾಷಣಗಳನ್ನು ಕೇಳುವುದು, ಸ್ತ್ರೀ ಸಮಾನತೆ ಕುರಿತಂತೆ ಚರ್ಚಿಸುವುದು ಈ ರೀತಿಯ ಪ್ರಗತಿಗಾಮಿ ಆಲೋಚನೆಗಳು ಬೆಳೆದು ಜ್ಞಾನದ ಜೊತೆಗೆ ಧೈರ್ಯವನ್ನು ವೃದ್ಧಿಸಿಕೊಂಡಿದ್ದು ಬದುಕಿನಲ್ಲಿ ದೃಢ ನಿರ್ಧಾರ ತೆಗೆದುಕೊಳ್ಳುವ ಆತ್ಮಸ್ಥೈರ್ಯ ಅವಳಲ್ಲಿ ಕಾಣುತ್ತದೆ.

ಶಂಕರನಾದಿಯಾಗಿ ಪ್ರೊಫೆಸರ್ ಮಠದ, ರಮಾಕಾಂತ ಸಿಂಧೆ, ಜಾನ್ ಅಶೋಕ್‌ಕುಮಾರ್ ಇವರುಗಳ 'ಸ್ತ್ರೀಸಮಾನತೆ'ಯೆಂಬ ಮೋಡಿಯ ಮಾತುಗಳಿಗೆ ಮರುಳಾಗಿ ಬಲಿಪಶುವಾಗುವ ಶಾಂತಿಗೆ ವಿವೇಕ ಎಚ್ಚರಿಸುತ್ತಿದ್ದರು ಪರಿಸ್ಥಿತಿ-ಸಂದರ್ಭಗಳು ಅವಳನ್ನು ಬಲಿತೆಗೆದುಕೊಳ್ಳುತ್ತವೆ. ಪ್ರಸ್ತುತದಲ್ಲಿ ಪ್ರೀತಿ ಮಾಡುವವರ ಸಂಖ್ಯೆ ಹೆಚ್ಚಾಗಿದ್ದು ಪ್ರೀತಿಯನ್ನು ಉಳಿಸಿಕೊಳ್ಳಲಾಗದೆ ಮೋಸ ಮಾಡುವವರ ಸಂಖ್ಯೆಯೂ ಹೆಚ್ಚಾಗಿದೆ. ಪ್ರೀತಿಯಿಂದ ಮೋಸಕ್ಕೊಳಗಾದ ಎಷ್ಟೋ ಹೆಣ್ಣುಮಕ್ಕಳು ಧೈರ್ಯದಿಂದ ಬದುಕಲಾಗದೆ ಮಾನ-ಮರ್ಯಾದೆ ಎಂದು ಯೋಚಿಸಿ ಪ್ರಾಣ ತೆಗೆದುಕೊಳ್ಳುವವರೇ ಹೆಚ್ಚು. ಅವರಲ್ಲಿ ವಿದ್ಯಾವಂತ ಹೆಣ್ಣುಮಕ್ಕಳಿಗಿಂತ, ಅವಿದ್ಯಾವಂತ ಹೆಣ್ಣುಮಕ್ಕಳು ಹೆಚ್ಚಾಗಿ ಬಲಿಯಾಗುತ್ತಿದ್ದಾರೆ. ಕಾದಂಬರಿಯ ಶಾಂತಿಯು ಪುರುಷರ ಪ್ರೀತಿಯ ಮಾತುಗಳಿಗೆ ಮೋಸಹೋದರೂ ಅವರ ದಬ್ಬಾಳಿಕೆ-ದೌರ್ಜನ್ಯ ಸಹಿಸಿಕೊಂಡು ಅವರ ಹಂಗಿನಲ್ಲಿರಲು ಇಷ್ಟಪಡದೆ ಸ್ವಾವಲಂಬಿಯಾಗಿ ಬದುಕುವತ್ತ ಹೆಜ್ಜೆ ಹಾಕುತ್ತಾಳೆ. ಒಬ್ಬೊಬ್ಬ ಪುರುಷರಿಂದಲೂ ಮೋಸ ಹೋದಾಗ ಸಾಯುವ ಆಲೋಚನೆಗಳನ್ನು ಮಾಡುವುದಿಲ್ಲ. ಶಾಂತಿಯ ಈ ದೃಢ ನಿರ್ಧಾರಕ್ಕೆ ಅವಳಲ್ಲಿದ್ದ ವಿವೇಕತನ ಕಾಣುತ್ತದೆ.

ಶಾಂತಿ ಪಾತ್ರದಂತೆ ಸ್ತ್ರೀಪರ ಕಾಳಜಿ ಹೊಂದಿರುವ 'ಗೀತಾ', ಎಚ್.ಎಸ್.ಪಾರ್ವತಿಯವರ 'ಜಬಾಲಾ' ಕಾದಂಬರಿಯ ನಾಯಕಿ. ಸಂಪ್ರದಾಯ, ಆಚಾರ-ವಿಚಾರ, ನಂಬಿಕೆಗಳಿಗೆ ಬಲಿಯಾಗದೆ ಜೀವನದ ವಾಸ್ತವತೆಯೆಡೆಗೆ ಚಿಂತಿಸುವ ಹೆಣ್ಣು. ಅವಳ ಈ ವ್ಯಕ್ತಿತ್ವಕ್ಕೆ ತಂದೆಯ ಶಿಕ್ಷಣ ನೀತಿ ಮತ್ತು ಎಂ.ಎ. ವ್ಯಾಸಂಗ ಕಾರಣೀಭೂತವಾಗಿದೆ. ಗೀತಾಳ ತಂದೆ ಆಧುನಿಕ ಜೀವನಕ್ಕೆ ಒಗ್ಗಿಕೊಂಡಿದ್ದವರು. ಅವರು ಮಗಳನ್ನು ಗಂಡು ಮಗುವಿನಂತೆ ಬೆಳೆಸಿ ಸಂಪೂರ್ಣ ಸ್ವಾತಂತ್ರ್ಯ ನೀಡುವ ಮೂಲಕ ಪುರುಷಪ್ರಧಾನ ವ್ಯವಸ್ಥೆಯ ಅನ್ಯಾಯದ ಎಳೆಗಳನ್ನು ಸೂಕ್ಷ್ಮವಾಗಿ ಅರಿವು ಮೂಡಿಸುತ್ತಿರುತ್ತಾರೆ. ಮಹಾಭಾರತ-ರಾಮಾಯಣ ಕಾಲದಲ್ಲಿ ಮಹಿಳೆಯರ ಸ್ಥಾನಮಾನದ ವಿಷಯಗಳನ್ನು ಕುರಿತು ತಂದೆಯೊಡನೆ ಗೀತಾಳು ಚರ್ಚಿಸುತ್ತಿದ್ದಳು. ವಿವಾಹ ಪೂರ್ವವೇ ಎಂ.ಎ ವ್ಯಾಸಂಗ ಮಾಡಿದ್ದರಿಂದ ಇವಳ ಜ್ಞಾನ ಮತ್ತಷ್ಟು ವಿಸ್ತರಿಸಿ ಸ್ತ್ರೀಪರ ಚಿಂತಕಿಯಾಗಿ ಮೂಡಿ ಬರುತ್ತಾಳೆ.

ಅಧಿಕ ವ್ಯಾಸಂಗ ಪಡೆದಿರುವ ಪುರುಷರು ತನಗಿಂತ ಕಡಿಮೆ ಓದಿರುವ ಹುಡುಗಿಯನ್ನೇ ಬಯಸುವವಲ್ಲಿ ತಾನು ಯಾವಾಗಲೂ ಹೆಣ್ಣಿಗಿಂತ ಮೇಲಿನ ಸ್ಥಾನದಲ್ಲೇ ಇರಬೇಕೆಂಬ ಭಾವನೆಯಿದೆ. ಹೆಣ್ಣಾದವಳು ಗಂಡನ ಸೇವೆಯನ್ನು ಮಾಡಿಕೊಂಡಿರಬೇಕೆಂದೆ ಯೋಚಿಸುವ ಪುರುಷರು ಎಷ್ಟೇ ವಿದ್ಯಾವಂತರಾದರು ತಮ್ಮ ಕೆಳಮಟ್ಟದ ಬುದ್ಧಿಯನ್ನು ಪ್ರದರ್ಶಿಸುತ್ತಾರೆ.

ಕಾಲೇಜು ಒಂದರಲ್ಲಿ ಕೆಲಸ ನಿರ್ವಹಿಸುತ್ತಿದ್ದ ಗೀತಾಳ ಸಹದ್ಯೋಗಿಗಳು ಇದೇ ಮನೋಭಾವದವರು. ಅವರಲ್ಲಿ ಜಯದೇವ ಎಂಬಾತ "ನಾನು ಮದುವೆ ಆಗೋ ಹುಡುಗೀಗೆ ಎಸ್.ಎಸ್.ಎಲ್.ಸಿ ಆಗಿದ್ರೆ ಸಾಕು. ಅಬ್ಬಬ್ಬ ಅಂದರೆ ಬಿ.ಎ ಆಗಿದ್ರೆ ಬೇಕಾದಷ್ಟು"[೧೩] ಎಂದು ಗೀತಾಳಿಗೆ ಪರೋಕ್ಷವಾಗಿ ಲೇವಡಿ ಮಾಡುತ್ತಾನೆ. ಗೀತಾ ಸುಮ್ಮನೆ ಕೂರುವ ಮನಸ್ಥಿಯವಳಾಗಿರಲಿಲ್ಲ. "ಸಾಮಾಜಿಕವಾಗಿ ತನಗಿಂತ ತನ್ನ ಹೆಂಡತಿ ಎತ್ತರದಲ್ಲಿ ನಿಲ್ಲೋದನ್ನ ಸಹಿಸೋ ಗಂಡಸು ತುಂಬಾ ಅಪರೂಪ, ಹೆಚ್ಚು ಓದಿದ್ರೆ, ಒಳ್ಳೇ ನೌಕರೀಲಿದ್ರೆ ಹೆಂಡತೀಗೆ ಇಂತಹ ಸ್ಥಾನ ಎಲ್ಲಿ ಕೊಡಬೇಕಾಗುತ್ತೋ ಅನ್ನೋ ಭಯದಿಂದಲೇ ನಮ್ಮ ಜಯದೇವನಂತಹವರು, ತನಗಿಂತ ತುಂಬಾ ಕಡಿಮೆ ಓದಿದ ಹುಡುಗೀನೇ ಮದುವೆ ಆಗ್ತೀನೀ ಅನ್ನೋದು"[೧೪] ಎಂದು ತಿರುಗೇಟು ನೀಡುವಳು. ಗೀತಾಳ ಮಾತು ಅಕ್ಷರಶಃ ಸತ್ಯವಾಗಿದೆ. ಲೇಖಕಿ ಹೆಚ್ಚು ಓದಿದ, ಒಳ್ಳೆಯ ನೌಕರಿಯಲ್ಲಿರುವ ಹೆಂಗಳೆಯರು ಮದುವೆಯಾಗದೆ ಉಳಿದಿರಲು ಇದೊಂದು ಕಾರಣವಾಗಿರಲೂಬಹುದು ಎಂಬಂತೆ ಸಮಾಜದ ಒಳಮುಖವನ್ನು ತೋರಿಸಿದ್ದಾರೆ. ಪ್ರತಿಯೊಂದು ಹೆಣ್ಣು ಈ ಸತ್ಯ ಅರಿತು ಕುಗ್ಗುವುದಕ್ಕಿಂತಲು, ಉನ್ನತ ವ್ಯಾಸಂಗ ಪಡೆಯಬೇಕಿದೆ. ಆಗ ಮಾತ್ರ ಜಯದೇವನಂತಹವರ ತಪ್ಪುಕಲ್ಪನೆಯನ್ನು ಅಳಿಸಬಹುದು. ಗೀತಾಳಂತೆ ಸತ್ಯ ಶೋಧನೆ ಅರಿತು ತಿರುಗೇಟು ನೀಡಲು ಸ್ಥೈರ್ಯ ಬೆಳೆಯುತ್ತದೆ.

ಅನ್ಯಾಯದ ವಿರುದ್ಧ ಪ್ರತಿಕ್ರಿಯಿಸುವ ಗೀತಾ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ ಪುರುಷರ ಸ್ವಾರ್ಥ ಮನೋಭಾವ ಮತ್ತಷ್ಟು ಪ್ರಬುದ್ಧಳನ್ನಾಗಿ ಮಾಡಿತು. ಮುಂದೆ ಗೃಹಿಣಿಯಾಗಿ ತನ್ನದಲ್ಲದ ತಪ್ಪಿಗೆ ಸಮಾಜದ ನಿಂದನೆಗೆ ಗುರಿಯಾಗುತ್ತಾಳೆ. ಮದುವೆಯ ನಂತರ ತಾಯ್ತನದ ಸುಖ ಗೀತಾಳ ಪಾಲಿಗೆ ಸಿಗಲಿಲ್ಲ. ಅತ್ತೆಯಿಂದ, ಸಮಾಜದಿಂದ 'ಬಂಜೆ' ಎಂಬ ಅವಮಾನಕ್ಕೆ ತುತ್ತಾಗಿ ಮಾನಸಿಕ ಖಿನ್ನತೆಗೆ ಒಳಗಾಗುತ್ತಾಳೆ. ಅದರಿಂದ ಹೊರಬಂದದ್ದು ಪಿಎಚ್.ಡಿ. ವ್ಯಾಸಂಗದ ಮೂಲಕ. ಈ ವ್ಯಾಸಂಗದಿಂದ ತನ್ನೆಲ್ಲ ದುಃಖ-ದುಗುಡ ಮರೆಯುತ್ತಾಳೆ. ದಿನನಿತ್ಯದ ಓದಿನಿಂದ ಗೆಲುವಾಗುತ್ತಾಳೆ. ಪಿಎಚ್.ಡಿ.ಯಲ್ಲಿ ತಲ್ಲೀನಳಾಗಿ ಮಾರ್ಗದರ್ಶಕರಿಗೆ ನೆಚ್ಚಿನ ಶಿಷ್ಯೆಯಾಗುತ್ತಾಳೆ. ತನ್ನ ಸ್ವವಿವೇಕದಿಂದ ಸಮಾಜದಲ್ಲಿ ತಾನು ಬಂಜೆಯಲ್ಲವೆಂಬುದನ್ನು ಸಾಬೀತುಪಡಿಸಿ, ತನಗಿದ್ದ ವಿದ್ಯೆ, ಬುದ್ಧಿ, ಆರ್ಥಿಕ ಶಕ್ತಿಯಿಂದ ವಿಚ್ಛೇದನ ಪಡೆಯುವ ಮೂಲಕ ಗಂಡನ ಆಶ್ರಯವಿಲ್ಲದೆ ಮಗುವನ್ನು ಸಾಕುವ ನಿರ್ಧಾರಕ್ಕೆ ಬರುತ್ತಾಳೆ. ಗೀತಾ ಮಾನಸಿಕ ತೊಳಲಾಟದಿಂದ ಹೊರಬಂದದ್ದು ಪಿಎಚ್.ಡಿ. ವ್ಯಾಸಂಗದಿಂದ. ಸರಿ-ತಪ್ಪುಗಳ ಅರಿವು ಪಡೆದ ಗೀತಾ ಪತಿಯ ದ್ರೋಹ

ಅರಿವಾದರು ಆತನಿಗೆ ಮೋಸ ಮಾಡಲಿಚ್ಛಿಸದೆ ಏಕಾಂಗಿಯಾಗಿ ಬದುಕುವ ವಿವೇಕ, ವಿದ್ಯಾವಂತೆ ಗೀತಾಳ ದೊಡ್ಡತನವನ್ನು ಪ್ರದರ್ಶಿಸುತ್ತದೆ.

ಶಿಕ್ಷಣ ಎನ್ನುವುದು ಶಾಲಾ-ಕಾಲೇಜುಗಳಲ್ಲಿ ಕಲಿಯುವುದೆ ಅಲ್ಲ. ದಿನನಿತ್ಯವು ಜೀವನದಲ್ಲಿ ತಿಳಿಯುವ ಹೊಸ-ಹೊಸ ವಿಚಾರಗಳು ಶಿಕ್ಷಣವಾಗಿರುತ್ತದೆ ಎಂಬುದನ್ನು ಬಿ.ಟಿ.ಲಲಿತಾ ನಾಯಕ್‌ರವರ 'ನೆಲೆ-ಬೆಲೆ' ಕಾದಂಬರಿಯಿಂದ ತಿಳಿಯಬಹುದು. ಹಳ್ಳಿಯಿಂದ ನಗರಕ್ಕೆ ಪಾದಾರ್ಪಣೆ ಮಾಡಿ, ಬಂಜೆ ಎಂಬ ಪಟ್ಟ ಹೊತ್ತಿದ್ದ ಜಯಾ ಮಹಿಳಾಪರ ಲೇಖನಗಳು, ದಿನಪತ್ರಿಕೆಗಳನ್ನು ಓದುತ್ತಾ ಸ್ತ್ರೀಪರ ಮನೋಭಾವ ಬೆಳೆಸಿಕೊಳ್ಳುವ ಮೂಲಕ ಜ್ಞಾನವನ್ನು ವಿಸ್ತರಿಸಿಕೊಳ್ಳುತ್ತಾಳೆ. ತನ್ನ ಜೀವನವನ್ನು ರೂಪಿಸಿಕೊಳ್ಳುವ ವಿಶಾಲ ಮನೋಭಾವ ಬೆಳೆಸಿಕೊಳ್ಳುತ್ತಾಳೆ. 'ಎರಡಕ್ಷರ ಕಲಿತ ನಾರಿ ಊರಿಗೆ ಉಪಕಾರಿ' ಎಂಬ ಮಾತಿನಂತೆ ನಗರ ಜೀವನ ಕ್ರಮವನ್ನು ತಾನು ಅಳವಡಿಕೊಂಡು ತನ್ನೂರಿನ ಹೆಣ್ಣುಮಕ್ಕಳ ಕಷ್ಟ-ಸುಖಗಳಿಗೆ ಸ್ಪಂದಿಸುವ ಸ್ವಭಾವದವಳಾಗಿರುತ್ತಾಳೆ.

ಎಸ್.ಎಸ್.ಎಲ್.ಸಿ ಓದಿರುವ ಜಯಾ ಅಕ್ಕನ ಬಾಣಂತನಕ್ಕಾಗಿ ನಗರ ಪ್ರವೇಶಿದ್ದರಿಂದ ಹೊಸ ರೀತಿಯ ಆಲೋಚನಾ ಕ್ರಮವನ್ನು ಬೆಳೆಸಿಕೊಳ್ಳುತ್ತಾಳೆ. ದಿನನಿತ್ಯದ ಓದಿನಲ್ಲಿ ಆಸಕ್ತಿ ಹೊಂದಿದ್ದರಿಂದ ಪತ್ರಿಕೆ, ಕಾದಂಬರಿ ಓದುತ್ತಿದ್ದಳು ಮತ್ತು ಸ್ತ್ರೀಪರ ಬರವಣಿಗೆಯ ಲೇಖನಗಳನ್ನೂ ಓದುತ್ತಾಳೆ. ಈ ಲೇಖನಗಳಿಂದ ಉತ್ತೇಜಿತಳಾಗಿ 'ವಿಮೋಚನಾ ಮಹಿಳಾ ಸಂಘ'ದ ಸ್ತ್ರೀಪರ ಉದ್ದೇಶಗಳ ಬಗ್ಗೆ ಮಾತನಾಡುವ ವಾಕ್‌ಚಾತುರ್ಯ ಬೆಳೆಯುತ್ತದೆ.

'ವಿಮೋಚನಾ ಮಹಿಳಾ ಸಂಘವನ್ನು ಎಂ.ಎಸ್ಸಿ ಮಾಡಿರುವ ರೇಖಾ ಸ್ಥಾಪಿಸಿದ್ದಾಳೆ. ಇವಳ ಉದ್ದೇಶ ನೊಂದ ಮಹಿಳೆಯರಿಗೆ ಸ್ಪಂದಿಸುವುದಾಗಿರುತ್ತದೆ. ಹೆಣ್ಣಿಗಿರುವ ಹಕ್ಕು ಸ್ವಾತಂತ್ರ್ಯದ ಬಗ್ಗೆ ಮಾತನಾಡುವವರನ್ನು ನಮ್ಮ ಸಮಾಜ ನೋಡುವ ದೃಷ್ಟಿಯೇ ಬೇರೆ. ಪುರುಷಪ್ರಧಾನ ಸಮಾಜಕ್ಕೆ ತಲೆಬಾಗಿ ನಡೆಯುವ ಶಾಂತಮ್ಮನಂತಹವರು ರೇಖಾಳ ವಿಚಾರವಾಗಿ ಶಿಕ್ಷಣವನ್ನು ದೂರುತ್ತಾರೆ. "ಈಗಿನ ಕಾಲ ಕೆಟ್ಟೋರೋದೇ ಹೆಣ್ಣು ಮಕ್ಕಳು ಹೆಚ್ಚಿನ ಓದುಬರಹ ಕಲ್ತಿದ್ದರಿಂದ ಕಣ್ರಿ! ಮಾತೆತ್ತಿದ್ರೆ ಪ್ರೀತಿ-ಪ್ರೇಮ ಅನ್ನೋದು, ಜಾತಿ ಬಿಟ್ಟು ಜಾತೀಲಿ ಮದುವೆ ಮಾಡಿಕೊಳ್ಳೋದು. ಇಂಥವೆಲ್ಲ ಅನೀತಿ ಹೆಚ್ಚಿರೋದು ಯಾಕೆ ಅಂತೀರಾ"[೧೫] ಎಂಬ ಮಾತುಗಳು ತಾವು ಕಲಿಯದ್ದನ್ನು ಕಲಿತವರ ವಿರುದ್ಧ ಹಿಯಾಳಿಸಿ ಅವರ ವಿರುದ್ಧ ಪ್ರತೀಕಾರ ಎತ್ತುತ್ತ ಆಡುವಂಥವಾಗಿವೆ. ಇವರ ಮಾತುಗಳಿಗೆ ತಲೆಕೆಡಿಸಿಕೊಳ್ಳದ ರೇಖಾ ತಾನು ಅನುಭವಿಸುತ್ತಿರುವ ನೋವನ್ನು ಮತ್ತೊಬ್ಬರಿಗೆ ಹಂಚದೆ ಎಷ್ಟೋ ಹೆಣ್ಣುಮಕ್ಕಳಿಗೆ ನೆರವಾಗುವ ಮೂಲಕ ಇಷ್ಟವಿಲ್ಲದಿದ್ದರು ಪತಿಯೊಂದಿಗೆ ದಿನ

ಕಳೆಯುತ್ತಿರುತ್ತಾಳೆ.  ರೇಖಾಳು ಶಾಂತಮ್ಮನಂತಹವರಲ್ಲಿ ಒಬ್ಬಳಾಗಲಿಲ್ಲ. ಸಮಾಜಕ್ಕೆ ಅಂಜಲಿಲ್ಲ. ತನ್ನೊಬ್ಬಳ ಸುಖಕ್ಕಿಂತ ಎಲ್ಲಾ ಹೆಂಗಳೆಯರ ಬದುಕಿಗಾಗಿ ರೇಖಾ ನಿಲ್ಲುತ್ತಾಳೆ.

ಊರಿಗೆ ಮರಳಿದ ಜಯಾ ಹಿಂದಿನ ಮುಗ್ಧ ಜಯವಾಗಿರಲಿಲ್ಲ. ಸಾಕಷ್ಟು ವಿಚಾರಗಳನ್ನು ಓದಿ ಕರಗತ ಮಾಡಿಕೊಂಡಿದ್ದರಿಂದ ಆಚಾರ-ವಿಚಾರಗಳನ್ನು ಪಾಲಿಸುವುದರಲ್ಲಿ ಸುಧಾರಣೆಗಳಾಗಿರುತ್ತವೆ. ಹಳ್ಳಿಗೆ ಹಿಂದಿರುಗಿದ ನಂತರವೂ “ಬಿಡುವಾದಾಗಲೆಲ್ಲ ಪತ್ರಿಕೆ ತರಿಸಿ ಓದುವುದು, ಊರ ಹೆಣ್ಣು ಮಕ್ಕಳ ಸಮಸ್ಯೆಗಳ ಬಗ್ಗೆ ಹೆಚ್ಚಿನ ಆಸ್ಥೆ ವಹಿಸಿ ಅವರುಗಳಿಗೆ ಸಲಹೆ-ಸೂಚನೆಗಳನ್ನು ಕೊಡಲು ಮುಂದಾಗುವುದು”[೧೬] ಪತಿ ಎರಡನೇ ಮದುವೆಗೆ ಸಿದ್ಧವಾದಾಗ ಆಘಾತವಾದರು ಪ್ರತಿಭಟಿಸದೆ ಶಾಂತರೂಪದಲ್ಲಿ ಅವರ ಸುಖವನ್ನು ಬಯಸುವುದು ಅನಾಗರಿಕ ಕುಟುಂಬದವರೊಂದಿಗೆ ಕಾಲ ಕಳೆಯುವುದಕ್ಕಿಂತ ತನ್ನ ಪ್ರಿಯಕರನನ್ನು ಸೇರುವ ವಿಶಾಲ ಆಲೋಚನೆ ಕ್ರಮ ಬೆಳೆದಿರುವುದು ಗಮನಾರ್ಹವಾಗಿ ಚಿತ್ರಿತವಾಗಿದೆ.

ಜಯಾಳ ಜ್ಞಾನ, ಅರಿವು-ವಿವೇಕ ಹೊಸಹೊಸ ಆಲೋಚನೆಗೆ ಸಾಕ್ಷಿಯಾಗಿವೆ.  ಪತಿ ಹೆಂಡತಿ ಇರುವಾಗಲೇ ಎರಡನೇ ಮದುವೆಗೆ ಸಿದ್ಧವಾಗಿರುವಾಗ ತಾನೇಕೆ ಕಾಂತಯ್ಯ (ಪ್ರಿಯಕರ)ನನ್ನು ಮದುವೆಯಾಗಬಾರದೆಂಬ ಆಲೋಚನೆಗಳನ್ನು ಮೂಡಿಸುತ್ತವೆ. ಹೊಸ ಬದುಕನ್ನು ಕಟ್ಟಿಕೊಳ್ಳುವ ಆತ್ಮವಿಶ್ವಾಸ ಜಯಾಳಲ್ಲಿ ಬೆಳೆಯುತ್ತದೆಂದರೆ ಅವಳು ಓದಿಕೊಂಡು, ತಿಳಿದುಕೊಂಡಿದ್ದ ಜ್ಞಾನದಿಂದ ‘ತಾನೊಂದು ಬಗೆದರೆ ವಿಧಿಯೊಂದು ಬಗೆದಂತೆ’. ಅನಾಮಿಕ ವ್ಯಕ್ತಿಯಿಂದ ಅತ್ಯಾಚಾರಕ್ಕೊಳಪಟ್ಟು ತನಗರಿವಿಲ್ಲದಂತೆಯೇ ಗರ್ಭವತಿಯಾದಾಗ ಅದನ್ನು ತಾನು ಜೀರ್ಣಿಸಿಕೊಂಡು, ಎರಡನೇ ಹೆಂಡತಿ ಬಿಟ್ಟುಹೋಗಿದ್ದ ಪತಿಗೆ ಆಸರೆಯಾಗುವ ನಿರ್ಧಾರಕ್ಕೆ ಬರುತ್ತಾಳೆ.

ಶಿಕ್ಷಣ ಹೆಣ್ಣಲ್ಲಿ ಬದುಕುವ ಕೆಚ್ಚು ಹುಟ್ಟಿಸಿ ಧೈರ್ಯವಾಗಿ ಸಮಸ್ಯೆಗಳನ್ನು ಎದುರಿಸುವಂತೆ ಮಾಡುತ್ತದೆ ಎಂಬುದಕ್ಕೆ ರೇಖಾ, ಜಯಾ ಸಾಕ್ಷಿಯಾಗುತ್ತಾರೆ. ಓದು ಎನ್ನುವುದು ಶಾಂತಮ್ಮ-ಕನಕರ ಪಾಲಿಗೆ ಸಂಸಾರಕ್ಕಿಂತಲು ದೊಡ್ಡದಲ್ಲ ಎಂಬ ಭಾವನೆ ಇದ್ದು ಇದರಿಂದಲೇ ಇವರು ಪುರುಷಪ್ರಾಹಿತ್ವ ನೆಲೆಯಲ್ಲೇ ಬದುಕುವವರಾಗಿದ್ದಾರೆ. ಇಲ್ಲದ ಸಮಸ್ಯೆಗಳನ್ನು ಸೃಷ್ಟಿಸಿಕೊಂಡು ತಮ್ಮ ಜೀವನವನ್ನು ಹಾಳುಮಾಡಿಕೊಳ್ಳುವುದು ಅವರ ಸಂಕುಚಿತ ಮನೋಭಾವವನ್ನು ಕಾದಂಬರಿ ಹೇಳುತ್ತದೆ.

ಗ್ರಾಮೀಣ ಪ್ರದೇಶದ ಸಂಪ್ರದಾಯಸ್ಥ ಕುಟುಂಬದಲ್ಲಿ ಸುಶಿಕ್ಷಿತ ಹೆಣ್ಣಿನಿಂದ ಸಂಪ್ರದಾಯಸ್ಥರ ಮನಸ್ಸನ್ನು ಹೇಗೆ ಬದಲಾವಣೆ ಮಾಡಬಹುದು ಎಂಬುದು ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿಯಲ್ಲಿ ಬಿಂಬಿತವಾಗಿದೆ. ಕಾದಂಬರಿಯುದ್ದಕ್ಕೂ ವಿದ್ಯೆಯ ಮಹತ್ವ ಚಿತ್ರಿತವಾಗಿದೆ. ಸಂಪ್ರದಾಯ–ಆಚರಣೆಗಳನ್ನು ಆಚರಿಸುವುದರಲ್ಲಿ ತೃಪ್ತಿ ಕಾಣುತ್ತಿರುವ ಸಂಕುಚಿತ ಮನೋಭಾವದವರ ನಡುವೆ ಆಧುನಿಕ ದೃಷ್ಟಿಕೋನದಿಂದ ಮನುಷ್ಯತ್ವವನ್ನು ಮೆರೆಯುವ ಶಿಕ್ಷಿತರು ಕಂಡುಬರುತ್ತಾರೆ. ಗಂಡು ಮಕ್ಕಳಿಗೆ ದೊರೆಯುವ ಶಿಕ್ಷಣ ಹೆಣ್ಣು ಮಕ್ಕಳಿಗಿಲ್ಲದಿದ್ದರು ಕನಿಷ್ಠ ಮಟ್ಟದ ವಿದ್ಯಾಭ್ಯಾಸ ಪಡೆಯುವ ಅವಕಾಶವಿದ್ದಿತು. ವಿದ್ಯಾವಂತರಾದ ವಾಸುದೇವರಾಯರು, ಭಾಸ್ಕರ, ಮಕ್ಕಳಾದ–ಸೀನ, ಪುಟ್ಟು, ಶಾಮಿ, ಜಯ, ಕಾಲೇಜಿನ ಶಿಕ್ಷಣ ಪಡೆಯುವ ಸರೋಜ ಇವರೆಲ್ಲರ ವೈಚಾರಿಕ ನೆಲೆಗಟ್ಟಿನಲ್ಲಿ ಚಿಂತಿಸುವ ಚಿಂತನೆಗಳು ಸಂಪ್ರದಾಯವಾದಿಗಳ ಮನಃಪರಿವರ್ತಿಸಲು ಸಹಾಯಕವಾಗುತ್ತವೆ. ಶಿಕ್ಷಣ ವಂಚಿತರಾದ ಪಾರ್ತಕ್ಕ, ಗೌರಮ್ಮನಂತಹವರು ಕಟ್ಟಾ ಸಂಪ್ರದಾಯವಾದಿಗಳಾಗಿದ್ದು ಶಿಕ್ಷಿತರ ಮಾತುಗಳನ್ನು ತಳ್ಳಿಹಾಕುತ್ತಿದ್ದವರು. ಪುರುಷಪ್ರಧಾನ ವ್ಯವಸ್ಥೆಯು ಸಂಸ್ಕೃತಿಯನ್ನು ಸೃಷ್ಟಿಸಿ ಅದನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸ್ತ್ರೀಯರ ಮೇಲೆ ಹೇರಿ ತಾವು ನಿರುಮ್ಮಳರಾದರೆ ಸ್ತ್ರೀಯರು ಸಂಪ್ರದಾಯ ಪಾಲಕರಾಗಿ ಶಿಕ್ಷಣ ವಂಚಿತರಾಗಿರುವುದರಿಂದ ಸಮಾಜದಲ್ಲಿ ಯಾವ ಬದಲಾವಣೆಯು ಆಗುವುದಿಲ್ಲ. “ಪುರುಷಲೋಕದ ಪ್ರಗತಿಗಾಮಿತನವೊಂದೇ ಸಮಾಜದ ಪ್ರಗತಿಯಲ್ಲ ಎಂಬುದನ್ನೂ ಕಾದಂಬರಿ ಸ್ಪಷ್ಟಪಡಿಸುತ್ತದೆ. ಸ್ತ್ರೀಯೂ ಪ್ರಗತಿಗಾಮಿತನದ ಹಾದಿಯಲ್ಲಿ ನಡೆಯಬೇಕಾದರೆ, ಅದಕ್ಕೆ ಬೇಕಾದ ಜ್ಞಾನ, ವಿವೇಕಗಳನ್ನು ಪಡೆದುಕೊಳ್ಳಬೇಕಾದರೆ ವಿದ್ಯೆ ಅವಶ್ಯಕ ಎಂದು ತಿಳಿಸುತ್ತದೆ”.[೧೭]

ಪ್ರಗತಿಗಾಮಿಯಾಗಿ, ಸಂಪ್ರದಾಯವಾದಿಗಳ ಮನ:ಪರಿವರ್ತಕಳಾಗಿ ಸರೋಜ ಕಂಡುಬರುತ್ತಾಳೆ. ವಯಸ್ಸಿನಲ್ಲಿ ಚಿಕ್ಕವಳಾದರು ಅವಳಲ್ಲಿ ವಯಸ್ಸಿಗೆ ಮೀರಿದ ವಿವೇಚನಾ ಶಕ್ತಿ ಇದ್ದು, ಮೂಢನಂಬಿಕೆಗಳ ಹಿಂದಿರುವ ವೈಜ್ಞಾನಿಕ ಸತ್ಯದ ವಿಚಾರವಂತಿಕೆ ಇವಳಲ್ಲಿರುತ್ತದೆ. ಮಳೆ ಬಂದಾಗ ಕಬ್ಬಿಣದ ಕತ್ತಿಗಳನ್ನು ಇಡುವ ಹಿನ್ನೆಲೆ ಕುರಿತು ಚರ್ಚಿಸುವಾಗ ಪಾರ್ತಕ್ಕ ಇಂದ್ರ, ಅರ್ಜುನ, ವರುಣರ ಕಥೆ ಹೇಳಿದರೆ ಸರೋಜಾ ವೈಜ್ಞಾನಿಕವಾಗಿ ತಿಳುವಳಿಕೆ ಮೂಡಿಸುತ್ತಾಳೆ. “ಬಹುಶಃ ಕಬ್ಬಿಣಕ್ಕೆ ಸಿಡಿಲಿನ ಹೊಡೆತ ಹೀರಿಕೊಳ್ಳುವ ಶಕ್ತಿಯಿದೆಯೋ ಏನೋ, ಅದಕ್ಕೇ ಕಬ್ಬಿಣ ಹೊರಗೆ ಹಾಕಬೇಕು – ಎನ್ನುತ್ತಾರೆ. ಮತ್ತೆ, ಅರ್ಜುನನ ಹೆಸರು ಹೇಳುತ್ತ ಇದ್ದರೆ ಮನಸ್ಸಿನಲ್ಲಿ ಧೈರ್ಯ ತುಂಬುತ್ತದೆ, ಆ ಧೈರ್ಯದಲ್ಲಿ ಮನುಷ್ಯ ಎಲ್ಲಿಂದ ಎಲ್ಲಿಗೆ ಬೇಕಾದರೂ ಹೋಗಬಹುದು ಅಂತ ಹಾಗೆ ಹೇಳಿರಬಹುದು. ಆತ್ಮವಿಶ್ವಾಸ ಬರಿಸುವುದಕ್ಕಾಗಿ”[೧೮] ಎಂಬಂತಹ ಮಾತುಗಳಿಂದಲೇ ಸರೋಜಳ ಸುಶಿಕ್ಷಿತತೆ ಅರಿವಾಗುತ್ತದೆ.

ಕಾದಂಬರಿಯುದ್ದಕ್ಕೂ ಜಾತೀಯತೆ ಖಂಡಿಸುವ ಸರೋಜ ಶಿಕ್ಷಣದ ಮಹತ್ವವನ್ನು ಎಂಬುದನ್ನು ಮೆರೆದಿದ್ದಾಳೆ. ಮೇಲಿನವರು ಕೆಳಗಿನವರನ್ನು ಕೀಳುಭಾವದಿಂದ ನೋಡಿದರೆ ಸರೋಜ ಮೇಲ್ಜಾತಿಯವಳಾಗಿದ್ದರು ಅದನ್ನು ಖಂಡಿಸುತ್ತಿರುತ್ತಾಳೆ. ಶಿಕ್ಷಣ ವ್ಯಕ್ತಿ ತನ್ನ ಜೀವನವನ್ನು ರೂಪಿಸಿಕೊಳ್ಳಲು ಮಾತ್ರ ಸಹಕಾರಿಯಾಗದೆ ಮನೆಯವರನ್ನು, ಸಮಾಜವನ್ನು ರೂಪಿಸಲು ಸಹಾಕಾರಿಯಾಗಿರುತ್ತದೆ. "ಶಿಕ್ಷಣದ ಮೂಲಕ ದೊರಕಿದ ಸಾಮಾಜಿಕ ಅರಿವು ಮತ್ತು ಎಚ್ಚರಗಳು ಹೆಣ್ಣಿನ ವೈಯಕ್ತಿಕ ನೆಲೆಯಲ್ಲಿ ಬದಲಾವಣೆಗೆ ಕಾರಣವಾಗುವಷ್ಟು ಸುಲಭದಲ್ಲಿ ಸಾಮಾಜಿಕ ನೆಲೆಯ ಬದಲಾವಣೆಗಳು ಸಾಧ್ಯವಿಲ್ಲ"[೧೯] ಎಂಬ ಮಾತು ಸರೋಜಳಿಗೆ ಅನ್ವಯಿಸುತ್ತದೆ. 'ಸುಶಿಕ್ಷಿತ ಹೆಣ್ಣು ಸಮಾಜ ಪರಿವರ್ತನೆಯ ಕಣ್ಣು' ಎಂಬ ಮಾತು ಸರೋಜಳ ಪಾತ್ರದಿಂದ ಮನನವಾಗುತ್ತದೆ. ಇವಳ ಜಾತೀಯತೆ ವಿರುದ್ಧದ ಭಾವನೆ ಮದುವೆಯಾಗುವ ಗಂಡು 'ಓದು ಬರಹ ಬರುವ ಒಬ್ಬ ಕೂಸಾಳು ಆದರೂ ನಾನು ಮದುವೆಯಾಗುತ್ತೇನೆ' ಎನ್ನುವಷ್ಟರ ಮಟ್ಟಿಗೆ ಅವಳಲ್ಲಿ ವಿಶಾಲ ಮನೋಭಾವ ಎದ್ದುಕಾಣುತ್ತದೆ. ಜಾತಿ ಯಾವುದೆ ಆದರು, ವಿದ್ಯಾವಂತನಾಗಿರಬೇಕೆಂಬ ಆಶಯ ನಾಗರಿಕತೆಯನ್ನು ಹೇಳುತ್ತದೆ. ಅಂತೆಯೇ ಕೆಳಜಾತಿಯ ಹೆಣ್ಣನ್ನು ಮನೆಗೆ ಕರೆತರುವುದರ ಯೋಚನೆ ಯಾರಲ್ಲೂ ಮೂಡದಿದ್ದದ್ದು ಸರೋಜಾಳಲ್ಲಿ ಹುಟ್ಟುತ್ತದೆ. ಸಾಮಾಜಿಕ ಪಿಡುಗುಗಳನ್ನು ತೊಡಗಿಸಲು ವಿದ್ಯಾವಂತಳಾದ ಸರೋಜಳಂಥ ಒಬ್ಬ ಹೆಣ್ಣು ಮಗಳು ಸಾಕು ಎಂಬುದನ್ನು ಕಾದಂಬರಿ ಒಳಗೊಂಡಿದೆ.

ಮುಸ್ಲಿಂ ಹೆಣ್ಣು ಹಿಂದೂ ಸ್ತ್ರೀಯರಂತೆ ಶಿಕ್ಷಣ ಪಡೆಯುವಲ್ಲಿ ಸ್ವಾತಂತ್ರ್ಯಹೀನಳು. ಇತ್ತೀಚಿನ ದಿನಗಳಲ್ಲಿ ಪ್ರಾಪಂಚಿಕ ಜ್ಞಾನದಿಂದ ಮುಸ್ಲಿಂ ಸ್ತ್ರೀಯರು ಓದುವಲ್ಲಿ-ಓದಿಸುವರಲ್ಲಿಯೂ ಆಸಕ್ತಿ ಕಂಡುಬರುತ್ತಿದೆ. ಇಂದಿಗೂ ಕೆಲವು ಸಂಪ್ರದಾಯಸ್ಥ ಮುಸ್ಲಿಂ ಜನಾಂಗದವರು ಸ್ತ್ರೀ ಶಿಕ್ಷಣವನ್ನು ವಿರೋಧಿಸುವವರಾಗಿರುತ್ತಾರೆ. ಅಂತಹವರು ಎಲ್ಲಾ ಕಾಲದಲ್ಲಿಯೂ ಲಭ್ಯವಾಗುತ್ತಾರೆ. ಅವರ ನಡುವೆ ಮುಸ್ಲಿಂ ಹೆಣ್ಣು ಓದುವ ಸ್ವಾತಂತ್ರ್ಯ ಪಡೆದುಕೊಂಡಿಲ್ಲದ ಕಾಲದಲ್ಲು ಕಟ್ಟುನಿಟ್ಟಿನ ವಾತಾವರಣದಲ್ಲಿಯೂ ಓದಿದ ಲೇಖಕಿ ಸಾರಾ ಅಬೂಬಕ್ಕರ್‌ರವರು. ಇವರ 'ಚಂದ್ರಗಿರಿಯ ತೀರದಲ್ಲಿ' ಎಂಬ ಕಾದಂಬರಿಯು ಮುಸ್ಲಿಂ ಸ್ತ್ರೀ ಶಿಕ್ಷಣ ಯಾರ ಬದುಕಿಗು ಆಸರೆಯಾಗದಿದ್ದರು, ಓದು-ಬರಹ ಕಲಿಯುವುದರಿಂದಲಾದರು ಒಬ್ಬರು-ಮತ್ತೊಬ್ಬರ ಭಾವನೆಯನ್ನು ತಿಳಿಯಬಹುದು ಎಂಬುದನ್ನು ತೋರಿಸುತ್ತದೆ. ನಾದಿರಾ ತಂದೆ ಮನೆಯ ಬಂಧನದೊಳಗೆ ಇದ್ದು ಮನ ಬೆಂದು ಕರಕಲಾಗುವಾಗ ಅವಳ ಮನಸ್ಸಿಗೆ ತಂಪನ್ನೆರೆಯುವುದು ರಶೀದ್ ಬರೆದಿದ್ದ ಪತ್ರ. ಓದು-ಬರಹ ಇಲ್ಲದ ನಾದಿರಾಳಿಗೆ ರಶೀದ್‌ನೆ ಅಕ್ಷರಾಭ್ಯಾಸ ಮಾಡಿಸಿರುತ್ತಾನೆ. ಅಕ್ಷರ ಕಲಿತ ನಾದಿರಾ ಗಂಡನ ಪತ್ರ ಓದಿದ್ದರಿಂದ ಆ ಕ್ಷಣದ ದುಃಖದಿಂದ ಹೊರಬರುತ್ತಾಳೆ.

## ೪.೨ ಉದ್ಯೋಗ

ಉದ್ಯೋಗ ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆಯ ಮೂಲವಾಗಿದೆ. ಸಾಂಪ್ರದಾಯಿಕ ಸಮಾಜದಿಂದ ಹೊರಬಂದು ತನ್ನ ಜೀವನವನ್ನು ರೂಪಿಸಿಕೊಳ್ಳಲು ಸಹಕಾರಿಯಾಗಿದೆ. ಪುರುಷಪ್ರಧಾನ ವ್ಯವಸ್ಥೆಯ ನಿಯಮಗಳಿಂದ ಹೊರಬರುವ ಪ್ರಮುಖ ಮಾರ್ಗ ಉದ್ಯೋಗವಾಗಿದ್ದು, ಆದಾಯಸಹಿತ ಉದ್ಯೋಗದ ಅಗತ್ಯತೆ ಹೆಣ್ಣಿನ ಸ್ವಾವಲಂಬಿ ಬದುಕಿಗೆ ಅಗತ್ಯ ಎಂಬುದು ಈ ಅಧ್ಯಯನದಿಂದ ತಿಳಿಯುತ್ತದೆ.

ಅಲೆಮಾರಿ ಜೀವನದಿಂದಲು ಸ್ವಾವಲಂಬಿ ಬದುಕನ್ನು ಕಂಡುಕೊಂಡಿದ್ದ ಹೆಣ್ಣು ಪುರುಷರೊಂದಿಗೆ ಸ್ವಸಾಮರ್ಥ್ಯದಿಂದ ಸಮನಾಗಿ ದುಡಿದು ಆಹಾರ ಗಿಟ್ಟಿಸಿಕೊಳ್ಳುತ್ತಿದ್ದಳು. ನಾಗರಿಕತೆ ಬೆಳೆದಂತೆ ಪುರುಷ ಪ್ರಧಾನತೆ ಸಮಾಜದಲ್ಲಿ ನೆಲೆಯೂರಿ ಹೆಣ್ಣಿನ ಬಸುರಿತನ, ಮಕ್ಕಳ ಆರೈಕೆ, ಮನೆ, ಸಂಸಾರದ ಜವಾಬ್ದಾರಿ ಇವುಗಳನ್ನು ಅಸ್ತ್ರವಾಗಿಟ್ಟುಕೊಂಡು ಕೂಲಿಯಿಲ್ಲದ ಕೆಲಸದಾಳಾಗಿ ಆಕೆಯನ್ನು ಸೃಷ್ಟಿಸಿತು. ಆರ್ಥಿಕವಾಗಿ ನಿರ್ಗತಿಕಳನ್ನಾಗಿ ಮಾಡಿ ಅವಳ ಮೇಲೆ ತಮ್ಮ ದರ್ಪ ತೋರಿಸುತ್ತಾ ಅಡುಗೆ ಮನೆಗೆ ಸೀಮಿತಗೊಳಿಸಿತು. ಕಾಲಕ್ರಮೇಣ ಮನೆಯ ಕೆಲಸಗಳೊಂದಿಗೆ ಹೊರಹೋಗಿ ದುಡಿದು ಹಣಸಂಪಾದಿಸುವ ಮೂಲಕ ಸಮಾಜದಲ್ಲಿ ತಾನು 'ಆಳಿಸಿಕೊಳ್ಳುವವಳಲ್ಲ ಆಳುವವಳು ನಾನಗಬಲ್ಲೆ' ಎಂಬುದನ್ನು ತೋರಿಸಿಕೊಡುತ್ತಿದ್ದಾಳೆ. ಇಂದು ಸ್ತ್ರೀ ಪರುಷರಿಗಿಂತ ಕಡಿಮೆಯಿಲ್ಲ ಎಂಬುದನ್ನು ಹೊರಹೋಗಿ ದುಡಿಯುವ ಮೂಲಕ ಸಾಬೀತು ಪಡಿಸಿದ್ದಾಳೆ. ಬಡತನ, ಸಂಸಾರದ ಭಾರ, ಕುಟುಂಬದ ಹೊಣೆ ಹೊತ್ತ ಎಷ್ಟೋ ಹೆಣ್ಣುಮಕ್ಕಳು ತಾವು ದುಡಿದು ಕುಟುಂಬ ಮುನ್ನೆಡೆಸುವ ಜವಾಬ್ದಾರಿ ಹೊತ್ತಿದ್ದಾರೆ. ವಚನಗಳ ಯುಗದಲ್ಲಿಯೆ ಶಿವಶರಣೆ ನಂಬಿಯಕ್ಕ ದುಡಿಯಲು ಮುಂದಾಗುತ್ತಾಳೆ. ತಂದೆ ವೃದ್ಧನಾಗಿ, ರೋಗಗ್ರಸ್ಥನಾಗಿ ಬಡತನದಿಂದ ಬಳಲುತ್ತಿದ್ದಾಗ ತಾನೇ ದುಡಿದು ಮನೆತನ ನಿಭಾಯಿಸಿದ್ದಾಳೆ. ಕದಿರ ಕಾಯಕದ ರೇಮವ್ವೆ, ಬಿಜ್ಜಳ ಮಹಾದೇವಿ ಮೊದಲಾದ ಶರಣೆಯರು ಕಾಯಕದಿಂದ ಸ್ವತಂತ್ರರಾದವರೇ ಆಗಿದ್ದಾರೆ.

ಪ್ರಾರಂಭದಲ್ಲಿ ಮಹಿಳೆ ಆದಾಯವಿಲ್ಲದೆ ನಿರ್ವಹಿಸುವ ಮನೆಗೆಲಸದಲ್ಲಿ ನಿರತಳಾದಳು. ನಂತರದಲ್ಲಿ ಅಸಂಘಟಿತ ಕ್ಷೇತ್ರಗಳಾದ ಬುಟ್ಟಿ ಎಣಿಯುವುದು, ಊದುಬತ್ತಿ ತಯಾರಿಕೆ, ಬೀಡಿಕಟ್ಟುವುದು, ಕಸೂತಿ ಕೆಲಸ, ಕೆತ್ತನೆಯ ಕೆಲಸ, ಪಶುಪಾಲನೆ, ಬಿದಿರುಗೆಲಸ, ತೋಟಗಾರಿಕೆ ಹೀಗೆ ತಾವು ಕಲಿತ್ತಿದ್ದನ್ನೆ ಪ್ರಯೋಗಿಸುತ್ತ ಆದಾಯ ಗಳಿಸುವಲ್ಲಿ ಸ್ವಾತಂತ್ರ್ಯ ಪಡೆದರು. ೧೯ನೇ

ಶತಮಾನದಿಂದ ೨೦ನೇ ಶತಮಾನದ ಪ್ರಾರಂಭದಲ್ಲಿ ಕೈಗಾರೀಕರಣ ಮತ್ತು ನಗರೀಕರಣದಿಂದಾಗಿ ಕಾರ್ಖಾನೆಗಳಲ್ಲಿ ದುಡಿಯಲು ಪ್ರಾರಂಭಿಸಿದರು. ಶಿಕ್ಷಕಿಯರಾಗಿ, ದಾದಿಯರಾಗಿ, ದೂರವಾಣಿ ಆಪರೇಟರ್‌ಗಳಾಗಿ, ಕಛೇರಿ ಸಹಾಯಕರಾಗಿ ಹಂತ–ಹಂತವಾಗಿ ಒಂದೊಂದು ಉದ್ಯೋಗವನ್ನು ಪಡೆಯುವಲ್ಲಿ ಯಶಸ್ವಿಯಾದರು. ಇಪ್ಪತ್ತು ವರ್ಷಗಳ ಹಿಂದೆ ಪುರುಷರಿಗೆ ಸೀಮಿತವಾಗಿದ್ದ ಏರ್‌ಫೋರ್ಸ್‌ನಂತಹ ಉದ್ಯೋಗಗಳನ್ನು ಸ್ತ್ರೀಯರು ಪಡೆಯುತ್ತಿರುವುದು ಸ್ತ್ರೀ ಸಾಮಾರ್ಥ್ಯವನ್ನು ಹೇಳುತ್ತಿದೆ. ಪ್ರಸ್ತುತದಲ್ಲಿ ಯಾವ ರಂಗದಲ್ಲು ಪುರುಷರಿಗಿಂತ ಕಡಿಮೆಯಿಲ್ಲವೆಂಬಂತೆ ಮುನ್ನುಗ್ಗುತ್ತಿರುವುದು ದೇಶದ ಕೀರ್ತಿಯನ್ನು ಹೆಚ್ಚಿಸಿದೆ.

ಒಂದು ಸದೃಢ ದೇಶದ ಅಭಿವೃದ್ಧಿಯಲ್ಲಿ ಸ್ತ್ರೀಯರ ಆದಾಯವು ರಾಷ್ಟ್ರೀಯ ಆದಾಯಕ್ಕೆ ಪೂರಕವಾಗಿರುವುದರಿಂದ ಸರ್ಕಾರ ಸ್ತ್ರೀ ಉದ್ಯೋಗಕ್ಕೆ ಪ್ರೋತ್ಸಾಹ ನೀಡುತ್ತಿದೆ. "ಉನ್ನತ ಶಿಕ್ಷಣ, ವೃತ್ತಿತರಬೇತಿ, ತಂತ್ರಜ್ಞಾನ ಮತ್ತು ಉದ್ಯಮಶೀಲತೆಗಳಲ್ಲಿ ಉದ್ಯೋಗವಕಾಶಗಳನ್ನು ಹೆಚ್ಚಿಸುವುದರಿಂದ ಮಹಿಳೆಯರು ಆರ್ಥಿಕವಾಗಿ ಸಶಕ್ತೀಕರಣಗೊಳ್ಳಬಹುದು"[೨೦] ಎಂದು ಸ್ತ್ರೀ ಸಮಾನತೆಗಾಗಿ ಮಹಿಳೆ ನಿರ್ಭೀತಿಯಿಂದ ಉದ್ಯೋಗ ಪಡೆಯಲು ಅನೇಕ ಯೋಜನೆಗಳು, ಕಾರ್ಯಗಳು, ಮೀಸಲಾತಿಗಳು ಜಾರಿಗೆ ಬಂದಿವೆ. ಮಕ್ಕಳಿರುವ ತಾಯಂದಿರೂ ಮುಕ್ತವಾಗಿ ದುಡಿಯಲು ೧೯೪೮ರ ಫ್ಯಾಕ್ಟರಿ ಕಾಯಿದೆಗೆ ೧೯೭೬ರಲ್ಲಿ ತಿದ್ದುಪಡಿ ತಂದು ಮೂವತ್ತು ಮಹಿಳೆಯರು ಕೆಲಸಕ್ಕೆ ನೇಮಕಗೊಂಡ ಸ್ಥಳದಲ್ಲಿ ಶಿಶುಕೇಂದ್ರ ಸ್ಥಾಪನೆ, ೧೯೬೧ರಲ್ಲಿ ಹೆರಿಗೆ ಭತ್ಯೆ ಕಾಯಿದೆ, ಸಂವಿಧಾನ ಬದ್ಧವಾಗಿ ಪಂಚವಾರ್ಷಿಕ ಯೋಜನೆಗಳ ಅಡಿಯಲ್ಲಿ ೧೯೭೩ರಲ್ಲಿ ಉದ್ಯೋಗಸ್ಥ ಮಹಿಳೆಯರಿಗೆ ವಸತಿ ನಿಲಯಗಳನ್ನು ತೆರೆಯುವ ಯೋಜನೆಗಳು ಆರಂಭವಾದವು. ಕೇಂದ್ರ ಸರ್ಕಾರ Dwcra (Development of women and children in Rural areas) ಮುಂತಾದ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ.

ಮಹಿಳೆಯರ ಮೇಲಿನ ದೌರ್ಜನ್ಯ, ದಬ್ಬಾಳಿಕೆ ತಡೆಯಲು ಮಹಿಳೆಯನ್ನು ಆರ್ಥಿಕವಾಗಿ ಸದೃಢಗೊಳಿಸಲು ಏನೆಲ್ಲಾ ಕಾರ್ಯಕ್ರಮಗಳು ಅಸ್ತಿತ್ವದಲ್ಲಿದ್ದರು ಅವುಗಳ ಸೌಲಭ್ಯ ಪಡೆಯಲು ನಮ್ಮ ಸಮಾಜ ಅವಳನ್ನು ಸ್ವತಂತ್ರವಾಗಿ ಬಿಡದೆ ಬಂಧಿಸಿದೆ. ಹೆಣ್ಣು ತಮ್ಮ ಕೆಳಸ್ತರದಲ್ಲಿರಬೇಕೆಂಬ ಮನೋಭಾವ ಬೇರೂರಿರುವುದರಿಂದಲೆ ಮಹಿಳೆಯರು ಶೋಷಿಸುವ ನೆಲೆಯಿಂದ ತಪ್ಪಿಸಿಕೊಳ್ಳಲು ಆರ್ಥಿಕವಾಗಿ ಸದೃಢಗೊಳ್ಳಬೇಕಾಗಿದೆ. ಉದ್ಯೋಗ ಪಡೆದ ಸ್ತ್ರೀಯಲ್ಲಿ ಆತ್ಮಸ್ಥೈರ್ಯ, ಆತ್ಮವಿಶ್ವಾಸ, ಬದುಕುವ ಕೆಚ್ಚು ಉಂಟಾಗಿ ಸಾಂಪ್ರದಾಯಿಕ ಸಮಾಜದಿಂದ ಹೊರಬಂದು ತನ್ನ ಜೀವನ ರೂಪಿಸಿಕೊಳ್ಳುವಲ್ಲಿ ಹಾಗೂ ಇತರರಿಗೂ ನೆರವಾಗುವಲ್ಲಿ ಯಶಸ್ವಿಯಾಗಿದ್ದಾಳೆ. ಆರ್ಥಿಕ

ಸ್ವಾತಂತ್ರ್ಯವು ಇಂದಿನ ಸಮಾಜದಲ್ಲಿ ಕ್ರಾಂತಿಯನ್ನುಂಟು ಮಾಡಿದರು, ಅವಳಿಗೆ ಸ್ವಾವಲಂಬನೆ ತತ್ವ ಮತ್ತು ಸ್ವಾತಂತ್ರ್ಯ ಕಲಿಸಿದಂತಾಗುತ್ತದೆ. 'ಉದ್ಯೋಗಂ ಪುರುಷ ಲಕ್ಷಣಂ' ಎಂಬುದು 'ಉದ್ಯೋಗಂ ಪುರುಷ ಸ್ತ್ರೀ ಲಕ್ಷಣಂ' ಎಂದು ಆಗಬೇಕಿದೆ.

ನಮ್ಮ ಕಾದಂಬರಿಯ ನಾಯಕಿಯರು ಉದ್ಯೋಗ ಪಡೆಯುವ ಮೂಲಕ ಸಮಾಜ ಹೇರಿರುವ ಸಂಕೋಲೆಗಳನ್ನು ಬಿಡಿಸಿಕೊಂಡು ಬದುಕುವ ನೆಲೆ ವಿಶಿಷ್ಟವಾಗಿದೆ. ಪರಾವಲಂಬಿಯಾಗದೆ ಬದುಕಬಲ್ಲೆ ಎಂಬ ಕಿಚ್ಚು ಉದ್ಯೋಗ ಪಡೆದು ಆರ್ಥಿಕವಾಗಿ ಪ್ರಬಲರಾಗಿದ್ದರಿಂದ ತಮ್ಮ ಜೀವನ ರೂಪಿಸಿಕೊಳ್ಳುವ ಪ್ರಮೇಯಗಳು ಕಂಡುಬರುತ್ತವೆ.

ಸ. ಉಷಾರವರ 'ಕಸೂತಿ' ಕಾದಂಬರಿಯಲ್ಲಿನ ಸ್ತ್ರೀಯರಿಗೆ ಉದ್ಯೋಗ ಬದುಕುವ ಮಾರ್ಗವಾಗಿದೆ. ಮೂರು ತಲೆಮಾರಿನವರಲ್ಲು ಸಣ್ಣಪುಟ್ಟ ಉದ್ಯೋಗ ಪಡೆದಿರುವವರಿಂದ ಉನ್ನತಮಟ್ಟದ ಉದ್ಯೋಗಪಡೆಯುವವರೆಗೂ ಸ್ವಾವಲಂಬಿ ಸ್ತ್ರೀ ಪಾತ್ರಗಳನ್ನು ಕಾಣಬಹುದು. ಆರ್ಥಿಕವಾಗಿ ಅನುಕೂಲಸ್ಥರಾಗಿದ್ದರು ಮತ್ತೊಬ್ಬರ ಹಂಗಿನಲ್ಲಿರಲು ಇಷ್ಟಪಡದೆ ತಮ್ಮದೇ ಉದ್ಯೋಗಗಳಲ್ಲಿ ತೊಡಗುತ್ತಾರೆ. ತಾವು ಕಲಿತ ಶಿಕ್ಷಣವನ್ನು ಉದ್ಯೋಗದಲ್ಲಿ ಸಾರ್ಥಕಗೊಳಿಸಿಕೊಳ್ಳುತ್ತಾರೆ. ಈ ಕಾದಂಬರಿಯ ನಾಗವೇಣಿ ದುಡಿಯುವ ಅವಶ್ಯಕತೆಯೇ ಇಲ್ಲ. ಗಂಡ, ಮಾವ ವೈದ್ಯರು ಜೀವನ ನಡೆಸಲು ಯಾವ ತೊಂದರೆ ಇಲ್ಲದಿದ್ದರು ಕಸೂತಿ ಕಲಿತ ಎಷ್ಟೋ ಹೆಣ್ಣುಮಕ್ಕಳಿಗೆ ಬದುಕಲು ಆಸರೆಯಾಗುವ 'ಹೊಲಿಗೆಯ ಸಮಾಜ' ಪ್ರಾರಂಭಿಸುತ್ತಾಳೆ. ಮೂರು ಮಕ್ಕಳ ತಾಯಿಯಾದ ಸ್ವರ್ಣಾಳು ಪತಿಯ ಆದಾಯದ ಮೇಲೆ ಅವಲಂಬಿತವಾಗದೆ ನಿರ್ಗತಿಕರಾದ ವೃದ್ಧ ತಂದೆ-ತಾಯಿಗೆ ಆಸರೆಯಾಗಲು ಶಿಕ್ಷಕಿಯಾಗಿ ಕೆಲಸಕ್ಕೆ ಹೋಗುವ ಮೂಲಕ ಸಂಸಾರವನ್ನು ನಿಭಾಯಿಸುತ್ತಾಳೆ.

ಸಾಮಾಜಿಕ ವ್ಯವಸ್ಥೆಯು ಹೆಣ್ಣನ್ನು ಆದಾಯವಿಲ್ಲದ ಮನೆ, ಗದ್ದೆ ಮುಂತಾದ ಗೃಹಕೃತ್ಯಗಳಿಗೆ ಸೀಮಿತಗೊಳಿಸಿ ಅವಳ ದುಡಿಮೆಗೆ ಮಾನ್ಯತೆ ಇಲ್ಲದಂತೆ ಮಾಡಿದೆ. ಮುಂಜಾನೆಯಿಂದ-ಸಂಜೆಯವರೆಗೂ ಸಂಸಾರದ ಚಾಕರಿಮಾಡುವ ಹೆಣ್ಣಿಗಿಂತ ಮೂರು/ನಾಲ್ಕು ತಾಸು ದುಡಿದು ಆದಾಯ ಗಳಿಸಿದ ಪುರುಷನ ಸ್ಥಾನ ಸಮಾಜದಲ್ಲಿ ಉನ್ನತವಾದದ್ದು. ಸಂಪಾದಿಸದಿದ್ದರು ಹೆಣ್ಣಿನ ಮೇಲೆ ತೋರುವ ದರ್ಪ, ಪೌರುಷತ್ವದಿಂದ ಸಮಾಜದಲ್ಲಿ ಅವನು ಉತ್ತಮನೆ ಆಗಿರುತ್ತಾನೆ. ಅಂತಹವನನ್ನು ತಿದ್ದಿ ಮನುಷ್ಯನನ್ನಾಗಿ ರೂಪಿಸುವ ಮೂಲಕ ಆದಾಯ ಮೂಲಗಳಿಲ್ಲದ ಕುಟುಂಬವನ್ನು ತಾನು ದುಡಿಯುತ್ತ ಸೀತೆ ಮುನ್ನೆಡೆಸುತ್ತಾಳೆ. ಸೀತೆಯ ಗಂಡ ಮೂರ್ತಿ ಮೂರು ಮಕ್ಕಳ ತಂದೆಯಾಗಿದ್ದರು ಸ್ವಲ್ಪವೂ ಜವಾಬ್ದಾರಿ ಇಲ್ಲದೆ "ನೂಲುವುದು,

ನೇಯುವುದು, ಓದುವುದು ಕಲಿಸುತ್ತ ಖಾದಿಬಟ್ಟೆ ಹಾಕಿಕೊಂಡು ಪುಂಡ ಪೋಕರಿಗಳ ಜೊತೆ ಅಲೆಯುತ್ತ ಲಕ್ನೋ, ಹೈದರಾಬಾದು, ನಾಗಪುರ, ದೆಹಲಿ ಎಂದು ತಿರುಗುತ್ತ ಐವತ್ತು ರೂಪಾಯಿ ಸಂಬಳ ತಂದು ತಿಂಗಳಿಗೊಂದು ಸಾರಿ ಹೆಂಡತಿಯ ಕೈಲಿಕೊಟ್ಟು ವಾರಕ್ಕೆ ನಾಲ್ಕು ಜನ ಗಡ್ಡ ಬಿಟ್ಟ ಖಾದಿ ಜುಬ್ಬದ ಪೋಲಿಗಳನ್ನು ಕರೆದುಕೊಂಡು ಬಂದು, ಅವರಿಗೆ ಒಂದುವಾರ ಅಡುಗೆ ಮಾಡಿ ಹಾಕುವಂತೆ ಹೇಳುವ"[೨೧] ಬೇಜವಬ್ದಾರಿ ಮನುಷ್ಯ. ಗಂಡನ ವರ್ತನೆಯಿಂದ ಬೇಸತ್ತಿದ್ದ ಸೀತೆ ಕಸೂತಿ ಕಲಿತಿದ್ದರಿಂದ ನಾಗವೇಣಿಯ ಸಮಾಜಕ್ಕೆ ಹೊಲಿಗೆ ಹೇಳಿಕೊಟ್ಟು, ಬರುವ ಆದಾಯದಿಂದ ಸಂಸಾರ ನಿಬಾಯಿಸುತ್ತಾಳೆ. ಮೂರ್ತಿಯನ್ನು ಬೆಂಗಳೂರಿನ ಖಾಸಗಿ ಶಾಲೆಯಲ್ಲಿ ಕೆಲಸಕ್ಕೆ ಕಳುಹಿಸಿಕೊಟ್ಟು ಆತನೂ ಸ್ವಇಚ್ಛೆಯಿಂದ ಬದುಕಲು ಅವಕಾಶ ಮಾಡಿಕೊಡುತ್ತಾಳೆ. ಸೀತೆಗೆ ಮೂರ್ತಿ ಇಲ್ಲಿದ್ದರೆ ಆದಾಯಕ್ಕಿಂತ ಖರ್ಚು ಹೆಚ್ಚು ಎಂಬುದನ್ನರಿತು ಆತನ ಆದಾಯ ನಿರೀಕ್ಷಿಸದೆ ಸಂಸಾರವನ್ನು ನಿಬಾಯಿಸುವ ನಿರ್ಧಾರ ಮಾಡುತ್ತಾಳೆ. ನಾಗವೇಣಿ ಜೊತೆ ಸೇರಿ ಶಿಶುವಿಹಾರ ಪ್ರಾರಂಭಿಸಿ 'ಸೀತಾ ಸದನ'ವೆಂಬ ಹೊಲಿಗೆ ಸಮಾಜ ಕಟ್ಟುತ್ತಾಳೆ. ಶಿಶುವಿಹಾರದ ಮೇಡಂ, ಹೆಡ್‌ಮೇಡಂ, ಜವಾನಿ, ಗುಮಾಸ್ತೆ ಎಲ್ಲವೂ ಆಗಿದ್ದ ಸೀತೆ ಅದೇ ಶಿಶುವಿಹಾರವನ್ನು ಹೈಸ್ಕೂಲಾಗಿ ಬೆಳೆಸಿ ಅಲ್ಲಿನ ಹೆಡ್‌ಮೇಡಂ ಆಗುತ್ತಾಳೆ. ಮೂರ್ತಿಯ ಸಂಬಳವನ್ನು ಕೇಳದೆ ಸ್ವಂತ ತನ್ನ ದುಡಿಮೆಯಿಂದ ಮನೆ, ಮಕ್ಕಳನ್ನು ನಿಭಾಯಿಸುವ ಸೀತೆಯ ಆತ್ಮಸ್ಥೈರ್ಯ ಮೆಚ್ಚುಗೆ ತರುತ್ತದೆ. ಆರ್ಥಿಕವಾಗಿ ಸುಭದ್ರತೆ ಕಂಡುಕೊಂಡು ಗಂಡ–ಮಕ್ಕಳೊಂದಿಗೆ ನೆಮ್ಮದಿ ಜೀವನ ಸಾಗಿಸುತ್ತಾಳೆ.

ಸಾಮಾಜಿಕ ಪರಿಸರದಲ್ಲಿ ಹೆಣ್ಣು ಆದಾಯ ಗಳಿಸುವಲ್ಲಿ ಅಸಮರ್ಥಳೆಂಬ ಮನೋಭಾವ ಬೆಳೆಸಿ ತಮ್ಮ ಅಧಿಪತ್ಯ ಸ್ಥಾಪಿಸುವ ಮೂಲಕ ಸಮಾಜದಲ್ಲಿ ಮೇಲಿನ ಸ್ಥಾನವನ್ನು ಹೊಂದಿರುವ ಪುರುಷವರ್ಗ ಹೆಣ್ಣನ್ನು ಆದಾಯರಹಿತಳನ್ನಾಗಿಯೆ ನೋಡುತ್ತಿದೆ. ಅದೇ ಹೆಣ್ಣು ಸಂಸಾರದ ಭಾರ ಹೊತ್ತು ನಡೆಸುವಲ್ಲಿ ಪುರುಷರು ಅಸಮರ್ಥರಾದಾಗ ತಾವು ಆದಾಯಗಳಿಸುವ ಮಾನವ ಸಂಪನ್ಮೂಲ ಎಂಬುದನ್ನ ಸೀತೆ, ಸರಸ್ವತಿಯರು ಸಾಬೀತುಪಡಿಸಿದ್ದಾರೆ. ಸೀತೆ ಪತಿಯ ಬೇಜವಾಬ್ದಾರಿತನದಿಂದ ಬೇಸತ್ತು ಉದ್ಯೋಗ ಗಿಟ್ಟಿಸಿಕೊಂಡು ಸಮಾಜದಲ್ಲಿ ಒಬ್ಬ ಗಣ್ಯವ್ಯಕ್ತಿಯಾಗುತ್ತಾಳೆ. ಸರಸ್ವತಿ ಪತಿಯ ಆದಾಯ ಮೂಲಗಳೆಲ್ಲವೂ ಮುಚ್ಚಿಹೋಗಿ ಲಕ್ವದಿಂದ ಬಳಲುತ್ತಿರುವಾಗ ಪರರ ನೆರವು ಬೇಡದೆ ಕೆಲಸಕ್ಕೆ ಸೇರುತ್ತಾಳೆ. ಸೀತಾ ಸದನದಲ್ಲಿ ತಿಂಗಳಿಗೆ ೧೫೦ ರೂಪಾಯಿ ಸಂಪಾದಿಸುತ್ತ ಕಸೂತಿ ಕೆಲಸ ಮಾಡಿಕೊಂಡು ಗಂಡನಿಗೆ ಆಸರೆಯಾಗಿ ಬದುಕುತ್ತಾಳೆ.

ಸಾಂಪ್ರದಾಯಿಕ ಸಮಾಜದಲ್ಲಿ ವಾಸಿಸುವ ಹಿರಿಯರು, ಸಂಪ್ರದಾಯಸ್ಥರು ಸ್ತ್ರೀಯರ ಉದ್ಯೋಗಕ್ಕೆ ಆಕ್ಷೇಪಣೆ ತೋರುತ್ತಾ ಬಂದಿದ್ದಾರೆ. ಹೆಣ್ಣೆಂದರೆ ಮನೆಕೆಲಸದಲ್ಲಿ ಮಗ್ನಳಾಗಿರಬೇಕು ಹೊರಹೋಗಿ ದುಡಿಯುವುದು ಗಂಡಸರ ಕೆಲಸ ಎಂಬುದನ್ನು ಚಿಕ್ಕವಯಸ್ಸಿನಿಂದಲೇ ಬಿತ್ತುತ್ತಾರೆ. ಹೆಣ್ಣಿಗೆ ಮೂಲಭೂತ ಅವಶ್ಯಕತೆಗಳಾದ ಊಟ–ಬಟ್ಟೆಗೆ ಸೀಮಿತಗೊಳಿಸಿ, ಅವಳ ಬಯಕೆ, ಆಸೆ, ಆಕಾಂಕ್ಷೆ ಕನಸುಗಳು ಮೊಳೆಯುವುದರಲ್ಲೇ ಚಿವುಟಿ ಹಾಕುತ್ತಾರೆ. ಅವಳು ಪರಾವಲಂಬಿಯಾಗಿ ಬದುಕಬೇಕೆಂಬುದನ್ನು ಹೆಣ್ಣಿನ ಮೇಲೆ ಹೇರಿದ್ದಾರೆ. ಚಿಕ್ಕವಳಿದ್ದಾಗ ಅಪ್ಪ, ತಮ್ಮ, ಅಣ್ಣ ಮದುವೆಯ ನಂತರ ಗಂಡನ ಆಶ್ರಯವೆಂದು ಹೇಳುವ ಸಮಾಜ ಆಶ್ರಯ ಬೇಡುವವಳಾಗಿಯೇ ಮಾಡಿರುತ್ತದೆ. ವೈಧವ್ಯ ಉಂಟಾದರೆ ಅವಳ ಸ್ಥಿತಿ ಏನೆಂಬುದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ವಿಧವೆಯಾದವರು ತಮ್ಮ ಸ್ವಾತಂತ್ರ್ಯ, ಅಧಿಕಾರ ಕಳೆದುಕೊಂಡು ಆರ್ಥಿಕ ಭದ್ರತೆಗಾಗಿ ಅಪ್ಪ, ಅಣ್ಣ, ತಮ್ಮ ಅಥವಾ ಕಾಮುಕರ ಕಪಿಮುಷ್ಠಿಗೆ ಸಿಲುಕಿ ನಲುಗಬೇಕಾಗುತ್ತದೆ. ಇಂತಹ ಅಮಾನವೀಯ ಪುರುಷಪ್ರಧಾನತೆಯ ನೀತಿಗಳನ್ನು ಅರಿತಿದ್ದರಿಂದ ಗಂಡ ಕಳೆದುಕೊಂಡು ಬಾಲವಿಧವೆಯಾದ (ಸಾವಿತ್ರಿ)ಸಾತುವಿಗೆ ಅವಳ ತಂದೆ ವಿದ್ಯಾಭ್ಯಾಸ ಕೊಡಿಸಿ ಚಾಮರಾಜನಗರ ಶಾಲೆಯಲ್ಲಿ ಶಿಕ್ಷಕಿಯಾಗುವವರೆಗೆ ಬೆನ್ನೆಲುಬಾಗಿರುತ್ತಾರೆ. ಸಾತು ಶಿಕ್ಷಕಿಯಾಗಿ ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾಳೆ. ಗಂಡನ ಮರಣದಿಂದ ನೆಮ್ಮದಿ ಕಂಡುಕೊಂಡ ಜಯಮ್ಮ ಶಿಶುವಿಹಾರದಲ್ಲಿ ಶಿಕ್ಷಕಿಯಾಗುತ್ತಾಳೆ. ಗಂಡ ಬದುಕಿದ್ದಾಗಲೂ ದುಡಿಯುತ್ತ, ಒಂಟಿತನದ ಬದುಕು ನಡೆಸುತ್ತಿದ್ದ ಜಯಮ್ಮಳಿಗೆ ವೈಧವ್ಯದ ನಂತರದ ಬದುಕಲ್ಲಿ ಯಾವುದೇ ವ್ಯತ್ಯಾಸವಿಲ್ಲದೆ ಜೀವಿಸಲು ಸಹಕಾರಿಯಾಗುತ್ತದೆ. ಉದ್ಯೋಗದಿಂದ ಇಲ್ಲಿನ ಹೆಂಗಳೆಯರು ಆರ್ಥಿಕ ಭದ್ರತೆ ಕಂಡುಕೊಳ್ಳುವುದಲ್ಲದೆ ತಮ್ಮ ನೋವು, ಹತಾಶೆ, ಜುಗುಪ್ಸೆಗಳಿಂದ ಹೊರಬಂದು ಏಕಾಂಗಿಯಾಗಿ ಬದುಕಬಲ್ಲ ಆತ್ಮಸ್ಥೈರ್ಯ ಬೆಳೆಸಿಕೊಂಡು ನೆಮ್ಮದಿ ಜೀವನ ನಡೆಸುತ್ತಾರೆ.

ಆರ್ಥಿಕ ಸ್ವಾತಂತ್ರ್ಯ ಪಡೆದ ಹೆಣ್ಣು ಉನ್ನತ ಉದ್ಯೋಗ ಪಡೆಯುವ ಮೂಲಕ ಜೀವನ ಭದ್ರತೆ ಉತ್ತಮಗೊಂಡಂತೆ ಸ್ವತಂತ್ರವಾಗಿ ಬದುಕಲು ಬಯಸುತ್ತಾಳೆ. ತಾನು ಪರಾವಲಂಬಿಯಲ್ಲವೆಂದು ಸಮಾಜದಲ್ಲಿನ ಸಾಂಪ್ರದಾಯಿಕ ಮೌಢ್ಯಗಳನ್ನು ಒಪ್ಪಿಕೊಳ್ಳದೆ ಸ್ವತೀರ್ಮಾನ, ಸ್ವನಿರ್ಧಾರಕ್ಕೆ ಮಾನ್ಯತೆ ಕೊಡಬಯಸುವಂತೆ ವೀಣಾ, ವಿದ್ಯಾ, ಕಲಾರವರು ನಿಲ್ಲುತ್ತಾರೆ. ವೀಣಾ ಕಾಲೇಜೊಂದರಲ್ಲಿ ಉದ್ಯೋಗ ಪಡೆಯುತ್ತಾಳೆ. ಕಲಾ ವೈದ್ಯೆಯಾಗುತ್ತಾಳೆ. ಬ್ಯಾಂಕಿನಲ್ಲಿ ಅಧಿಕಾರಿಯಾದ ಮಾಲಿನಿ, ಮಹಿಳಾ ಸಂಘಟನೆಯ ಸದಸ್ಯೆಯಾದ ಶ್ರೀಲತಾ ಉನ್ನತ ಉದ್ಯೋಗ ಪಡೆದು ತಮ್ಮ ಜೀವನವನ್ನು ತಾವೇ ರೂಪಿಸಿಕೊಂಡು ಸ್ವತಂತ್ರರೆಂಬುದನ್ನು ಮೆರೆದಿದ್ದಾರೆ.

ಹೆಣ್ಣು ಅನೇಕ ಜವಾಬ್ದಾರಿಯುತ ಕೆಲಸಗಳನ್ನು ನಿಭಾಯಿಸುತ್ತಿದ್ದಾಳೆ. ಶಿಕ್ಷಕಿ, ಉಪನ್ಯಾಸಕಿ, ಕಸೂತಿ ಕೆಲಸಗಳಲ್ಲಿ ಹೆಚ್ಚಾಗಿ ಕಾಣಿಸಿಕೊಂಡಿರುವ ಈ ಕಾದಂಬರಿಯ ಮಹಿಳಾ ಪಾತ್ರಗಳ ಗುಂಪಿನಲ್ಲಿ ವಿದ್ಯಾ ವಿಶಿಷ್ಟವಾಗಿ ನಿಲ್ಲುತ್ತಾಳೆ. ಅಜ್ಜಿ ಸರಸ್ವತಿಯಿಂದ ಕಸೂತಿ, ಅಡುಗೆ, ಹೊಲಿಗೆಗಳ ಬ್ರಹ್ಮವಿದ್ಯೆಯನ್ನು ಪ್ರಯೋಗಿಸುತ್ತಾ ಹೊರಹೋಗಿ ಆದಾಯಗಳಿಸುವವರಿಗೆ ಸಹಾಯಕಳಾಗಿದ್ದ ವಿದ್ಯಾಳಿಗೆ ನಿರುದ್ಯೋಗಿಯ ಆಪಾದನೆಗಳು ಬೀಳುತ್ತಿದ್ದವು. ಇದರಿಂದ ವಿದ್ಯಾಳಲ್ಲಿ “ಅಮ್ಮ ತರುವ ಸಂಬಳಕ್ಕೆ ಬೆಲೆಯಿದೆ. ವೀಣಾಳ ಓದಿಗೆ ಬೆಲೆಯಿದೆ. ಕಲಾಳ ಉಪದೇಶಗಳಿಗೆ ಬೆಲೆಯಿದೆ. ಕುಮಾರನ ತಲ್ಲಣಗಳಿಗೆ ಬೆಲೆಯಿದೆ. ಆದರೆ.... ತಾನು ಮಾಡುವ ಕೆಲಸಕ್ಕೆ ಬೆಲೆಯಿಲ್ಲವಲ್ಲ”[೨೨] ಎಂದು ದುಃಖಿಸುತ್ತಾಳೆ. ಮನೆಯಲ್ಲಿ ಮಾಡುವ ಆದಾಯರಹಿತ ಕೆಲಸ ಶ್ರಮದಾಯಕವಲ್ಲ, ಆದಾಯಗಳಿಸದೆ ಮನೆಯಲ್ಲಿ ತನ್ನ ಸ್ಥಾನಮಾನ ಕೀಳೆಂಬುದನ್ನು ಅರಿತು ಗೆಳತಿಯರ ಸಹಾಯದಿಂದ ‘ಲಾವಣ್ಯ ಮ್ಯಾಚಿಂಗ್ ಸೆಂಟರ್’ ಸ್ಥಾಪಿಸುತ್ತಾಳೆ. ಬಂಡವಾಳ ಹೂಡುವ ಮೂಲಕ ಸ್ವಯಂ ಉದ್ಯೋಗ ಪ್ರಾರಂಭಿಸುವ ಮೊದಲ ಹೆಣ್ಣಾದ ವಿದ್ಯಾ ತನ್ನ ನೈಪುಣ್ಯ ಬಲದಿಂದ ಅಜ್ಜಿಯ ಸಿಂಗರ್ ಮಿಷನ್ನಿಗೆ ನಿಜವಾದ ಉತ್ತರಾಧಿಕಾರಿಯಾಗುತ್ತಾಳೆ. ತನ್ನ ಉದ್ಯೋಗದಿಂದ ಆದಾಯ ಗಳಿಸಿ, ಹೊಲಿಗೆಯಂಗಡಿ ಪ್ರಾರಂಭಿಸಿದ ಗೆಳತಿಯರಿಗೂ ಬಂಡವಾಳ ಒದಗಿಸಿ ಸಾಮಾಜಿಕ ಋಣದ ಪಾಲನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾಳೆ. ಹೆಣ್ಣು ಹೆಚ್ಚಾಗಿ ಓದಿಕೊಂಡೇ ಉದ್ಯೋಗದ ಹಾದಿ ಕ್ರಮಿಸಬೇಕಿಲ್ಲ. ಸಾಧಾರಣ ಶಿಕ್ಷಣ ಪಡೆದಿದ್ದರು ಸ್ವಉದ್ಯೋಗ ಸ್ಥಾಪಿಸಿಕೊಳ್ಳುವ ಮೂಲಕ ‘ತನ್ನ ಕಾಲ ಮೇಲೆ ತಾನು ನಿಲ್ಲಬಹುದು’ ಎಂಬುದು ವಿದ್ಯಾ ಪಾತ್ರದ ಮೂಲಕ ನಿರೂಪಿತಗೊಂಡಿದೆ. ಅಂದರೆ ಹೆಣ್ಣು ಯಾವುದರಲ್ಲು ಕಡಿಮೆಯಿಲ್ಲ ಎಂಬುದಾಗಿದೆ.

ಈ ಕಾದಂಬರಿಯಲ್ಲಿ ಬರುವ ಸ್ತ್ರೀಯರ ಚಲನೆಗಳಲ್ಲಿ ಮೂರು ತಲೆಮಾರಿನ ಅಂತರವಿದ್ದರು ಸೋಮಾರಿಯಾಗಿ, ಪರಾವಲಂಬಿಗಳಾಗಿ ಕೂರುವುದಿಲ್ಲ. ನಿರ್ಗತಿಕರಾದಾಗ ಕಣ್ಣೀರು ಮಿಡಿಯುತ್ತ ಆಶ್ರಯ ಬೇಡುವವರಾಗಿರುವುದಿಲ್ಲ. ಅವರು ಬಂದ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸುವಲ್ಲಿ ಪುರುಷರಿಗಿಂತ ಕಡಿಮೆ ಇಲ್ಲವೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಪುರುಷಪ್ರಧಾನ ವ್ಯವಸ್ಥೆಯ ಜಿಡ್ಡುಗಟ್ಟಿದ ಸಂಪ್ರದಾಯಗಳನ್ನೆ ಅಲುಗಾಡಿಸಿ ಆರ್ಥಿಕವಾಗಿ ಸಮೃದ್ಧರಾಗುವ ಮೂಲಕ ಹೊಸ ಸಮಾಜದ ಸೃಷ್ಟಿಗೆ ಕಾರಣೀಭೂತರಾಗಿ ಸ್ವತಂತ್ರ ಜೀವನವನ್ನು ಕಟ್ಟಿಕೊಳ್ಳುವುದನ್ನು ಮನಗಾಣುತ್ತೇವೆ. ಚಿಕ್ಕಪುಟ್ಟ ಕೆಲಸಗಳಿಂದ ಉನ್ನತಮಟ್ಟದ ಉದ್ಯೋಗ ಪಡೆಯುವಂತಹ ಹೆಂಗಳೆಯರ ಛಲ, ಎದೆಗಾರಿಕೆ ಕಸೂತಿ ಕಾದಂಬರಿಯಲ್ಲಿ ಬಿಂಬಿತವಾಗಿದೆ.

ಕುಟುಂಬವನ್ನು ನಡೆಸುವಲ್ಲಿ ಉದ್ಯೋಗಸ್ಥ ಹೆಣ್ಣು ಸಮಾಜಬಾಹಿರವಾದ ಜೀವನ ನಡೆಸಲಿಚ್ಛಿಸದೆ ತನ್ನ ತಪ್ಪಿನ ಅರಿವಾಗಿ ತಪ್ಪಿತಸ್ಥ ಗಂಡನ ಮನಸ್ಥಿತಿ ಅರಿತು ಏಕಾಂಗಿಯಾಗಿ ಬದುಕಬಲ್ಲ ಸ್ಥೈರ್ಯ ಎಚ್.ಎಸ್.ಪಾರ್ವತಿಯವರ 'ಜಬಾಲಾ' ಕಾದಂಬರಿಯಲ್ಲಿನ ಗೀತಾಳಲ್ಲಿ ಕಾಣುತ್ತದೆ. ಗೀತಾ ಗಂಡನನ್ನು ಬಿಟ್ಟು ಬದುಕುವ ನಿರ್ಧಾರ ತಾನು ಉನ್ನತ ವ್ಯಾಸಂಗ ಪಡೆದಿದ್ದು ಸರಿಸಮಾನವಾದ ಉದ್ಯೋಗ ದೊರಕೇ ದೊರಕುತ್ತದೆ ಎಂಬ ಆತ್ಮವಿಶ್ವಾಸದಿಂದ. ವಿವಾಹ ಪೂರ್ವದಲ್ಲಿ ಗೀತಾ ಓದುತ್ತಿದ್ದ ಕಾಲೇಜೊಂದರಲ್ಲಿ ಲೆಕ್ಚರರ್ ಆಗಿ ಉದ್ಯೋಗ ಪಡೆದಿದ್ದರು ವಿವಾಹದ ನಂತರ ಅತ್ತೆ-ಗಂಡನ ವಿರೋಧದ ಕಾರಣ ಮನೆಯಲ್ಲುಳಿಯುತ್ತಾಳೆ. ಇದು ಗಂಡ ಒತ್ತಾಯದ ಹೇರಿಕೆಯಾದ್ದರಿಂದ ಕೆಲಸ ಬಿಡುವುದು ಅನಿವಾರ್ಯವಾಗುತ್ತದೆ. ಇದು ಮದುವೆಯಾದ ಹೆಣ್ಣನ್ನು ಪರಾವಲಂಬಿತನಕ್ಕೆ ದೂಡಲು ಬಳಸುವ ಮೊದಲ ಅಸ್ತ್ರವಾಗಿದೆ. ಈ ಅಸ್ತ್ರಕ್ಕೆ ಬಲಿಯಾಗಿ ಗೀತಾ ಕೆಲಸ ಬಿಡುವುದು ಅನಿವಾರ್ಯವಾಗುತ್ತದೆ. ಅದೇ ಉದ್ಯೋಗದ ಅನಿವಾರ್ಯತೆ ಪತಿಯಿಂದ ದೂರವಾಗುವ ನಿರ್ಧಾರದಲ್ಲಿ ಸಹಕಾರಿಯಾಗುತ್ತದೆ.

ಗೀತಾ ಪರಾವಲಂಬಿಯಾಗಿದ್ದರೆ ಸಮಾಜದಲ್ಲಿ ಬಂಜೆ ಎಂಬ ಶಬ್ದದಿಂದಲೆ ಹಣ್ಣಾಗಿ ಕೊಳೆತುಹೋಗುತ್ತಿದ್ದಳು. ಗರ್ಭಿಣಿಯಾದ ನಂತರವು ರಾಜಶೇಖರನಿಂದ ಬಿಡುಗಡೆ ಪಡೆಯುವ ನಿರ್ಧಾರ ಆತನೊಂದಿಗೆ ಅರ್ಥವಿಲ್ಲದ ಬಾಳು ಬಾಳುವುದರ ಅನರ್ಥತೆಯನ್ನೂ, ತಾನು ದುಡಿದು ಬದುಕಬಲ್ಲೆ ಎಂಬ ಸ್ವಾಭಿಮಾನವನ್ನೂ ಬಿಂಬಿಸಿದ್ದಾಳೆ.

ಗಂಡ, ಸಂಸಾರ ತೊರೆದು ಮನೆಯಿಂದ ಹೊರಹೋಗಿ ದುಡಿಯುವ ಅಥವಾ ಸಂಪಾದಿಸುವ ಮೂಲಕ ಗೀತಾಳಲ್ಲಿ ಸ್ವಾವಲಂಬಿಯಾಗಿ ಬದುಕುವ ಕೆಚ್ಚು ಕಂಡುಬಂದರೆ, ಸಂಸಾರಸ್ಥೆಯಾಗಿಯೆ ದುಡಿದು ಬದುಕುವ ಕೆಚ್ಚು ಬಿ.ಟಿ.ಲಲಿತಾ ನಾಯಕ್‌ರವರ 'ನೆಲೆ-ಬೆಲೆ' ಕಾದಂಬರಿಯ ಜಯಾಳಲ್ಲಿ ಕಂಡುಬರುತ್ತದೆ. ನಗರವಾಸಿ ಸ್ತ್ರೀಯರ ಉದ್ಯೋಗ ಒಂದು ತೆರನಾದರೆ, ಗ್ರಾಮೀಣವಾಸಿ ಸ್ತ್ರೀಯರ ಉದ್ಯೋಗ ಬೇರೆಯದೇ ಆಗಿರುತ್ತದೆ. ಈ ಕಾದಂಬರಿಯ ಪ್ರತಿಯೊಂದು ಹೆಣ್ಣು ಬಿಡುವಿಲ್ಲದೆ ಮನೆಯ ಕೆಲಸಗಳಲ್ಲಿ ಭಾಗಿಯಾಗಿರಬೇಕಾಗುತ್ತದೆ. ಪಾತ್ರೆ ತೊಳೆಯುವುದು, ಬಟ್ಟೆ ತೊಳೆಯುವುದು, ಅಡುಗೆ ಕೆಲಸ, ಇವುಗಳ ಜೊತೆಗೆ ಭತ್ತ, ರಾಗಿ, ಅಕ್ಕಿಗಳನ್ನು ಕುಟ್ಟುವುದು, ಕೇರುವುದು, ಸೋಸುವುದು ಮತ್ತು ಗದ್ದೆ ಕೆಲಸಗಳಿದ್ದಾಗ ಗಂಡು ಆಳಿನ ಸಮವಾಗಿ ಬಿತ್ತುವುದು, ಕಳೆತೆಗೆಯುವುದು ಮುಂತಾದ ಕೆಲಸಗಳಲ್ಲಿ ತೊಡಗುತ್ತಾರೆ. ಈ ಕೆಲಸಗಳನ್ನು ಮಾಡಿದರು ಯಾವುದೇ ಗಂಡಿಗಿರುವ ಮಾನ್ಯತೆ ಹೆಣ್ಣಿಗಿರಲಿಲ್ಲವೆಂಬುದಷ್ಟೂ ಮಾತ್ರ ಸತ್ಯ. ಇವರಿಗೆ ವಿಶ್ರಾಂತಿ ಸಿಗುತ್ತಿದ್ದದ್ದು ಬಸುರಿ, ಬಾಣಂತಿಯರಾದಾಗಲೆ. ಆ ಸೌಭಾಗ್ಯ

ಕಾದಂಬರಿಯಲ್ಲಿ ಎಲ್ಲಾ ಹೆಣ್ಣುಮಕ್ಕಳ ಪಾಲಿಗೂ ದೊರೆಯುತ್ತಾದರೂ ಜಯಾಳ ಪಾಲಿಗೆ ವಿಶ್ರಾಂತಿಯೇ ಇಲ್ಲ. 'ಬಂಜೆ' ಎಂಬ ನಿಂದನೆಗೆ ಮಾನಸಿಕವಾಗಿ ಜರ್ಜರಿತಳಾದರೆ, ಮತ್ತೊಂದೆಡೆ ದುಡಿಯುವುದರಿಂದ ದೈಹಿಕ ದಂಡನೆಗೆ ಒಳಗಾಗುತ್ತಾಳೆ ಎಂಬ ನಿರೂಪಣೆ ಕಾದಂಬರಿಯಲ್ಲಿ ಬರುತ್ತದೆ.

ಹಳ್ಳಿಯಲ್ಲಿ ಅವಿಭಕ್ತ ಕುಟುಂಬಗಳು ಸರ್ವೇಸಾಮಾನ್ಯ ಮನೆಯ ಕೆಲಸಗಳ ಜೊತೆಗೆ ಇತರರ ಮಕ್ಕಳ ಲಾಲನೆ-ಪಾಲನೆಯು ಜಯಾಳ ಪಾಲಿಗೆ ಒಮ್ಮೊಮ್ಮೆ ಬರುತ್ತಿದ್ದರಿಂದ ದುಡಿಯುವ ಹೆಣ್ಣಾಗಿದ್ದಳು. ಅಕ್ಕನ ಬಾಣಂತನವು ಜಯಾಳಿಗೆ ಬರುತ್ತದೆ. ಈ ಬಾಣಂತನ ಜಯಾಳ ಜೀವನದಲ್ಲಿ ಆದ ದೊಡ್ಡ ಬದಲಾವಣೆಯನ್ನು ಸೂಚಿಸುತ್ತದೆ. ಅವಳಲ್ಲಿ ನಗರ ಜೀವನಕ್ರಮ ತಾನೇತಾನಾಗಿ ಬೆಳೆಯುತ್ತಾ ಹೋಗುತ್ತದೆ. ಇದರಿಂದ ಸ್ವಾವಲಂಬಿಯಾಗಿ ಬದುಕಬಲ್ಲ ಆತ್ಮವಿಶ್ವಾಸ ಅವಳಲ್ಲಿ ಮೂಡುತ್ತದೆ. ಗಂಡ ಎರಡನೇ ಮದುವೆಗೆ ಸಿದ್ಧವಾಗುವಾಗ ಗೆಳತಿ ರೇಖಾಳು ಕೇಳುವ ಮುಂದೆ ನಿನ್ನ ಗುರಿ ಏನು? ಎಂಬ ಪ್ರಶ್ನೆಗೆ "ಕೆಲಸ ಮಾಡ್ತಾ ಕಾಲ ಕಳೆಯೋದೇ ಗುರಿ! ಯಾವ ಸ್ಥಾನ ಸಿಗದೆ ಹೋದ್ರೂ ಕೆಲಸದಾಳಿನ ಸ್ಥಾನವಂತೂ ಈ ಮನೆಯಲ್ಲಿ ಖಾಯಂ ಆಗಿ ಇದ್ದೇ ಇದೆ'.[೨೩] ಎನ್ನುವ ಜಯ ಎಲ್ಲರ ಹಿತ ಬಯಸುತ್ತ ದುಡಿದು ಬದುಕಬಲ್ಲೆ ಎಂಬ ಆತ್ಮಸ್ಥೈರ್ಯದಿಂದ ಹೇಳುತ್ತಾಳೆ. ನಗರವಾಸಿಗರಿಗೆ ಉದ್ಯೋಗವಕಾಶಗಳು ಹೆಚ್ಚಾಗಿದ್ದು ಆದಾಯಗಳಿಸಿ ಜೀವನ ಸಾಗಿಸಿದರೆ, ಹಳ್ಳಿವಾಸಿಗರು ಆದಾಯವಿಲ್ಲದೆ ಊಟ-ಬಟ್ಟೆ ಗಿಟ್ಟಿಸಿಕೊಳ್ಳಲು ಯಾವ ಭಯವೂ ಇಲ್ಲದೆ ದುಡಿಮೆ ಮಾಡಿ ಬದುಕುಬಲ್ಲೇ ಎಂಬ ಜಯಾರಂತಹವರು ಕಾಣಸಿಗುತ್ತಾರೆ ಎಂಬ ಮಾತು ವಾಸ್ತವಕ್ಕೆ ಹತ್ತಿರವಾಗಿದೆ.

ಆಧುನಿಕ ಕಾಲದ ಸ್ವತಂತ್ರ ಆಲೋಚನೆಯ ಹೆಣ್ಣು ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲು ತಾನು ಸ್ವಾವಲಂಬಿಯಾಗಿ ಬದುಕಬಲ್ಲೆ ಎಂಬುದು ವೀಣಾ ಶಾಂತೇಶ್ವರರವರ 'ಗಂಡಸರು' ಕಾದಂಬರಿಯಲ್ಲಿ ವ್ಯಕ್ತವಾಗಿದೆ. ಮುಗ್ಧ ಹೆಣ್ಣು ಶಾಂತಿ ನಾಲ್ವರ ಪ್ರೀತಿಯ ಮಾತುಗಳಿಗೆ ಬಲಿಯಾಗಿ ಮೋಸದ ಜ್ವಾಲೆಯಿಂದ ಸುಟ್ಟುಹೋಗುತ್ತಿದ್ದ ಅವಳ ಮನಕ್ಕೆ ತಂಪನ್ನು ನೀಡುವುದು ಉದ್ಯೋಗ. ಕಾಲೇಜಿನ ಹಂತದಲ್ಲಿರುವಾಗಲೆ ಇಬ್ಬರು ಪುರುಷರ ಪ್ರೀತಿಯ ನಾಟಕದಿಂದ ಬೇಸತ್ತು, ಸತಾರೆಯಿಂದ ತಂದೆ-ತಾಯಿ ಒಪ್ಪಿಗೆ ಪಡೆದು ಮುಂಬೈನಲ್ಲಿ ಮಾಂಶಿಯ ಮನೆಯಲ್ಲಿದ್ದುಕೊಂಡು ಹೊಸ ಕನಸಿನಲೋಕಕ್ಕೆ ಪಾದಾರ್ಪಣೆ ಮಾಡುವಂತೆ ಕೆಲಸಕ್ಕೆ ಸೇರುತ್ತಾಳೆ. 'ಶಾಮಾಣಿಕ ಚಂದ ಎಂಡ್‌ಸನ್ಸ್ ಲಿಮಿಟೆಡ್'ನವರ ಕೈಗಾರಿಕಾ ಸಾಮಾನುಗಳ ಶೋರೂಮ್‌ನಲ್ಲಿ ರಿಸೆಪ್ಶನಿಸ್ಟ್ ಕೆಲಸದಲ್ಲಿ ತಲ್ಲೀನಳಾಗಿರುತ್ತಾಳೆ. ಭೂತಕಾಲದ ಘಟನೆಗಳಿಂದ ಮುಕ್ತಳಾಗುತ್ತಿದ್ದಂತೆ ಸಹೋದ್ಯೋಗಿ

ರಮಾಕಾಂತ ಸಿಂಧೆಯ ಜೊತೆಗೆ ಹೊಸ ಹೊಸ ಭಾವನೆಗಳು ಚಿಗುರೊಡೆದು ಮತ್ತೊಮ್ಮೆ ಪ್ರೀತಿಗೆ ಒಳಗಾಗುತ್ತಾಳೆ. ಗೆಳತಿ ಲೂಸಿ ಫರ್ನಾಂಡಿಸ್‌ಳ ಸಹಾಯದಿಂದ ಸ್ವತಂತ್ರ ಪಾರ್ಟಿಯ 'ಕ್ರಾಂತಿ' ವರದಿಗಾರಳಾಗಿ ಸೇರುವ ಮೂಲಕ ಆ ಆಘಾತವನ್ನು ತಡೆದುಕೊಳ್ಳುವುದು ಕಾದಂಬರಿಯ ಅಧ್ಯಯನದಿಂದ ತಿಳಿದುಬಂದಿದೆ. ದಿನವಿಡೀ ಮೈತುಂಬ ಕೆಲಸ ತನ್ನ ಸ್ತ್ರೀ ಸಮಾನತೆಯಂತಹ ಧೋರಣೆಗೆ ಮತ್ತಷ್ಟು ಹುರುಪು ಸಿಕ್ಕಂತಾಗಿ ದುಡಿಯುತ್ತಾ ಹಳೆಯ ವಿಚಾರಗಳಿಂದ ನೋವು ಮರೆಯುತ್ತಾಳೆ. ಪಾರ್ಟಿ ಪತ್ರಿಕೆಯ ಲೀಡರ್ 'ಜಾನ್ ಅಶೋಕ್ ಕುಮಾರ್' ಶಾಂತಿ ಕುರಿತು ಬಂದಿದ್ದ ಅನಾಮಿಕ ಪತ್ರ ನೋಡಿ "ನಮ್ಮ ದೇಶದಲ್ಲಿ ಗಂಡಸಿನ ವ್ಯಕ್ತಿ ಸ್ವಾತಂತ್ರ್ಯಕ್ಕೆ ಹಲವು ರಾಜಕೀಯ ಅಡೆತಡೆಗಳಿವೆ. ಆದರೆ ಹೆಂಗಸಿನ ವ್ಯಕ್ತಿ ಸ್ವಾತಂತ್ರ್ಯಕ್ಕಿರುವ ಮುಖ್ಯ ಅಡೆತಡೆ ಅಂದರೆ ಗಂಡಸು"[೨೪] ಎಂಬ ಸ್ತ್ರೀಸಮಾನತೆ ಮಾತುಗಳಿಂದ ಶಾಂತಿಯನ್ನು ಒಲಿಸಿಕೊಳ್ಳುವ ಈತನು ಮುಖವಾಡ ಧರಿಸಿದ ನಾಲ್ಕನೇ ವ್ಯಕ್ತಿಯಾಗಿರುತ್ತಾನೆ. ಶಾಂತಿಯನ್ನು ಮದುವೆಯಾಗುವುದಾಗಿ ನಂಬಿಸಿ ಅವಳ ಸ್ವಾತಂತ್ರ್ಯಕ್ಕೆ ಹಂತ–ಹಂತವಾಗಿ ಕಡಿವಾಣ ಹಾಕುವ ಮೂಲಕ ಪುರುಷತ್ವ ಸಮಾಜದ ಪಾಲಕನಾಗಿ ಕಂಡುಬರುತ್ತಾನೆ.

ಮೊದಲಿಗೆ ತನ್ನ ಪತ್ರಿಕೆಯಲ್ಲಿಯೇ ಕೆಲಸನಿರ್ವಹಿಸುತ್ತಿದ್ದರು ಕೆಲಸ ಬಿಡಿಸುತ್ತಾನೆ. ನಂತರ ಅಲ್ಲಿ ಹೋಗಬೇಡ, ಇಲ್ಲಿ ಹೋಗಬೇಡ ಎಂಬ ನಿರ್ಬಂಧ ಹೇರುತ್ತಾನೆ. ಸ್ತ್ರೀಸ್ವಾತಂತ್ರ್ಯ, ಸ್ತ್ರೀಸಮಾನತೆ ಎಂದು ಮುಖವಾಡ ಧರಿಸಿರುವಾಗ ಗಂಡಸರ ನಿಜಸ್ಥಿತಿ ಅರಿವಾಗಿ ಶಾಂತಿ ಜಾನ್‌ನನ್ನು ಧಿಕ್ಕರಿಸುವ ನಿರ್ಧಾರ ಮಾಡುತ್ತಾಳೆ. ಮದುವೆಗೆ ಮುಂಚೆಯೆ ಕೆಲಸ ಬಿಡಿಸಿ ನಿರ್ಬಂಧ ಹಾಕುವ ಈತ, ಪರಾವಲಂಬಿಯಾದರೆ ಮತ್ತಷ್ಟು ಕಡಿವಾಣ ಹಾಕುವ ಅವನ ಸ್ವಭಾವದಿಂದ ಎಚ್ಚೆತ್ತು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು "women" ಪತ್ರಿಕೆಯಲ್ಲಿ ಉದ್ಯೋಗ ಪಡೆಯಲು ಕಲ್ಕತ್ತಾಗೆ ಹೋಗುವ ನಿರ್ಧಾರ ಅವಳ ಆತ್ಮಾಭಿಮಾನವನ್ನು ಸೂಚಿಸುತ್ತದೆ. ಸ್ತ್ರೀ ಸ್ವಾತಂತ್ರ್ಯ ಎಂದು ಹೇಳುವ ಪುರುಷರ ವಿರುದ್ಧ ಉದ್ಯೋಗದಿಂದ ಸ್ವತಂತ್ರವಾಗಿ ಬದುಕುವ ನೆಮ್ಮದಿ ಶಾಂತಿ ಪಾತ್ರದಲ್ಲಿ ಕಾಣಸಿಗುತ್ತದೆ ಎಂಬ ಮಾತುಗಳು ಕಾದಂಬರಿಯಲ್ಲಿ ಉಲ್ಲೇಖಗೊಂಡಿವೆ.

ಆಧುನಿಕ ಕಾಲಕ್ಕೆ ಸೇರಿದ ಸ್ತ್ರೀಯರು ಶಿಕ್ಷಣ ಪಡೆದು ಸಮಾಜದಲ್ಲಿ ಉತ್ತಮ ಸ್ಥಾನಮಾನ ಗಿಟ್ಟಿಸುವ ಉದ್ಯೋಗ ಗಳಿಸಿ ಸಮಾಜದ ದಬ್ಬಾಳಿಕೆ, ಅನ್ಯಾಯಗಳನ್ನು ಧಿಕ್ಕರಿಸಿ ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾರೆ. ಸ್ವಾತಂತ್ರ್ಯಪೂರ್ವದಲ್ಲಿ ಜಿಡ್ಡುಗಟ್ಟಿದ ಪುರುಷಪ್ರಧಾನತೆಯು ಹೆಣ್ಣನ್ನು ಆರ್ಥಿಕವಾಗಿ ದುರ್ಬಲಗೊಳಿಸಿ ತಮ್ಮಲ್ಲಿ ಅಧೀನರಾಗಿರುವಂತೆ ಶೋಷಿಸುತ್ತಿತ್ತು. ಆ ಕಾಲದಲ್ಲಿ

ಸಮಾಜದ ಎಲ್ಲೆ ಮೀರದಂತೆ ಬದುಕುತ್ತಿದ್ದ ಹೆಣ್ಣುಮಕ್ಕಳು ಪರಾವಲಂಬಿಗಳಾಗಿದ್ದವರು. ಅದರಲ್ಲೂ ಬ್ರಾಹ್ಮಣ ಕುಟುಂಬದ ಸ್ತ್ರೀಯರು ಆಚಾರ-ವಿಚಾರಗಳ ಕೆಲಸಗಳಲ್ಲೆ ಕಾಲಕಳೆಯುತ್ತಿದ್ದು ಕಟ್ಟಾ ಸಂಪ್ರದಾಯವಾದಿಗಳಾದ ಸಂಸ್ಕೃತಿ ಪಾಲಕರಾಗಿದ್ದವರು. ಇವರು ಹೊರಹೋಗಿ ದುಡಿಯುವುದೆಂದರೆ ಘೋರ ಅಪರಾಧವೆಂದೆ ಭಾವಿಸಲಾಗಿದ್ದ ಕಾಲ. ಆ ಕಾಲದ ಬ್ರಾಹ್ಮಣ ವಿಧವೆಯರು ಮಡಿಮಾಡಿಸಿಕೊಂಡು ನಾಲ್ಕು ಗೋಡೆಯ ಒಳಗೆ ಬದುಕುವಂತಹ ಪರಿಸ್ಥಿತಿಗೆ ಒಗ್ಗಿಕೊಳ್ಳಲೇಬೇಕಾಗಿದ್ದಿತು. ಅಂತಹ ಮಡಿಪದ್ಧತಿಗೆ ಒಳಗಾಗಿ ತನ್ನ ಕೊನೆಯ ಉಸಿರಿರೊವರೆಗು ಇತರರ ಋಣದಲ್ಲಿರದೆ ಇತರರು ತನ್ನ ಋಣ ಭಾರದಲ್ಲಿರುವಂತೆ ಬದುಕುವ ವ್ಯಕ್ತಿತ್ವವನ್ನು ಎಂ.ಕೆ.ಇಂದಿರಾ ಅವರು ಬರೆದಿರುವ 'ಫಣಿಯಮ್ಮ' ಕಾದಂಬರಿಯಲ್ಲಿ ಕಾಣುತ್ತೇವೆ.

'ಗಂಡಸು ದುಡಿದು ಹಿಟ್ಟು ತಂದರೆ-ಅಡುಗೆ ಮನೆಯಲ್ಲಿ ಬೇಯಿಸಿಕೊಡುವುದು ಹೆಂಗಸರ ಕೆಲಸವೆಂಬ ಮನೋಭಾವ ಬೇರೂರಿದ್ದ ಕಾಲದಲ್ಲಿ ಬಾಲವಿಧವೆಯಾದ ಫಣಿಯಮ್ಮ 'ಮಡಿ' ಹೆಂಗಸರು ಮಾಡುವ ದಿನನಿತ್ಯದ ಕೆಲಸದಲ್ಲಿ ನಿರತಳಾಗುತ್ತಾಳೆ. "ಬೆಳಗಿನ ಜಾವದಿಂದ ಕೆಲಸ, ದನ ಕರೆಯುವುದು, ಮಜ್ಜಿಗೆ ಕಡೆಯುವದು, ಬಾಣಂತಿ ಮಕ್ಕಳಿಗೆ ಎರೆಯುವುದು, ಇತ್ಯಾದಿ ಹೊರಗಿನ ಕೆಲಸ ಮುಗಿಸಿ ಮಡಿಯುಟ್ಟು ದೇವರ ಪೂಜೆ, ತುಳಸಿ ಪೂಜೆ, ಆಚಮನ, ಜಪ, ಪಾರಾಯಣ, ತರಕಾರಿ ಹೆಚ್ಚುವುದು, ಕುಟ್ಟಿ-ತಿರುವುವದು, ಹರಿ, ಕೆರಿ, ಸೋರು ಬೀಸುವುದು"[೨೫] "ಬೇಸಿಗೆಯಲ್ಲಿ ಹಪ್ಪಳ, ಸಂಡಿಗೆ, ಬಾಳಕ, ಹುರಿಗಾಳು, ಉಪ್ಪಿನಕಾಯಿ ತಯಾರಿಸುವುದು, ಅವಲಕ್ಕಿ ಕುಟ್ಟುವುದು, ಅರಳು ಹರಿಯುವುದು'. ಹೀಗೆ ಇಡೀ ದಿನ ಸಂಜೆಯವರೆಗೂ ಒಂದಲ್ಲ ಒಂದು ಕೆಲಸದಲ್ಲಿ ಮಗ್ನಳಾಗುತ್ತಿದ್ದಳು. ಫಣಿಯಮ್ಮಳ ಕೆಲಸವೆಂದರೆ 'ಅಚ್ಚುಕಟ್ಟು' ಎಂಬ ಮಾತು ಎಲ್ಲರ ಬಾಯಲ್ಲು ನುಸುಳುತ್ತಿದ್ದವು.

ಫಣಿಯಮ್ಮನಿಗೆ ಈ ಕೆಲಸಗಳು ಶ್ರಮದಾಯಕ ಕೆಲಸವೇ ಆಗಿರಲಿಲ್ಲ. ಬರಬರುತ್ತ ಇವುಗಳ ಜೊತೆಗೆ ವೇತನರಹಿತ ಬಾಣಂತನ ಮಾಡುವ ವೈದ್ಯೆಯಾಗಿ ಹೆಸರುವಾಸಿಯಾಗುತ್ತಾಳೆ. ಸಂಸಾರಿಯಾಗಿಲ್ಲದಿದ್ದರು ಅಚ್ಚುಕಟ್ಟಾಗಿ ಬಾಣಂತನ ಮಾಡುವ ಕಲೆ ಫಣಿಯಲ್ಲಿತ್ತು. ಹತ್ತಿರದ-ದೂರದ ಸಂಬಂಧಿಕರಿಗೆಲ್ಲ ಬಾಣಂತನ ಮಾಡಲು ಸರ್ವರಿಗೂ ಬೇಕಾದ ವ್ಯಕ್ತಿಯಾಗಿ ಬಿಟ್ಟಿದ್ದಳು. "ಅಂಚೆ ಅತ್ತೆ ಬಾಣಂತನ ಮಾಡಿದರೆ ಮಗು-ಬಾಣಂತಿಗೆ ಯಾವ ಕಾಯಿಲೆಯೂ ಬರೋದಿಲ್ಲ. ಮಕ್ಕಳೂ ಪೂರ್ಣಾಯಸ್ಸು ಹಾಕಿಕೊಂಡು ನಿರೋಗಿಯಾಗಿ ಬೆಳೆಯುತ್ತವೆ"[೨೬] ಎಂಬ ಮಾತು ಫಣಿಯಮ್ಮ ಭೇದ-ಭಾವವಿಲ್ಲದೆ ಎಲ್ಲರಿಗೂ ಮಾಡುತ್ತಿದ್ದುದರ ಸಾಕ್ಷಿಯಾಗಿದೆ.

ಪರಾವಲಂಬಿಯಾಗದ ಫಣಿಯಮ್ಮ ಕಸುವಿದ್ದಷ್ಟು ದಿನ ದುಡಿದೇ ಜೀವನ ಸಾಗಿಸುತ್ತಾಳೆ. ಸೋಮಾರಿಯಾಗಿ ಸಮಯ ಕಳೆಯದೆ ಯಾವಾಗಲೂ ಕೈತುಂಬ ಕೆಲಸ ಗಿಟ್ಟಿಸಿಕೊಳ್ಳುವ ಸ್ವಭಾವದವಳಾಗಿರುತ್ತಾಳೆ. ಎಲ್ಲಿ ಹೋದರು ಅದೇ ತನ್ನ ಮನೆ ಎಂಬಂತೆ ದುಡಿಯುತ್ತಿದ್ದುದ್ದರಿಂದ ಯಾರಿಗೂ ಭಾರ ಎನ್ನುವಂತೆ ಬದುಕುತ್ತಿರಲಿಲ್ಲ. ಫಣಿಯಮ್ಮಳ ಅಚ್ಚುಕಟ್ಟಾದ ಕೆಲಸ ನೋಡಿಯೆ ಸಂಬಂಧಿಕರು ತಮ್ಮ ಮನೆಗೆ ಬರುವಂತೆ ಒತ್ತಾಯ ಮಾಡುತ್ತಿದ್ದದ್ದು ಕಾದಂಬರಿಯಲ್ಲಿ ಕಂಡುಬರುತ್ತದೆ.

ಕಾದಂಬರಿಯುದ್ದಕ್ಕೂ ಫಣಿಯಮ್ಮಳ ಸ್ವಾಭಿಮಾನ, ಸ್ವಾವಲಂಬಿತನ ಬಿಂಬಿತವಾಗಿದೆ. ತಾನು ಫಣಿಯಮ್ಮ ದುಡಿಯುವ ದುಡಿಮೆಗಿಂತ ಖರ್ಚು ತೀರ ಕಡಿಮೆ. ಪ್ರತಿಫಲಾಪೇಕ್ಷೆಯಿಲ್ಲದೆ ದುಡಿಯುವ ಫಣಿಯಮ್ಮ ಮನಸ್ಸು ನಿರ್ಮಲವಾಗಿದ್ದು ಎಲ್ಲಿ ಹೋದರೂ ತಣ್ಣೀರುಸ್ನಾನ, ಎರಡು ಬಾಳೆಹಣ್ಣು, ಒಂದು ಬಿಳಿಸೀರೆ ಇಷ್ಟೇ ಬಯಸುವವಳಾಗಿದ್ದಳು. ಎಂಭತ್ತೆರಡನೇ ವಯಸ್ಸಿನಲ್ಲೂ ಹತ್ತಿರದ ಬಂಧುಗಳ ಮನೆಗಳಿಗೆ ಬಾಣಂತನಕ್ಕಾಗಿ ಕರೆದರೆ ಆರೈಕೆ ಮಾಡಲು ಹೋಗುವ ಸದ್ಗುಣಿಯವಳಾಗಿದ್ದಳು. ಸಂಬಂಧಿಕರು ಮಾತ್ರವಲ್ಲದೆ ಕೆಳಜಾತಿಯ ಹೆಣ್ಣುಮಗಳಿಗೆ ಸೂಲಗಿತ್ತಿ ಕೆಲಸ ಮಾಡಿ ಹೃದಯ ಶ್ರೀಮಂತಿಕೆ ಮೆರೆಯುತ್ತಾಳೆ. ಸುಮಾರು ನೂರ ಎಂಟು ವರ್ಷಗಳ ಕಾಲ ಬದುಕಿದ್ದ ಫಣಿಯಮ್ಮ ತಾನು ಸಾಯುವವರೆಗೂ ಮತ್ತೊಬ್ಬರಿಗೆ ಹೊರೆಯಾಗಲಿಲ್ಲ. ಸಾಯುವ ದಿನವು ಅಡುಗೆ ಮಾಡಿ ಮಕ್ಕಳಿಗೆ ಬಡಿಸಿ ಫಲಾಹಾರದವರಿಗೆ ಅವಲಕ್ಕಿ, ಒಗ್ಗರಣೆ ಹಾಕಿಟ್ಟು ಎಂದಿನಂತೆ ತುಳಸಿಕಟ್ಟೆಯ ಬಳಿ ಜಪಕ್ಕೆ ಕೂತವಳು ಅಲ್ಲಿಯೇ ಅಸುನೀಗುತ್ತಾಳೆ.

ಹೆಣ್ಣು ದಿನನಿತ್ಯ ದುಡಿಯುತ್ತಿದ್ದರು ಕೆಲಸಕ್ಕೆ ಬಾರದವಳು ಎಂಬ ಅಪವಾದಗಳು ಕೇಳಿಬರುತ್ತಿವೆ. ಮಡಿಪದ್ಧತಿಗೆ ಒಳಗಾದ ಹೆಣ್ಣು ಎಲ್ಲರಿಂದಲು ತಿರಸ್ಕೃತಳಾಗಿ ಜಪ–ತಪದಲ್ಲಿ ಬದುಕಬೇಕಿರುವವಳು. ಆದರೆ ಫಣಿಯಮ್ಮ ಎಲ್ಲರಿಗೂ ಬೇಕಾದವಳಾಗುತ್ತಾಳೆ. ಫಣಿಯಮ್ಮ ಬದುಕಿರುವಷ್ಟು ದಿನ ಸ್ವಾವಲಂಬಿಯಾಗಿ ಬದುಕುವ ಮೂಲಕ ಮಡಿ ಹೆಂಗಸು ಪರಾವಲಂಬಿಯಲ್ಲ ಎಂಬುದನ್ನು ಸಾಬೀತು ಮಾಡಿದ್ದಾಳೆ.

ಹೊರ ಹೋಗಿ ದುಡಿದು ಆದಾಯ ಗಿಟ್ಟಿಸಿಕೊಂಡು ಬದುಕುವವರ ನಡುವೆ ಫಣಿಯಮ್ಮ ವಿಭಿನ್ನವಾಗಿ ನಿಲ್ಲುತ್ತಾಳೆ. ಸ್ವಾತಂತ್ರ ಪೂರ್ವಕಾಲದಲ್ಲಿ ಹೆಣ್ಣು ಆದಾಯರಹಿತ ಜೀವನ ಸಾಗಿಸುತ್ತ ಬದುಕಬೇಕಾಗಿತ್ತು. ಪರಾವಲಂಬಿತನವೆ ಹೆಣ್ಣಿಗೆ ಬದ್ಧವಾಗಿತ್ತು. ಅದನ್ನು ಮೀರಿ ನಡೆಯದಂತೆ ಬಂಧನಗಳು ಸಮಾಜದಲ್ಲಿ ಸೃಷ್ಟಿಯಾಗಿದ್ದವು. ಇದು ಇಂದಿಗು ಇಲ್ಲವೆನ್ನುವಂತಿಲ್ಲ. ಉದ್ಯೋಗ ಎಂದ ಕೂಡಲೆ ಕೆಲವರು ಐಷರಾಮದ ಬದುಕನ್ನು ನಡೆಸುತ್ತಿರುವವರು ಮೂಗು ಮುರಿಯುತ್ತಾರೆ.

ಮಧ್ಯಮ ವರ್ಗದವರಿಗೆ ಉದ್ಯೋಗ ಅವಶ್ಯಕತೆಯಿದ್ದರು ಹೆಣ್ಣು ದುಡಿದ ಆದಾಯದಿಂದ ಸಂಸಾರ ಸಾಗಬೇಕು ಎಂದು ಸಮಾಜ ಮಾತನಾಡಿಕೊಳ್ಳುವುದು ಎಂಬ ಕೀಳರಿಮೆ ಕೆಲವರಲ್ಲಿ ಆವರಿಸಿಕೊಂಡಿದೆ. ಕೆಳವರ್ಗದ, ಅತ್ಯಂತ ಕೆಳವರ್ಗದವರಲ್ಲಿ ಆದಾಯ ಅನಿವಾರ್ಯವಾಗಿರುವುದರಿಂದ ದುಡಿದೇ ಬದುಕುತ್ತಿದ್ದಾರೆ ಈ ಮಹಾಪ್ರಬಂಧದ ಕಾದಂಬರಿಗಳಲ್ಲಿ ಮಧ್ಯಮ ವರ್ಗದ ಜೀವನ ಸಾಗಿಸುತ್ತಿರುವವರ ಬದುಕು ಅನಾವರಣಗೊಂಡಿದ್ದು ಅವರಲ್ಲಿ ಸುಶಿಕ್ಷಿತರ, ಆಧುನಿಕ ಮನೋಭಾವದವರ ನಡುವೆ ಹೆಣ್ಣು ಸ್ವಾವಲಂಬಿ ಜೀವನಕ್ಕೆ ಅಣಿಯಾಗುತ್ತಿದ್ದಾಳೆ. ಸಂಪ್ರದಾಯಸ್ಥರು ಆದಾಯರಹಿತ ಉದ್ಯೋಗದಲ್ಲಿ ತೃಪ್ತಿ ಕಾಣುತ್ತಿದ್ದಾರೆ ಎಂಬುದು ಕಂಡುಬರುತ್ತದೆ. ಇವತ್ತಿಗು ಸಂಪ್ರದಾಸ್ಥರ ಮನೋಭಾವ ಬದಲಾಗದಿರುವುದಕ್ಕೆ ಅವರಲ್ಲಿರುವ 'ಪೂರ್ವಗ್ರಹ ಪೀಡನೆ' ಬೇರೂರಿಬಿಟ್ಟಿದೆ.

ಈ ಕಾದಂಬರಿಗಳಲ್ಲಿನ ಸ್ತ್ರೀಯರು ಸ್ವಾವಲಂಬಿಯಾಗಿ ಬದುಕುವ ಮಾರ್ಗವಾಗಿ ಉದ್ಯೋಗ ಪಡೆದು ಸಮಾಜದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದನ್ನು ಕಾಣಬಹುದಾಗಿದೆ. ಇತರರಿಗೆ ಹೊರೆ ಎನಿಸದೆ ಆರ್ಥಿಕವಾಗಿ ಸದೃಢವಾಗುವ ಮೂಲಕ ತಮ್ಮ ಬದುಕನ್ನು ತಾವೇ ತಪ್ಪಿಸಿಕೊಳ್ಳುವಂತಹ ಆತ್ಮಸ್ಥೈರ್ಯ, ದಿಟ್ಟತನ ತೋರುತ್ತಾರೆ. ಅಕ್ಷರಜ್ಞಾನದ ಮೂಲಕ ಉದ್ಯೋಗ ಪಡೆದು, ಆರೋಗ್ಯಪೂರ್ಣ ಕುಟುಂಬದ ಪರಿಸರ ನಿರ್ಮಿಸಿದ್ದಾರೆ.

## ೪.೩ ಪ್ರತಿಭಟನೆ

ಆಧುನಿಕ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನದಲ್ಲಿ ಸುಧಾರಣೆ ಉಂಟಾಗಿದೆ ಎಂದರೆ ಇದುವರೆಗೂ ನಡೆದಿರುವ ನಡೆಯುತ್ತಿರುವ ಹೋರಾಟ, ಸಂಘಟನೆ, ಪ್ರತಿಭಟನೆಗಳೇ ಕಾರಣ. ತಂತ್ರಜ್ಞಾನ ಯುಗವಾದ ಇಂದು ಮಹಿಳಾ ಸಬಲೀಕರಣ ಆಶಯದ ಅನೇಕ ಸ್ತ್ರೀಪರ ಸಂಘಟನೆಗಳಿವೆ. ಅನೇಕರು ಮಹಿಳಾ ವಿಮೋಚನೆಗಾಗಿ ಶ್ರಮಿಸಿದ್ದಾರೆ, ಶ್ರಮಿಸುತ್ತಿದ್ದಾರೆ. ಸಮಾಜದಲ್ಲಿ ಪುರುಷನಂತೆ ಸ್ತ್ರೀಯೂ ಒಂದು ಜೀವಿಯಾಗಿದ್ದು, ಸ್ವತಂತ್ರವಾಗಿ ಬದುಕುವ ಹಕ್ಕು, ಸ್ವಾತಂತ್ರ್ಯಗಳಿದ್ದರೂ ಮುಕ್ತವಾಗಿ ಚಲಾಯಿಸಲಾಗದೆ ಬಂಧನದ ಕೊಂಡಿಯಲ್ಲಿ ಸಿಲುಕಿದ್ದಾಳೆ. ಆ ಕೊಂಡಿಯನ್ನು ಕಳಚುವ ಪ್ರಯತ್ನ, ಸ್ತ್ರೀ ಸಮಾನತೆಗಾಗಿ ಹೋರಾಡುತ್ತಿರುವುದು ನಮ್ಮ ಸಮಾಜದ ದುಃಸ್ಥಿತಿಯನ್ನು ಹೇಳುತ್ತವೆ. ಈ ವ್ಯವಸ್ಥೆಯೊಳಗೆ ಬದುಕಬೇಕಾದರೆ ಸ್ತ್ರೀ ಅಸ್ತಿತ್ವವನ್ನು ಪ್ರತಿಭಟಿಸದೆ ಅನ್ಯಮಾರ್ಗವಿಲ್ಲವೆಂಬುದನ್ನು ಸಾರಿ ಹೇಳುವಂತಿದೆ.

ಪುರುಷಪ್ರಧಾನ ವ್ಯವಸ್ಥೆಯ ಪಾಲಕರಾದ ಪುರುಷರು ಸ್ತ್ರೀಯರ ಉಡುಗೆ, ತೊಡಗೆ, ಅಲಂಕಾರ ಎಲ್ಲದರ ಮೇಲೂ ಅಧಿಕಾರ ಚಲಾಯಿಸುತ್ತಿದ್ದಾರೆ. ಅವಳಿಗೆ ಚಂಚಲೆ, ಮಾಯೆ ಎಂಬೆಲ್ಲಾ ಬಿರುದು ನೀಡಿ ತಮ್ಮ ಪಾತ್ರವೇನು ಇಲ್ಲವೆಂಬಂತೆ ಸ್ವತಂತ್ರರಾಗಿದ್ದಾರೆ. ಸಹನಾಮೂರ್ತಿ, ತಾಳ್ಮೆಗೆ ಹೆಸರಾದವಳು, ಸದ್ಗುಣಿ ಎಂದು ಹೊಗಳುತ್ತಾ ಆಕೆಯ ಸುತ್ತ ಚೌಕಟ್ಟನ್ನು ನಿರ್ಮಿಸಿದೆ. ಈ ವ್ಯವಸ್ಥೆಯ ಅಡಿಯಲ್ಲಿ ಬದುಕುತ್ತಿರುವ ಸ್ತ್ರೀಯು ತನ್ನ ಅಂತಃಸತ್ವದಲ್ಲಿ ಹುದುಗಿರುವ ಪ್ರತಿಭಟನಾ ರೂಪದ ವರ್ತನೆಗಳನ್ನು ಸಮಾಜ, ಪತಿ, ತಂದೆ, ಅಣ್ಣ, ತಮ್ಮಂದಿರಿಗಾಗಿ ಹುದುಗಿಸಿಕೊಳ್ಳುತ್ತಿದ್ದಾಳೆ. ಹೆಣ್ಣಿನ ನೋವು, ದುಃಖ, ತಲ್ಲಣ–ದುಮ್ಮಾನಗಳನ್ನು ಅರ್ಥಮಾಡಿಕೊಳ್ಳದ ಪಿತೃಪ್ರಧಾನ ವ್ಯವಸ್ಥೆಯು ತಮಗಿರುವ ಅಧಿಕಾರ, ಸೌಲಭ್ಯ, ಸವಲತ್ತುಗಳನ್ನು ಕಳೆದುಕೊಳ್ಳಲು ಇಚ್ಛಿಸುತ್ತಿಲ್ಲ. ಇಂತಹ ದಮನಕಾರಿ ಪ್ರವೃತ್ತಿಯನ್ನು ಒಂದು ಹಂತದವರಿಗೂ ಸಹಿಸಬಹುದಾದ ಹೆಣ್ಣು ಜೀವನದಲ್ಲಿ ಅತೃಪ್ತಿ ಕಾಣಿಸಿಕೊಂಡಾಗ ಸಹಜವಾಗಿಯೆ ಪ್ರತಿಭಟಿಸುತ್ತಾಳೆ ಎಂಬುದನ್ನು ತೋರಿಸುವ ಮೂಲಕ ಬಂಧನದಿಂದ ಮುಕ್ತಳಾಗುವುದನ್ನು ಬಯಸುವುದಾಗಿದೆ. ಹೆಣ್ಣು 'ಒಲಿದರೆ ನಾರಿ ಮುನಿದರೆ ಮಾರಿ' ಎಂಬ ಗಾದೆ ಮಾತು ಹೆಣ್ಣಿನ ಸಹನೆ ಮೀರಿದಾಗ ಉಂಟಾಗಬಹುದಾದ ಅವಘಡಗಳನ್ನು ತಿಳಿಸುತ್ತದೆ.

ಆಧುನಿಕ ಕಾಲದ ಸ್ತ್ರೀಯರು ಶಿಕ್ಷಣ ಉದ್ಯೋಗಗಳಿಂದ ಸ್ವಾವಲಂಬಿಯಾಗಿ ಪುರುಷಪ್ರಧಾನ ವ್ಯವಸ್ಥೆಗಳ ವಿರುದ್ಧ ಪ್ರತಿಭಟಿಸಿದರೆ ಪುರಾಣ ಕಾಲದ ಸ್ತ್ರೀಯರು ಪರಾವಲಂಬಿಗಳಾಗಿಯೇ ಉಳಿಯಬೇಕಾದ ಅನಿವಾರ್ಯತೆ ಇದ್ದಿತು. ರಾಮಾಯಣ–ಮಹಾಭಾರತ ಕಾಲದಲ್ಲಿ ಶಿಕ್ಷಣ ದೊರೆಯುತ್ತಿತ್ತಾದರೂ ರಾಣಿಯರನ್ನು ಹೊರತುಪಡಿಸಿದರೆ ಬಡ ಮಹಿಳೆಯರಿಗೆ, ದಾಸಿಯರಿಗೆ ಶಿಕ್ಷಣ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಸ್ವ–ಇಚ್ಛೆಯಿಂದ ತಮಗೆ ಬೇಕಾದಂತಹ ಉದ್ಯೋಗಗಳನ್ನು ಆರಿಸಿಕೊಳ್ಳುವ ಅಧಿಕಾರವು ಅವರಿಗೆ ಇರಲಿಲ್ಲ. ಪುರುಷ ರಾಜಕಾರಣಗಳಲ್ಲಿ ಸಿಲುಕಿ ಕಾಲಕಳೆಯುತ್ತಿದ್ದ ರಾಣಿಯರ ವಾಸ ನಾಲ್ಕು ಗೋಡೆಗಳ ಒಳಗೆ ಸೀಮಿತವಾಗಿಬಿಟ್ಟಿತ್ತು. ಇನ್ನು ಸಾಮಾನ್ಯ ಸ್ತ್ರೀಯರು ರಾಜಾಜ್ಞೆಯ ಮೇರೆಗೆ ದಾಸಿಯರಾಗಿಯೋ ಅಥವಾ ಅವರು ವಿಧಿಸಿದ ಕೆಲಸಗಳಲ್ಲಿ ಮಗ್ನರಾಗಿರಬೇಕಾದಂತಹ ಪರಿಸ್ಥಿತಿಯಲ್ಲಿ ಇದ್ದರು. ಅಂದಿನ ಕಾಲದ ಸ್ತ್ರೀಯರಿಗೆ ಸ್ವಾವಲಂಬಿಯಾಗಿ ಬದುಕಲು ಬೇಕಾದಂತಹ ಸ್ವಾತಂತ್ರ್ಯ, ಅಧಿಕಾರ ದೊರಕುತ್ತಿರಲಿಲ್ಲ. ಅಂದಿನಿಂದಲೂ ಸ್ತ್ರೀ, ಪುರುಷರಿಂದ ದಮನಕ್ಕೆ ಒಳಗಾದವಳೇ ಆಗಿದ್ದಾಳೆ. ಈ ನಿಟ್ಟಿನಲ್ಲಿ ರಾಣಿ–ಮಹಾರಾಣಿಯಾದಿಯಾಗಿ, ದಾಸಿಯವರೆಗೂ ಶೋಷಣೆ ಆವರಿಸಿತ್ತು. ಇದರಿಂದ ಹೊರಬರುವುದು ಅನಿವಾರ್ಯವಾದಾಗ ಶೋಷಣೆಯೆಂಬ ಮಡುವಿನ ಕೆಸರಲ್ಲೆ ಮುಳುಗದೆ ತನ್ನನ್ನು ತಾನು

ಕಾಪಾಡಿಕೊಳ್ಳಲು ಪ್ರತಿಭಟಿಸುವುದರ ಮೂಲಕ ಸ್ವಾವಲಂಬಿಯಾಗಿ ಬದುಕಬಲ್ಲೆ ಎಂಬುದು ಕಾದಂಬರಿಗಳ ಸ್ತ್ರೀಪಾತ್ರಗಳಿಂದ ಅಭಿವ್ಯಕ್ತಗೊಂಡಿದೆ. ಪ್ರತಿಭಟಿಸುವ ನೆಲೆಯು ತಿಳಿಯದ ಕಾಲದಲ್ಲಿ ಒಮ್ಮೆಗೆ ಭುಗಿಲೆದ್ದ ಆಕ್ರೋಶದ ಗುರುತಾಗಿ ಪ್ರತಿಭಟಿಸಿರುವುದನ್ನು ಎಚ್.ವಿ.ಸಾವಿತ್ರಮ್ಮನವರ 'ಸೀತೆ–ರಾಮ–ರಾವಣ' ಕಾದಂಬರಿಯಲ್ಲಿ ಕಾಣುತ್ತೇವೆ. ಪುರುಷಪಾಹಿ ಆಡಳಿತದಲ್ಲಿ ನಲುಗುತ್ತಿರುವ ಕೌಸಲ್ಯೆ, ಸುಮಿತ್ರೆ, ಕೈಕೆ, ಸೀತೆ, ಊರ್ಮಿಳೆ, ಮಾಂಡವಿ, ಶುತ್ರಕೀರ್ತಿ, ಮಂಡೋದರಿ, ಕೈಕಸೆ, ಶೂರ್ಪನಖಿ ಇವರೆಲ್ಲರು ಪ್ರತಿಭಟಿಸುವ ಕಾರಣ ಭಿನ್ನವಾಗಿದೆ. ಆದರೆ ಪ್ರತಿಭಟಿಸುವುದರಿಂದ ಆಗುವ ನೋವು, ಸಮಾಧಾನ ಒಂದೆ ಎಂಬಂತೆ ಕಂಡುಬರುತ್ತದೆ. ಅದುವೇ ಕೌಸಲ್ಯೆ ಪತ್ನಿಯನ್ನು ತಿರಸ್ಕರಿಸುವಲ್ಲಿ ಪತಿಯ ವಿರುದ್ಧ ಮೌನ ಮೆರೆಯುವಲ್ಲಿ ದಶರಥನ ವಿರುದ್ಧ ಪ್ರತಿಭಟಿಸುತ್ತಾಳೆ. ಹೆಂಡತಿಯನ್ನು ಗಣನೆಗೆ ತೆಗೆದುಕೊಳ್ಳದೆ ಮತ್ತೊಂದು ಮದುವೆಯಾಗುವ ದಶರಥನ ವಿರುದ್ಧ ಹೆಣ್ಣಿಗೂ ಪ್ರೀತಿ; ಭಾವನೆಗಳ ಜೊತೆಯಲ್ಲೇ ಹಠ, ತಿರಸ್ಕಾರವು ಇರುತ್ತವೆ ಎಂಬುದನ್ನು ಮೌನದಿಂದಲೆ ತೋರಿಸಿದ್ದಾಳೆ.

ಕೌಸಲ್ಯೆಗೆ ಪತಿಯಿಂದ ದೂರ ಉಳಿಯುವುದು ಅಭ್ಯಾಸವಾಗಿತ್ತು. ಮಗನ ವನವಾಸದಿಂದ ದೂರ ಉಳಿಯುವುದು ಕೌಸಲ್ಯೆಯ ತಾಯ್ತನಕ್ಕೆ ಪೆಟ್ಟಾದರೂ ನೋವಿನ ಹೊಡೆತ ಮನಸ್ಸಿಗೆ ನೇರವಾಗಿ ತಾಕಿದಾಗ ದಶರಥನ ಮೇಲಿನ ತಿರಸ್ಕಾರ, ಕ್ಷತ್ರಿಯ ಧರ್ಮದ ಆಜ್ಞಾಪಾಲಕರಾದ ರಾಮನಂತಹವರ ನಡುವೆ ಮೌನಿಯಾಗದೆ ಪ್ರತೀಕಾರವನ್ನು ತೀರಿಸಿಕೊಳ್ಳುತ್ತಾಳೆ. "ನಿಮ್ಮದರಂತಹ ಮಹಾವಂಶಗಳಿಗೆ ಸೇರಿ ನರಳದೆ, ಮಾನವೀಯತೆ, ದಯಾದಾಕ್ಷಿಣ್ಯಗಳಿರುವ ಬಡ ಕುಟುಂಬದಲ್ಲಿ ಹುಟ್ಟಿದವನ ಕೈಹಿಡಿಯುವಂತೆ ಮಾಡೆಂದು ಆ ದಯಾವಿಹೀನನಾದ ಭಗವಂತನಲ್ಲಿ ಬೇಡುತ್ತೇನೆ. ಇಲ್ಲ! ಹೆಂಗಸಿನ ಸುಖ ದುಃಖಗಳ ಅರಿವಿರುವ ಮಹಾಮಾತೆಯನ್ನು ಬೇಡುತ್ತೇನೆ"[೨೭] ಎನ್ನುವ ಮಾತುಗಳಲ್ಲಿ ಹೆಣ್ಣಿನ ವೇದನೆ ಏನೆಂಬುದು ದೇವತೆಗೆ ತಕ್ಷಣ ಅರಿವಾಗುತ್ತದೆ. ಇದರಿಂದ ತನಗೂ (ಕೌಸಲ್ಯೆಗೂ) ಇಂತಹ ವಂಶಸ್ಥರಿಂದ ಮುಕ್ತಿ ಸಿಗುತ್ತದೆ ಎಂಬುದು ಕಂಡುಬರುತ್ತದೆ.

ಹೆಣ್ಣಿನ ಸ್ಥಾನವನ್ನು ಭದ್ರಪಡಿಸುವಂತಹ ಯೋಚನೆ ಕೌಸಲ್ಯೆಯಲ್ಲಿ ಕಂಡುಬರುತ್ತದೆ. ಸೊಸೆಯರಿಗೆ ಬೆಂಬಲವಾಗಿ, ಪತಿ, ಮಕ್ಕಳು ಸ್ವಂತದವರೆ ಆದರು ಪತ್ನಿ–ತಾಯಿ ಮಾತಿಗೆ ಬೆಲೆಕೊಡದವರ ನಡುವೆ ಏಕಾಂಗಿ ಬದುಕಿಗೆ ಒಳಪಡುವ ಮೂಲಕ ಅಧೀನತೆಯನ್ನು ಊರ್ಜಿತಗೊಳಿಸುವ ನಿಟ್ಟಿನಲ್ಲಿ ಕೌಸಲ್ಯೆಯ ಪ್ರತಿಭಟನೆ ಸಾರ್ಥಕಗೊಂಡಿದೆ. ಕೌಸಲ್ಯೆಯ ಪ್ರತಿಭಟನಾದಿಯಲ್ಲಿ ಚಲಿಸುವ ಮತ್ತೊಂದು ಹೆಣ್ಣು ಊರ್ಮಿಳೆ. ಗಂಡನನ್ನು ಅನುಸರಿಸಿ ನಡೆಯುವವಳಲ್ಲ. ಸ್ವಸುಖಕ್ಕೆ ಮನ್ನಣೆ ಕೊಡುವ ಹೆಣ್ಣು. ಲಕ್ಷ್ಮಣನೂ ವನವಾಸಕ್ಕೆ ಹೊರಡುವ

ಇಂಗಿತದಲ್ಲಿ ಊರ್ಮಿಳೆಯನ್ನು ಪರೋಕ್ಷವಾಗಿ ಬರುವಂತೆ ಇಟ್ಟ ಬೇಡಿಕೆಗೆ “ಕರ್ತವ್ಯದ ಹಂಗಿಗೆ ಸಿಕ್ಕಿ ನವೆಯಲು ನಾನೇನೂ ಇಕ್ಷ್ವಾಕು ವಂಶದಲ್ಲಿ ಹುಟ್ಟಿದ ಹೆಣ್ಣಲ್ಲ”[೨೮] ಎಂದು ಗಂಡನ ವಿರುದ್ಧ ಪ್ರತಿಕ್ರಿಯಿಸುವ ಮೂಲಕ ವನವಾಸಕ್ಕೆ ಹೋಗುವುದನ್ನು ನಿರಾಕರಿಸುತ್ತಾಳೆ. ಸತ್ಯ, ನ್ಯಾಯ, ಧರ್ಮಕ್ಕೆ ಹೆಸರನ್ನು ಪಡೆಯುವ ಇಕ್ಷ್ವಾಕು ವಂಶ ಹೆಣ್ಣಿನ ಇಷ್ಟ–ಕಷ್ಟಗಳನ್ನು ಪರಿಗಣಿಸುವುದಿಲ್ಲ. ಅದನ್ನು ಮೀರುವ ಹಂತದಲ್ಲಿ ಹೆಣ್ಣಿನ ಅಂತಃಸತ್ವಕ್ಕು ಬೆಲೆಕೊಡಬೇಕೆಂಬುದನ್ನು ತೋರಿಸಿದ್ದಾಳೆ. ಹದಿನಾಲ್ಕು ವರ್ಷಕಾಲ ಗಂಡನನ್ನು ಅಗಲಿ ಬದುಕುವ ಮೂಲಕ ಮೌನವನ್ನು ಮೆರೆದಿದ್ದಾಳೆ. ಪತಿಯನ್ನು ದೂರಮಾಡಿ ಬದುಕುವುದು ಊರ್ಮಿಳೆಯು ಬಯಸಿದ್ದಲ್ಲ. ಲಕ್ಷ್ಮಣನ ಉದಾಸೀನ ಭಾವಕ್ಕೆ ಮೌನವಾಗಿ ಕಾಲಕಳೆಯುವುದರಲ್ಲೆ ಅವಳ ಪ್ರತಿಭಟನೆ ಕಂಡುಬರುತ್ತದೆ.

ಸೀತೆ, ಊರ್ಮಿಳೆಗೆ ವಿರುದ್ಧವಾಗಿ ಕಂಡುಬರುವುದು ಸೀತಾಪಹರಣದವರೆಗೆ ಮಾತ್ರ. ಸೀತೆ ರಾವಣನ ಬಂಧನದಲ್ಲಿರುವಾಗ ರಾಮ–ರಾವಣ ಮನಸ್ಸನ್ನು ತುಲನೆ ಮಾಡುತ್ತಾಳೆ. ಸೀತೆಯ ಮೇಲಿನ ರಾಮನ ಉದಾಸೀನತೆ ರಾವಣನ ರಾಕ್ಷಸತನಕ್ಕಿಂತಲು ಮೇಲು ಮಟ್ಟದಲ್ಲಿರುವುದು ತಿಳಿಯುತ್ತದೆ. ಸೀತೆ ಊಹಿಸಿದಂತೆಯೇ ರಾಮ ಸೀತೆಯ ಅಹಪರಣದ ನಂತರ ಆಕೆಯನ್ನು ಅಪಮಾನಿಸುತ್ತಾನೆ. ಅಷ್ಟರಲ್ಲೇ ನಿಲ್ಲದ ರಾಮನ ಸಂಶಯ ರಾವಣನೊಂದಿಗಿನ ಯುದ್ಧದ ನಂತರ ಸೀತೆಯ ಮೊದಲ ಭೇಟಿಯಲ್ಲಿಯೆ ಸಂಬಂಧವನ್ನೇ ಕಡಿದುಕೊಳ್ಳುವ ಮಾತುಗಳನ್ನಾಡುತ್ತಾನೆ. ಸೀತೆ, ಕಾರಣ, ದುಃಖ, ನೋವು ಯಾವುದಕ್ಕು ತುಟಿ ಎರಡು ಮಾಡಲಿಲ್ಲ. ತಾನು ‘ಪರಿಶುದ್ಧ–ಪತಿವ್ರತೆ’ ಎಂದು ರಾಮನ ಮನಃಪರಿವರ್ತನೆಗೆ ತೊಡಗಲಿಲ್ಲ. ರಾಮನ ಕಡೆ ತೀಕ್ಷ್ಣವಾದ ನೋಟ ಬೀರುವಲ್ಲಿ ಪ್ರತಿಭಟನೆಯ ಒಳಸುಳಿ ಗೋಚರಿಸುತ್ತದೆ. ಅದನ್ನು ಅಗ್ನಿಪ್ರವೇಶದ ಮೂಲಕ ಈಡೇರಿಸಿಕೊಳ್ಳುವುದರಿಂದ ತಿಳಿಯುತ್ತದೆ. ರಾಮ ಸೀತೆಯನ್ನು ಅಗ್ನಿಪ್ರವೇಶಿಸುವ ಪರೀಕ್ಷೆಗೆ ಗುರಿಪಡಿಸುವುದಿಲ್ಲ. ಆತನ ನಿಷ್ಠುರ ಮಾತುಗಳಿಗೆ ಸ್ವತ: ಚಿತೆಗೆ ಹಾರುವಲ್ಲಿ “ಜನಕ ಮಹಾರಾಜ ರಾಜರ್ಷಿಯೆಂದು ಲೋಕದಲ್ಲೆಲ್ಲಾ ಪ್ರಸಿದ್ಧ. ಅಂತಹವನ ಮಗಳನ್ನು ಬೀದಿಯ ಭಿಕಾರಿಯಂತೆ ಇಷ್ಟು ಜನರೆದುರಿಗೆ ಅವಮಾನಪಡಿಸುವ ಧೈರ್ಯ ನಿಮ್ಮಣ್ಣನಿಗುಂಟಾಗಬೇಕಾದರೆ ನನ್ನಲ್ಲಿ ಆ ಗೌರವವನ್ನು ಉಳಿಸಿಕೊಳ್ಳುವ ಸತ್ವವಿಲ್ಲವೆಂದಾಯಿತು. ಇನ್ನು ಬದುಕಿರುವ ಆಸೆ ನನಗಿಲ್ಲ. ಬದುಕಿಗೆ ಧ್ಯೇಯವೂ ಇಲ್ಲ. ಬೇಗ ಚಿತೆ ಸಿದ್ಧ ಮಾಡು”[೨೯] ಎಂದು ಲಕ್ಷ್ಮಣನಿಗೆ ಹೇಳುವಲ್ಲಿ ರಾಮನ ವಿರುದ್ಧ ಅರ್ಥವಿಲ್ಲದ ಬಾಳು ಬಾಳಲು ತಾನು ಸಿದ್ಧವಿಲ್ಲ ಎಂಬುದನ್ನು ಸಾವಿನ ಮೂಲಕ ತೋರಿಸಿದ್ದಾಳೆ. ಸೀತೆಯ ಅಗ್ನಿ ಪರೀಕ್ಷೆಯ ಪ್ರತಿಭಟನೆಯು ರಾಮನೆ ಕ್ಷಮೆಯಾಚಿಸಿ ತನ್ನೊಂದಿಗೆ ಕರೆದುಕೊಂಡು ಹೋಗುವ ತೀರ್ಮಾನಕ್ಕೆ ಬರುವಂತೆ ಮಾಡುತ್ತದೆ.

ಮುಂದುವರೆದಂತೆ ಎಚ್.ವಿ.ಸಾವಿತ್ರಮ್ಮನವರ 'ವಿಮುಕ್ತಿ' ಕಾದಂಬರಿಯಲ್ಲಿ ಸೀತೆಯು ಪುರುಷ ಆಡಳಿತದವರ ವಿರುದ್ಧ ಬದುಕಿನ ಆಂದೋಳನವನ್ನೆ ಸೃಷ್ಟಿಸಿರುವುದು ಕಂಡುಬರುತ್ತದೆ. ಸೀತೆ ವನವಿಹಾರವನ್ನು ಆಶಿಸಿದಾಗ ರಾಮ ಅವಳ ವನವಿಹಾರಕ್ಕೆ ವನವಾಸವನ್ನು ಗುರಿಪಡಿಸುತ್ತಾನೆ. ಲೋಕಾಪವಾದಕ್ಕೆ ಹೆದರಿ ಸೀತೆಯ ಆಂತರ್ಯವನ್ನು ಪರೀಕ್ಷಿಸದೆ ಕಾಡಿಗೆ ಅಟ್ಟುವುದರಲ್ಲಿ ಇಕ್ಷ್ವಾಕು ವಂಶಸ್ಥರ ಕೀರ್ತಿ ಅಡಗಿದೆ. ವನವಾಸದಿಂದ ಆಶ್ರಮವಾಸಿಯಾಗಿ ತೃಪ್ತಿಕಾಣುವ ಸೀತೆ 'ವಿಮುಕ್ತಿ' ಕಾದಂಬರಿಯಲ್ಲಿ ಮೊದಲ ಬಾರಿಗೆ ಪ್ರತಿಭಟಿಸುವುದು ಲಕ್ಷ್ಮಣನಿಂದ ರಾಮನ ಕುತಂತ್ರ ಬುದ್ಧಿ ತಿಳಿದಾಗ. 'ಕಾಡುಮೃಗ, ರಾಕ್ಷಸ ಇವರೆಲ್ಲರಿಗಿಂತಲು ಅನಾಗರಿಕನಾಗಿ ವರ್ತಿಸುವಂತೆ ತೋರುವ ರಾಮನಿಗೆ ಬದುಕಿ ತೋರಿಸುವುದಾಗಿ' ಪ್ರತಿಭಟಿಸುವ ನೆಲೆ ಹೆಣ್ಣು ಬದುಕಬೇಕೆಂಬ ತೀರ್ಮಾನ ಮಾಡಿದರೆ ಅರಮನೆಯಾದರೂ ಸರಿ, ಅರಣ್ಯವಾದರೂ ಸರಿ ಬದುಕುತ್ತಾಳೆ ಎಂಬುದನ್ನು ಒಳಗೊಂಡಿದೆ.  ಮುಂದೆ ಆಶ್ರಮವಾಸಿಯಾಗಿ ಬದುಕುವಲ್ಲಿ ಆಡಿದ್ದ ಮಾತನ್ನು ಉಳಿಸಿಕೊಂಡಿರುವುದು ಕಾದಂಬರಿಯಲ್ಲಿ ವ್ಯಕ್ತವಾಗಿದೆ.

ಒಂದೇ ಹೆಣ್ಣಿಗೆ ಅನೇಕ ಸತ್ವಪರೀಕ್ಷೆಗಳು ಎದುರಾದಾಗ ಅದನ್ನು ಹಿಮ್ಮೆಟ್ಟುವ ನೆಲೆಗಳು ಬದಲಾಗುತ್ತಿರುತ್ತವೆ. ರಾಮನು ಮಾನ ಅಪಮಾನ ನಿಂದನೆಗೆ ಒಳಗು ಮಾಡಿ ಸೀತೆಯನ್ನು ಅಗ್ನಿಪರೀಕ್ಷೆಗೆ ಒಡ್ಡಿದ್ದರೆ, ಸೀತೆಯ ತಾಯ್ತನದ ಮೇಲೆ ರಾಮ ಸಂಶಯಿಸಿದಾಗ ರಾಮನನ್ನೆ ಪರೀಕ್ಷೆಗೆ ಗುರಿಪಡಿಸುವ ಮೂಲಕ ಪ್ರತಿಭಟಿಸುವ ಸೀತೆಯ ನೆಲೆ ಸಾರ್ಥಕಗೊಂಡಿದೆ. ಹೆಜ್ಜೆ-ಹೆಜ್ಜೆಗು ಸಂಶಯಿಸುವ ರಾಮ ಪ್ರಮಾಣ-ಪರೀಕ್ಷೆಗಳ ಸಾಕಾರ ಮೂರ್ತಿಯಂತೆ ತೋರುತ್ತಾನೆ. ಅವನೊಂದಿಗಿನ ಮುಂದಿನಬಾಳು ವ್ಯರ್ಥವೆಂಬಂತೆ ಗಂಡ-ಮಕ್ಕಳನ್ನು ಅನಾಧಾರವಾಗಿ ಪರಿಗಣಿಸುತ್ತ ಏಕತನದ ಬದುಕಿಗೆ ಹೆಜ್ಜೆ ಇಡುವಲ್ಲಿ ಸೀತೆಯ ಪ್ರತಿಭಟನೆ ಕಂಡುಬರುತ್ತದೆ.  ಸ್ತ್ರೀ ಸಂಕಟ ಅನುಭವಿಸುವ ವೇದನೆ ಇಂದಿಗೂ ಪ್ರಸ್ತುತವಾಗಿದೆ.

ಅನುಪಮಾ ನಿರಂಜನರವರ 'ಮಾಧವಿ' ಕಾಂದಬರಿಯ ಉದ್ದಕ್ಕೂ ಪ್ರತಿಭಟನೆಯ ಭಾಷ್ಯದ ಸೊಲ್ಲು ಅಡಗಿದೆ. ಮಾಧವಿ ದಾನದ ವಸ್ತುವಾದ ತಂದೆಯ ವಿರುದ್ಧ 'ಅಪ್ಪಾ' ಎನ್ನುವ ಮೂಲಕ ಪ್ರತಿಭಟಿಸುತ್ತಾಳೆ. 'ತಂದೆಯ ಧರ್ಮ ಬಂಧನ' ಇವಳ ಪ್ರತಿಭಟನೆಯನ್ನು ಮೊಳಕೆಯಲ್ಲೇ ಚಿವುಟಲ್ಪಡುತ್ತದೆ. ಅಷ್ಟರಲ್ಲೆ ಮಾಧವಿಯ ಪ್ರತಿಭಟನೆ ಮರೆಮಾಚುವುದಿಲ್ಲ. ಮಗಳನ್ನೇ ದಾನ ಕೊಟ್ಟು ತಂದೆಯಾದಿಯಾಗಿ ಕಾಮ, ಕ್ರೋಧ, ಮದ, ಮಾತ್ಸರ್ಯಗಳಿಗೆ ಒಳಗಾಗಿರುವವರಿಗೆ ತನ್ನ ಪ್ರತಿಭಟನಾ ಮಾತಿನ ಚಾಟಿಯನ್ನು ಬೀಸುತ್ತಿರುತ್ತಾಳೆ.

ಪ್ರತಿಷ್ಠೆ, ಹೆಸರು ಇವುಗಳಿಗೆ ಮಾತ್ರ ಬೆಲೆ ಕೊಡುವ ಯಯಾತಿಯಂತಹ ಪುರುಷರಲ್ಲಿ ಮಗಳನ್ನು ದಾನ ಕೊಡುವಷ್ಟರ ಮಟ್ಟಿಗೆ ಕ್ರೂರತನ ಆವರಿಸಿದೆ. ತಂದೆಯಾದವರೆ ಮಗಳೆಂಬ ಮಮಕಾರವಿಲ್ಲದೆ ಅಟ್ಟಿದರೆಂದರೆ ಇತರ ಪುರುಷರಲ್ಲಿ ಮಾನವೀಯತೆ ಎಂಬುದನ್ನು ಮಸೂರದಿಂದ ಹುಡುಕಬೇಕಾದಂತಹ ಸ್ಥಿತಿ ಕಾದಂಬರಿಯಲ್ಲಿ ಕಂಡು ಬರುತ್ತದೆ. ಗಾಲವನು ಋಣಮುಕ್ತನಾಗುವವರೆಗು ಆತನ ಬಂಧಿಯಾದ ಮಾಧವಿ ತಾನು ದಾನವಾಗಿ ಬಂದವಳೆಂದುಕೊಂಡು ಪುರುಷರ ಮಿತಿಮೀರಿದ ದಬ್ಬಾಳಿಕೆಗಳಿಗೆ, ಅಕ್ರಮಗಳಿಗೆ ಒಳಗಾಗುವುದಿಲ್ಲ. ದಾನವಾಗಿ ಬಂದವಳ ಜವಾಬ್ದಾರಿಯನ್ನು ಮನಸ್ಸಿಲ್ಲದ ಮನಸ್ಸಿನಿಂದ ನಿರ್ವಹಿಸಿ ಅತಿಕ್ರಮಣಕಾರಿಗಳಿಗೆ ನೇರವಾಗಿ ಪ್ರತಿಭಟಿಸುವ ಮೂಲಕ ದಾನ ಬಂದ ಮಾತ್ರಕ್ಕೆ ಪುರುಷರ ಸ್ವತ್ತಾಗುವುದಿಲ್ಲ ಎಂಬುದನ್ನು ಬಿಂಬಿಸಿದ್ದಾಳೆ. ತಂದೆಯಾದಿಯಾಗಿ ಗಾಲವ ರಾಜರು, ವಿಶ್ವಾಮಿತ್ರರು ಸೇರಿದಂತೆ ಅವರ ವಿರುದ್ಧ ಪ್ರತಿಭಟಿಸುವ ನೆಲೆ ಸ್ತ್ರೀಯರ ಪರವಾಗಿದೆ. ತಂದೆಯ ವಯಸ್ಸಿನವನಾದ ಹರ್ಯಶ್ವನಿಗೆ ಒಂದು ಮಗುವಿನ ತಾಯಿಯಾಗುವ ಮೂಲಕ ಇನ್ನೂರು ಕುದುರೆಗಳ ದಾನದ ಋಣಮುಕ್ತೆಯಾದ ಮಾಧವಿಯ ಮೇಲೆ ಮತ್ತೆ ಹರ್ಯಶ್ವ ಮೋಹಿತನಾದಾಗ "ಮಹಾರಾಜ, ಮಗ ಹುಟ್ಟಿ ನಿಮ್ಮ ಸಂಕಲ್ಪ ಈಡೇರಿತು. ಇನ್ನು ನಿಮಗೆ ನನ್ನ ಮೇಲೆ ಯಾವ ಅಧಿಕಾರವೂ ಇಲ್ಲ!"[೩೦] ಎಂದು ಪ್ರತಿಭಟಿಸುತ್ತಾಳೆ. ಹೆಣ್ಣು ಭೋಗಿಸಲೆಂದೇ ಇರುವ ವಸ್ತು ಎಂದು ಭಾವಿಸುವ ಹರ್ಯಶ್ವನಂತಹ ಹಲವಾರು ಕಾಮುಕರಿಗೆ ತಾನು ಕಾಮದ ವಸ್ತುವಲ್ಲವೆಂಬುದನ್ನು ಎಚ್ಚರಿಸುವಂತಿದೆ.

"ಮೌನ ಹೇಗೆ ಸಾಂಕೇತಿಕವಾಗಿದೆಯೋ ಅವಳ ಪ್ರತಿಭಟನೆ ಕೂಡ ಶಕ್ತಿಯುತ ಸಂಕೇತವಾಗಿ ಕಂಡು ಬರುತ್ತದೆ. ನಾನಾ ವಿಧದ ಶೋಷಣೆಯನ್ನು ಮಾಧವಿ ಅರ್ಥೈಸಿಕೊಂಡಾಗಲೆಯೇ ಆಕೆಯ ಪ್ರತಿಭಟನೆ ತೀವ್ರವಾಗುವುದು ಗಮನಾರ್ಹ".[೩೧] ಗಾಲವನ ೬೦೦ ಕುದುರೆಗಳ ಋಣಮುಕ್ತೆಗಾಗಿ ಮೂರು ಮಕ್ಕಳ ತಾಯಿಯಾದ ಮಾಧವಿ ಶೋಷಣೆಯ ನಿಜರೂಪದ ದರ್ಶನ ಪಡೆದು ಅನುಭವಿಸಿ ವಿಶ್ವಾಮಿತ್ರ, ಗಾಲವ ಇವರ ವಿರುದ್ಧ ಪ್ರತಿಭಟಿಸುವಿಕೆ ಅವಳ ಪ್ರಬುದ್ಧತೆಯನ್ನು ಸೂಚಿಸುತ್ತದೆ. ಸಮಾಜಕ್ಕೆ ಸವಾಲೆಸೆಯುವಂತೆ ಮಾಧವಿ ಕೇಳುವ ಒಂದೊಂದು ಪ್ರಶ್ನೆಗಳು ಪ್ರತಿಭಟನಾ ರೂಪದಲ್ಲಿರುತ್ತವೆ. ನಿಜವಾದ ಮುನಿ ಹೇಗೆ ಇರಬೇಕು? ಎಂಬ ಪ್ರಶ್ನೆ ಮುನಿಯಾದಿಯಾಗಿ ಹೆಣ್ಣನ್ನು ನೋಡುವ ದೃಷ್ಟಿಕೋನದಲ್ಲಿ ಬದಲಾವಣೆ ಇಲ್ಲದಿರುವುದನ್ನು ಕುರಿತು ಕೇಳುವುದಾಗಿದೆ. ಗಾಲವ ಆಶೀರ್ವದಿಸಿದಾಗ "ನಿಮ್ಮ ಆಶೀರ್ವಾದಕ್ಕೆ ಅರ್ಥವಾದರೂ ಏನಿದೆ? ನನ್ನ ಬಾಳು ಚೂರು ಚೂರಾಗುವ ಹಾಗೆ ಮಾಡಿದ್ದೋರು ನೀವು"[೩೨]

ಎಂದು ಹೇಳುವಲ್ಲಿ ಹೆಣ್ಣಿನ ಬಾಳನ್ನೇ ನಾಶಮಾಡಿ, ಆಶೀರ್ವದಿಸುವಲ್ಲಿ ಅರ್ಥವಿಲ್ಲದ್ದನ್ನು ಹೇಳುತ್ತದೆ. ಆಶೀರ್ವಾದ ನಾವು ಕೈಗೊಳ್ಳುವ ಕಾರ್ಯದಲ್ಲೂ ಇರಬೇಕು. ಅದಕ್ಕಾಗಿ ಗುರುದಕ್ಷಿಣೆ ಕೊಡದಿದ್ರೂ ಏನೂ ಆಗುತ್ತಿರಲಿಲ್ಲವೆಂಬ ಸೊಲ್ಲು ಅಡಗಿದೆ.

ಗಾಲವನೊಟ್ಟಿಗೆ ಹೋಗಲು ನಿರಾಕರಿಸಿವ ಮೂಲಕ ಪ್ರತಿಭಟಿಸಿದ ಮಾಧವಿ ಕಾಂದಬರಿಯುದ್ದಕ್ಕೂ ತನ್ನ ಮೇಲಿನ ಅತಿಯಾದ ಶೋಷಣೆಯ ವಿರುದ್ಧ ಪ್ರತಿಭಟಿಸುತ್ತಾಳೆ. ದಾನವಾಗಿ ಬಂದ ಮಾತ್ರಕ್ಕೆ ಎಲ್ಲಕ್ಕೂ ತಲೆಬಾಗುವವಳಲ್ಲ. ತನಗೆ ವಿಧಿಸಿರುವುದನ್ನು ನಿರ್ವಹಿಸಿ ಏನನ್ನೋ ಸಾಧಿಸುವವಳಂತಹ ದೃಢಸಂಕಲ್ಪತೆ ಕಾಣುತ್ತದೆ. ನಾಲ್ಕು ಜನರ ಕಾಮ ದಾಹಕ್ಕೆ ಬಲಿಯಾಗಿ ಅವರ ಮಕ್ಕಳಿಗೆ ತಾಯಿಯಾಗಿ ಮುಗ್ಧತೆ ಕಳಚಿ ಪ್ರಬುದ್ಧ ಅನುಭವಸ್ಥೆಯಾಗಿದ್ದಾಳೆ. ಮಾಧವಿಗೆ ಸಮಾಜದ ಬಗ್ಗೆ ಹೇಸಿಗೆ ಉಂಟಾಗಿ ಅವಳ ಪ್ರತಿಭಟನೆ ಉಗ್ರಸ್ವರೂಪ ತಾಳುವುದು ಸ್ವಯಂವರದಲ್ಲಿ. ಹೆಣ್ಣನ್ನು ದನದಂತೆ ಮಾರಾಟ ಮಾಡುವ ಅಂದಿನ ಸಮಾಜ ವ್ಯವಸ್ಥೆಯನ್ನು ಧಿಕ್ಕರಿಸುವುದಕ್ಕೋಸ್ಕರ ತಂದೆ ಏರ್ಪಡಿಸಿದ್ದ 'ಸ್ವಯಂವರ'ವನ್ನು ಧಿಕ್ಕರಿಸುವುದರ ಮೂಲಕ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾಳೆ. ಮಾಧವಿ ತನಗೆ ಸಿಕ್ಕ ಸ್ವಾತಂತ್ರ್ಯವನ್ನು ಆತ್ಮೋದ್ಧಾರಕ್ಕಾಗಿ ತಪಸ್ಸು ಮಾಡುವುದಾಗಿ ವನಕ್ಕೆ ಹೋಗುವುದರ ಮೂಲಕ ಮತ್ತೊಮ್ಮೆ ಕಾಮುಕರ ಕಪಿಮುಷ್ಠಿಗೆ ಸಿಲುಕದೆ ತನ್ನ ತನವನ್ನು ಉಳಿಸಿಕೊಳ್ಳಲು ತೋರುವ ಧೈರ್ಯ, ಛಲಗಳ ಮೂಲಕ ಪ್ರತಿಭಟನೆಗೆ ಸಾರ್ಥಕತೆ ಕಂಡುಕೊಂಡಿದ್ದಾಳೆ. ಅಂದರೆ "ಹೆಣ್ಣನ್ನು ದನದಂತೆ ಮಾರಾಟ ಮಾಡುವ ಅಂದಿನ ಸಮಾಜ ವ್ಯವಸ್ಥೆಯನ್ನು ಧಿಕ್ಕರಿಸುವುದಕ್ಕೋಸ್ಕರ ಆಕೆ ತಂದೆ ಏರ್ಪಡಿಸಿದ ಸ್ವಯಂವರವನ್ನು ತಿರಸ್ಕರಿಸುವುದರ ಮೂಲಕ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾಳೆ"[೩೩] ಮಾಧವಿ ಪ್ರತಿಭಟನೆ ಶಾಂತತೆಯಲ್ಲಿ ಮುಕ್ತಾಯವಾದರು, ಶೋಷಿಸಿದವರ ಮೇಲೆ ಚಾಟಿ ಮಾತುಗಳನ್ನು ಬೀಸುವ ಮೂಲಕ ಸ್ತ್ರೀ ಸಂಕುಲದ ಪ್ರತಿಧ್ವನಿಯಂತೆ ತೋರುತ್ತಾಳೆ. ಅವಳು ನೋವಿನ ಮಿಳಿತದೊಂದಿಗೆ ಜರ್ಜರಿತವಾದರು ಅವುಗಳನ್ನು ಸೀಳಿಕೊಂಡು ಬಂದ ಪ್ರತಿಭಟನೆ ದ್ವಿಪ್ರಕಾರವಾಗಿದೆ. ಒಂದು ಯಾವ ಕಾಲಕ್ಕು ತಂದೆ ಮಗಳನ್ನು ದಾನ ಮಾಡದಂತೆ ತಂದೆ ಏರ್ಪಡಿಸಿದ್ದ 'ಸ್ವಯಂವರ'ವನ್ನು ಧಿಕ್ಕರಿಸುವುದು, ಮತ್ತೊಂದು ನಿಷ್ಪ್ರಯೋಜಕ ಕುದುರೆಗಾಗಿ ಬಲಿ ತೆಗೆದುಕೊಂಡ ಗಾಲವನನ್ನು ಸಮಾಜದಲ್ಲಿ ಅಪನಿಂದನೆಗೆ ಒಳಪಡಿಸುವುದು. ಕೊಟ್ಟವ–ತೆಗೆದುಕೊಂಡವರ ನಡುವೆ ಬಂದು ಹೋಗುವವರಲ್ಲಿ ಅಧೀನಳಾಗದೆ ಅರಮನೆ, ಅರಸನ–ಮನೆ ಎಂಬಂತೆ ಧಿಕ್ಕರಿಸಿ ನಡೆವಲ್ಲಿ ಪ್ರತಿಭಟನೆಯ ಗಟ್ಟಿತನ ಕಂಡುಬರುತ್ತದೆ.

ಮಾಧವಿ ಪುರುಷರ ಕಪಿಮುಷ್ಟಿಗೆ ಸಿಲುಕಿ ಅವರ ವಿರುದ್ದ ಕಿಡಿಕಾರುತ್ತಾ ಎಲ್ಲವನ್ನು ತೊರೆದು ಪ್ರತಿಭಟಿಸಿದರೆ ಎಂ.ಎಸ್ ವೇದಾರವರ 'ಜಯ' ಕಾದಂಬರಿಯಲ್ಲಿ ದ್ರೌಪದಿ ಪುರುಷ ರಾಜಕಾರಣಕ್ಕೆ ಸಿಲುಕಿ ಮಾಧವಿಯಂತೆ ತನ್ನದಲ್ಲದ ತಪ್ಪಿಗೆ ಬಲಿಯಾಗಬೇಕಾದಂತಹ ಸಂದರ್ಭಗಳಲ್ಲಿ ಪ್ರತಿಭಟಿಸುತ್ತಲೇ ತನ್ನ ರಕ್ಷಣೆ ಮಾಡಿಕೊಳ್ಳುವುದನ್ನು ಕಾಣುತ್ತೇವೆ. ಪುರಾಣ ಕಾಲದಲ್ಲಿನ ಸ್ತ್ರೀಯರು ಪುರುಷ ರಾಜಕಾರಣಕ್ಕೆ ಒಳಗಾದವರೆ, ಎಷ್ಟರಮಟ್ಟಿಗೆ ಎಂದರೆ ಪುರುಷಪರ ತತ್ವಗಳನ್ನು ಪುರುಷರಿಗಿಂತ ಮಹಿಳೆಯರೆ ಪಾಲಿಸುವ ಮಟ್ಟಿಗೆ. ಈ ಕಾದಂಬರಿಯ ಅನೇಕ ಸ್ತ್ರೀ ಪಾತ್ರಗಳು ಅನಿವಾರ್ಯತೆಯಿಂದ ಪ್ರಶ್ನಿಸದೆ, ಪ್ರತಿಭಟಿಸದೆ ಮೌನಿಯಾಗಿದ್ದೇವೆ. ತಾವು ಮಾಡದ ತಪ್ಪಿಗಾಗಿ ನೋವು, ದುಃಖಪಡುತ್ತಾರೆಯೆ ಹೊರತು ಪುರುಷರ ಆಡಳಿತ, ಅಹಿತಕರ ವರ್ತನಗೆಳ ವಿರುದ್ಧ ಎಂದೂ ಪ್ರತಿಭಟಿಸಿದವರಲ್ಲ, ಇವರಲ್ಲಿ ಪುರುಷರ ಸ್ತ್ರೀ ವಿರೋಧ ನೀತಿಗಳಿಗೆ ಶಿರಭಾಗಿದವರೆ ಹೆಚ್ಚು. ಇವರ ಸಾಲಿನಲ್ಲಿ ದ್ರೌಪದಿ ಹೆಣ್ತನದ ಮಾನ-ಪ್ರಾಣಕ್ಕಾಗಿ ಪ್ರತಿಭಟಿಸುವ ಹೆಣ್ಣಾಗಿ ವಿಶೇಷವಾಗಿ ನಿಲ್ಲುತ್ತಾಳೆ. ಪುರುಷ ರಾಜಕಾರಣಕ್ಕೆ ಸವಾಲೆಸೆಯುವ ಮೂಲಕ ಪ್ರತಿಭಟಿಸುವ ದ್ರೌಪದಿ ದಾಯಾದಿ ಮತ್ಸರದ ಬಲೆಯಿಂದ ಹೊರಬರುವ ದಾರಿ ಕಂಡುಕೊಳ್ಳುವುದು ವಿಶೇಷವಾಗಿದೆ. ದೈಹಿಕ ಶಕ್ತಿಯಲ್ಲಿ ಸ್ತ್ರೀ, ಪುರುಷರಿಗಿಂತ ಹಿಂದಿದ್ದರು ಮಾನಸಿಕ ಶಕ್ತಿಯಲ್ಲಿ ಸ್ತ್ರೀ ಪುರುಷರಿಗಿಂತ ಗಟ್ಟಿಗಿತ್ತಿ ಎಂಬುದನ್ನು ದ್ರೌಪದಿ ತೋರಿಸಿಕೊಟ್ಟಿದ್ದಾಳೆ. ಕಾದಂಬರಿಯಲ್ಲಿ ದ್ರೌಪದಿಯ ಕೊನೆಯ ಸೀರೆಯೊಂದನ್ನು ಸೆಳೆಯಲು ಬಂದ ದುಶ್ಯಾಸನನ ತಲೆಯನ್ನು ಝಾಢಿಸಿ ನೂಕುವಲ್ಲಿ ದ್ರೌಪದಿಯ ಮೊದಲ ಪ್ರತಿಭಟನೆ ಕಾಣುತ್ತದೆ. ಅದ್ಭುತಶಕ್ತಿಯೊಂದು ಅವಳಲ್ಲಿ ಆವರಿಸಿದಂತಾಗಿ ತನ್ನ ರಕ್ಷಣೆಯನ್ನು ತಾನೇ ಮಾಡಿಕೊಳ್ಳುವ ನಿಟ್ಟಿನಲ್ಲಿ ನೆರೆದಿದ್ದ ಪೌರುಷತ್ವಕ್ಕೆ ಸವಾಲೆಸೆಯುವಂತೆ "ಮಾನ ರಕ್ಷಿಸಿಕೊಳ್ಳಬೇಕಾದವರಿಗಲ್ಲ ಭಯ ಇರಬೇಕಾದದ್ದು ಮಾನ ತೆಗೆಯ ಹೊರಟವರಿಗೆ, ಅದನ್ನು ನೋಡುತ್ತಾ ನಿಂತವರಿಗೆ ಭಯ ಇರಬೇಕು"[೩೪] ಎಂದು ಸಭೆಯೇ ನಾಚುವಂತೆ ಪ್ರತಿಭಟಿಸುತ್ತಾಳೆ. ಒಂದು ಹೆಣ್ಣು ಮನಸ್ಸು ಮಾಡಿದರೆ ಗರೌಪದಿಯಂತೆ ಪ್ರತಿಭಟಿಸುವ ಮೂಲಕ ತನ್ನ ಅಸ್ತಿತ್ವವನ್ನು ತಾನೇ ಉಳಿಸಿಕೊಳ್ಳಬಹುದು ಎಂಬುದನ್ನು ಕಾದಂಬರಿಯ ಮೂಲಕ ಬಿಂಬಿಸಗಿದೆ. ಸವಾಲಾಗಿ ಒಂದು ಹೆಣ್ಣನ್ನು ಕೆಣಕಿದರೆ ಎಂತಹ ದುರ್ಗತಿ ಒದಗುತ್ತದೆ ಎಂಬುದನ್ನು "ನನ್ನ ಹೆಣ್ತನದ ಅಪಮಾನ ಮಾಡಿದ ಈ ಪಾಪಿ ದುಶ್ಯಾಸನನಿಗೆ ತಕ್ಕ ಶಾಸ್ತಿ ಮಾಡಿಯೇ ತೀರುತ್ತೇನೆ. ಮಹಿಳೆಯೊಬ್ಬಳ ಹೆಣ್ತನದ ಅಪಮಾನ ಎಂತಹ ಪರಿಣಾಮದಲ್ಲಿ ಅಂತ್ಯಗೊಳ್ಳುತ್ತದೆ ಎಂಬುದನ್ನು ಇಡೀ ಜಗತ್ತಿಗೇ ತೋರಿಸುತ್ತೇನೆ. ಇಂತಹ ಅಪಮಾನವನ್ನು ತಡೆಯದೆ, ಪ್ರಶ್ನಿಸದೆ ಕೂತ ಎಲ್ಲ ಹಿರಿಯ, ಕಿರಿಯರಿಗೂ ನನ್ನ ಅಪಮಾನ-ಸಂಕಟಗಳ ಪ್ರತಿಶೋಧದ ಬೆಂಕಿ ತಾಗದೇ ಹೋಗುವುದಿಲ್ಲ. ಇದು

ನನ್ನ ಪ್ರತಿಜ್ಞೆ"[೩೪] ಎನ್ನುವಲ್ಲಿಯೇ ನೇರ ಪ್ರತಿಭಟನೆ ವ್ಯಕ್ತವಾಗಿದೆ. ಅದರಂತೆ ಈಡೇರಿಸಿಕೊಳ್ಳುವಲ್ಲಿ ಆಧುನಿಕ ಸ್ತ್ರೀಯರಿಗು ಪ್ರೇರಣೆಯನ್ನು ನೀಡುವಂತೆ ದ್ರೌಪದಿಯ ಪಾತ್ರ ರಚನೆಯಾಗಿದೆ.

ಹೆಣ್ಣಿನ ದೇಹದ ಮೇಲೆ ಅಧಿಕಾರ ಹೊಂದಿದವರಿಗೆ ಆಕೆಯ ಮಾನ-ಪ್ರಾಣ ಕಾಪಾಡುವುದು ಅವರ ಕರ್ತವ್ಯ ಎಂಬಂತೆ ಪ್ರತೀಕಾರ ವ್ಯಕ್ತಪಡಿಸುತ್ತಾಳೆ. ಕೀಚಕನಿಂದ ಅಪಮಾನಕ್ಕೊಳಗಾದಾಗ "ಮೂರುಲೋಕದ ಗಂಡಂದಿರೆಂದು ಬಿರುದು ಬಾವಲಿ ಪಡೆದು ವಿಜೃಂಭಿಸುತ್ತಿದ್ದ ನನ್ನ ಪತಿಗಳು ಇಂದು ಎಲ್ಲಿ ಅಡಗಿ ಕುಳಿತ್ತಿದ್ದಾರೆ. ನನ್ನನ್ನು ಕಾಯಲು ಬರದೆ ತಮ್ಮ ಪುರುಷಾರ್ಥ ಸಾಧನೆಗಾಗಿ ಗುಪ್ತರಾಗಿಯೇ ಉಳಿದ ಅವರು ನಿಜಕ್ಕೂ ನಪುಂಸಕರೇ ಆಗಿಬಿಟ್ಟಿದ್ದಾರೆ. ನನ್ನನ್ನು ಒದ್ದ ಕೀಚಕನಷ್ಟೇ ಪಾಪಿಯಲ್ಲ. ಅದನ್ನು ನೋಡಿಯೂ ಸುಮ್ಮನಿರುವ ಈ ರಾಜ, ಈ ಸಭಾಸದರೆಲ್ಲರೂ ಪಾಪಿಗಳೇ"[೩೬] ಎಂದು ದುಶ್ಯಾಸನನ ಮೇಲೆ ಹರಿಹಾಯುವ ದ್ರೌಪದಿಗೆ ಕೀಚಕನಿಗೆ ತಕ್ಕ ಶಾಸ್ತಿ ಮಾಡುವುದು ಕಷ್ಟವಾಗಿರಲಿಲ್ಲ. ತನ್ನ ದೇಹಕ್ಕಾಗಿ ಪಾಲು ಮಾಡಿಕೊಂಡಿರುವ ತನ್ನ ಗಂಡಂದಿರೆನಿಸಿದ ಪಾಂಡವರಿಗೂ ತನ್ನನ್ನು ಕಾಯುವ ಜವಾಬ್ದಾರಿಯಿದೆ ಎಂಬುದರ ಅರಿವು ಮೂಡಿಸುವುದು ಪ್ರತಿಭಟನೆಯಲ್ಲಿ ಅಡಗಿರುವ ಸೊಲ್ಲಾಗಿದೆ. ದ್ರೌಪದಿಯ ಪ್ರತಿಭಟನೆ ತನ್ನ ಮಾನ ಪ್ರಾಣಕ್ಕೆ ಮಾತ್ರ ಸೀಮಿತಗೊಂಡಿರುವುದಿಲ್ಲ. ಧರ್ಮದ ಹೆಸರಿನಲ್ಲಿ ನಡೆಸುವ ಅಧರ್ಮದ ಕೃತ್ಯಗಳನ್ನು ಕುರಿತು ಪ್ರತಿಭಟಿಸುತ್ತಾಳೆ. ಧರ್ಮಕ್ಕೆ ಹೆಸರಾಗಿರುವ ಧರ್ಮರಾಯನ ಅಧರ್ಮ ನಡವಳಿಕೆಯನ್ನು ಖಂಡಿಸುತ್ತಾಳೆ. ತಮ್ಮ ತಮ್ಮ ಶೌರ್ಯ ಪ್ರದರ್ಶನಕ್ಕಾಗಿ ನಡೆಸುತ್ತಿರುವ ಕುರುಕ್ಷೇತ್ರ ಯುದ್ಧದಲ್ಲಿ ದ್ರೋಣ ಧರ್ಮರಾಯರನ್ನು ಸೆರೆಹಿಡಿಯುವಂತೆ ಮಾಡಿರುವ ಪ್ರತಿಜ್ಞೆಯಿಂದ ಪರಿತಪಿಸುತ್ತಿರುವ ಧರ್ಮರಾಯನನ್ನು ಕುರಿತು "ಯಾಕೆ ಹಾಗೆ ಕನಲುತ್ತೀಯೇ ಧರ್ಮರಾಜ? ಯುದ್ಧ ಮತ್ತು ಸಾವುಗಳು ಒಂದೇ ನಾಣ್ಯದ ಎರಡು ಮುಖಗಳಲ್ಲವೆ? ದ್ರೋಣರು ನಿನ್ನನ್ನು ಸಾಯಿಸುತ್ತೇನೆಂದು ಹೇಳಿಲ್ಲ. ಕೇವಲ ನಿನ್ನ ಸೆರೆಯನ್ನು ಹಿಡಿದು ದುರ್ಯೋಧನನಿಗೆ ಒಪ್ಪಿಸುತ್ತೇನೆ ಎಂದಿದ್ದಾರಷ್ಟೆ. ಅಷ್ಟಕ್ಕೇ ಇಷ್ಟು ಆತಂಕವೇ? ಸದಾ ಸಂಭವಿಸುವ ಕಷ್ಟಗಳ ಆಚೆಯೇ ನಿಂತು ಧರ್ಮ, ಕಾಮ, ಕರ್ಮಗಳನ್ನು ಮಾತನಾಡುವಷ್ಟರಲ್ಲಿಯೇ ನಿನ್ನ ಕರ್ತವ್ಯ ಮುಗಿದು ಬಿಡುತ್ತದೆಂದು ತಿಳಿದಿದ್ದೆಯಾ? ಒಂದಲ್ಲ ಒಂದು ಕಾಲಕ್ಕೆ ಅದರೊಳಗೆ ನೀನು ಇರಬೇಕಾಗುತ್ತದೆ. ಅಲ್ಲವೆ?"[೩೭] ಎಂದು ಹಿಂಜರಿಯುವ ಪುರುಷರ ವಿರುದ್ಧ ಮನದೊಳಗಿನ ಬೆಂಕಿಯನ್ನು ಹೊರ ಹಾಕಿದ್ದಾಳೆ. ತಾನು ಬಯಸದ ಕುರುಕ್ಷೇತ್ರ ಯುದ್ಧದಲ್ಲಿ ಐವರ ಗಂಡಂದಿರಿಂದ ಬಲಿಯಾದ ಮಕ್ಕಳ ಮರಣದ ನೋವಿನಿಂದ ಪ್ರತಿಭಟಿಸುವ ದ್ರೌಪದಿಯ ತಾಯ್ತನ ಮರುಕ ಹುಟ್ಟಿಸುವಂತಾಗಿದೆ.

ಹೆಂಡತಿ ಮಕ್ಕಳನ್ನು ರಕ್ಷಿಸದಂತಹ ಪಾಂಡವರ ಪೌರುಷತ್ವಕ್ಕೆ ಮಸಿಬಳಿಯುವ ದ್ರೌಪದಿ ಸಮಾಜದಲ್ಲಿ ಮತ್ತೊಮ್ಮೆ ಯಾವ ಹೆಣ್ಣಿಗೂ ತನ್ನಂತಹ ದುರ್ಗತಿ ಬರದಿರಲೆಂದು ಪ್ರತಿಭಟಿಸುವಲ್ಲಿ ಅವಳ ಆತ್ಮಸ್ಥೈರ್ಯವನ್ನು ಕಾಣಬಹುದು. ತಾನು ಅಪಮಾನಿಸಲ್ಪಟ್ಟೆಳೆಂದು ಹಿಂಜರಿಯದೆ ಅಪಮಾನದ ವಿರುದ್ಧ ಸಿಡಿದೆದ್ದು ಆ ಸೇಲೆಯನ್ನು ಪ್ರತೀಕಾರವಾಗಿ ತೀರಿಸಿಕೊಳ್ಳುವಲ್ಲಿ ದ್ರೌಪದಿಯ ಪ್ರತಿಭಟನೆ ಸಾಫಲ್ಯಗೊಳ್ಳುತ್ತದೆ. ಕಾದಂಬರಿಯ ಕೊನೆಯಲ್ಲಿ ಧರ್ಮರಾಯನ ಪಟ್ಟದರಸಿ ಸ್ಥಾನವನ್ನು ನಿರಾಕರಿಸುವುದರ ಮೂಲಕ ಅವಳ ಪ್ರತಿಭಟನೆ ಸಾಕಾರಗೊಳ್ಳುತ್ತದೆ. ಹೆಣ್ಣಿನ ನೋವು, ಹತಾಶೆ, ಜಿಗುಪ್ಸೆ ಭುಗಿಲೆದ್ದಾಗ ಪ್ರತಿಭಟನೆ ತಾನೇ ತಾನಾಗಿ ಹುಟ್ಟುತ್ತವೆ. ದ್ರೌಪದಿಯು ತನ್ನ ಪ್ರತಿಭಟನಾ ನಿಲುವಿನಿಂದ ಜೀವನದ ಅಪಮಾನಗಳನ್ನು ಎದುರಿಸಿ ಯುದ್ಧದ ಭೀಕರತೆಯಿಂದ ಅಧಿಕಾರ ಅಂತಸ್ತು ತಿರಸ್ಕರಿಸುವಲ್ಲಿ ಪ್ರತಿಭಟನೆ ಕಂಡು ಬಂದರೆ, ದುಶ್ಯಲೆ ಗಂಡನ ಮರಣವನ್ನು ಖಚಿತ ಪಡಿಸಿಕೊಂಡು ವೈಧವ್ಯ ಸೂಚಿತಳಾಗುವ ಮೂಲಕ ಪುರುಷ ರಾಜಕಾರಣದ ವಿರುದ್ಧ ಪ್ರತಿಭಟಿಸುತ್ತಾಳೆ. ಮುತ್ತೈದೆತನದ ಹೆಣ್ಣನ್ನು ನೋಡಿ ಖುಷಿ ಪಡುವ ಗಂಡಸರ ಜಾತಿಗೆ ವೈಧವ್ಯ ಸೂಚಿತದ ಹೆಣ್ಣಿನ ನೋವು ಅರಿವಾಗಲಿ ಎಂಬಂತೆ ಮಂಗಳಾಂಗಿಯಾಗಿ ದುಶ್ಯಲೆ ಸಿದ್ಧವಾಗುವ ಮೂಲಕ ಪ್ರತಿಭಟಿಸುತ್ತಾಳೆ. **"**ಹೆಣ್ಣು ಮಕ್ಕಳು ಸದಾ ಸುಮಂಗಲಿಯರಾಗಿರಬೇಕೆಂದು ಆಶಿಸುವ ಸಂಸ್ಕೃತಿಯಲ್ಲಿಯೂ ನೀವೇ ಹೇಳುವ ಅಮಂಗಳದ ವಿಧವೆ ಪಟ್ಟ ಹೊರಿಸುವ ನಿಮ್ಮ ಯುದ್ಧ ಸಂಸ್ಕೃತಿ ಎಂತಹ ವಿತ**ಂಡವಾದದ್ದು"**[೩೮] ಎಂದು ಅಣ್ಣ ದುರ್ಯೋಧನನ ವಿರುದ್ಧ ಪ್ರತಿಭಟಿಸುವ ನೆಲೆ ಪುರುಷರಾಜಕಾರಣದಲ್ಲಿ ಬಲಿಯಾಗುವ ವಿಧವೆಯರ ಸ್ಥಿತಿ ಹೇಗಿರುತ್ತದೆ ಎಂಬುದನ್ನು ತಿಳಿಸುತ್ತದೆ.

ಹೆಣ್ಣಾದವಳು ಶೀಲ ಕಾಪಾಡಿಕೊಂಡು ಸ್ತ್ರೀತ್ವ ಉಳಿಸಿಕೊಳ್ಳಬೇಕೆಂದು ಬಯಸುವ ಸಮಾಜವು ಪುರುಷರ ಪಾತೀವ್ರತ್ಯಕ್ಕೆ ಯಾವುದೇ ಕಡಿವಾಣ ವಿಧಿಸಿಲ್ಲ. ತಾವು ಹುಟ್ಟಿರುವುದೆ ಹೆಣ್ಣನ್ನು ಭೋಗಿಸಲೆಂದು ಎಂಬಂತೆ ನಡೆದುಕೊಳ್ಳುವ ಪುರುಷವರ್ಗ ಮದುವೆಯ ನಂತರ ತಮ್ಮ ದೇಹಾಶಕ್ತಿ ಕಳೆದುಕೊಂಡು ಕೈಹಿಡಿದ ಹೆಂಡತಿಗೆ ಮಾಡುವ ದ್ರೋಹ ಸಮಾಜದಲ್ಲಿ ಬೆಳಕಿಗೆ ಬರದೆ ಹೊರ ಪ್ರಪಂಚಕ್ಕೆ ತೋರ್ಗೊಡದೆ ರಸಿಕ ಎಂಬ ಪಟ್ಟ ಹೊರಲು ಅನೇಕ ಹೆಣ್ಣನ್ನು ವಿವಾಹವಾಗುವ ಪ್ರಸಂಗಗಳು ಪುರಾಣ ಕಾಲದಲ್ಲಿ ಅಧಿಕವಾಗಿರುವುದನ್ನು ಕಾಣಬಹುದು. ರಾಜನಾದವನು ಶೌರ್ಯ, ಪರಾಕ್ರಮ ಪ್ರದರ್ಶಿಸುವುದರ ಜೊತೆಗೆ ರಸಿಕತೆಯನ್ನು ಪ್ರದರ್ಶಿಸುವುದು ಹೆಮ್ಮೆಯ ವಿಷಯವೆಂದೇ ಭಾವಿಸಿದ್ದರು. ಇಬ್ಬರು, ಮೂವರು ಮಡದಿಯರನ್ನು ಮಕ್ಕಳಿಗಾಗಿ ವಿವಾಹವಾಗುತ್ತಿದ್ದ ಪ್ರಸಂಗಗಳು ಕಾಣಸಿಗುತ್ತವೆ. ಎಸ್.ವಿ.ಪ್ರಭಾವತಿಯವರ 'ಕುಂತಿ'

ಕಾದಂಬರಿಯಲ್ಲಿ ಲೈಂಗಿಕವಾಗಿಯೂ ಹೆಣ್ಣು ಅಧೀನಳಾಗಿ ಗಂಡು ಅಧಿಕಾರಸ್ಥನಾಗಿ ಕಂಡುಬರುತ್ತಾನೆ. "ಹುಡುಗಿಯಲ್ಲಿ ಲೈಂಗಿಕ ಆಸಕ್ತಿಗಳು ಇರುವುದಿಲ್ಲ. ಅದನ್ನು ಹುಡುಗ ಪ್ರಚೋದಿಸಬೇಕು ಎಂಬ ಮಾತನ್ನು ಬೋವಾ ಒಪ್ಪುವುದಿಲ್ಲ."[೩೯] ಪಾರಂಪರಿಕ ಹಿನ್ನೆಲೆಯಲ್ಲಿ ಸ್ತ್ರೀ ಬಗೆಗೆ ತಾಳಿರುವ ಧೋರಣೆಯನ್ನು ಘಂಟಾಘೋಷವಾಗಿ ಹತ್ತಿಕ್ಕುವ ಪ್ರಯತ್ನ ಬೋವಾರವರಿಂದ ಅರಿವಾಗುತ್ತವೆ. ಕುಂತಿ ಕಾದಂಬರಿಯು ಇದಕ್ಕೆ ಪೂರಕವಾಗಿದೆ. ಹೆಣ್ಣು ತನ್ನನ್ನು ಬಯಸುವ ಹೊತ್ತಿನಲ್ಲೂ ಸ್ವತಂತ್ರಳಾಗಿರಕೂಡದು ಎಂಬಂತೆ ಪಾಂಡು ನಡೆದುಕೊಳ್ಳುತ್ತಾನೆ. ಪಾಂಡುವಿನಂತಹ ಅನೇಕ ಪುರುಷರ ಅಭಿಪ್ರಾಯ ವಾಸ್ತವದಲ್ಲು ಬೇರೂರಿದೆ. ಮದುವೆ ಮುಂಚೆ ಕಾಮಕ್ರೀಡೆಯಲ್ಲಿ ಮಿಂದು ನಿರ್ವೀರ್ಯನಾಗಿ ಮಕ್ಕಳಾಗುವ ಶಕ್ತಿಯನ್ನು ಕಳೆದುಕೊಂಡಿದ್ದ ಪಾಂಡುವಿನ ಸ್ಥಿತಿ ಕುಂತಿಗೆ ಪ್ರತಿಭಟಿಸುವಂತೆ ಮಾಡುತ್ತದೆ. ನವವಿವಾಹಿತೆ ಕುಂತಿ ಬಯಸಿ ಗಂಡನ ಬಳಿ ಬಂದಾಗ ಪಾಂಡುವಿನ ನಿರ್ಲಕ್ಷ್ಯ ಮನೋಭಾವ ಕಂಡು ಕಾರಣ ತಿಳಿಯಲು ಪ್ರಶ್ನಿಸುತ್ತಾಳೆ. ಪಾಂಡುವಿಗೆ ಇದು ಅವಮಾನಿತವಾದಂತೆ ಹೊಡೆಯಲು ಹೋಗುತ್ತಾನೆ. ತಪ್ಪಿನಿಂದ ಜಾರಿಕೊಳ್ಳಲು ಪುರುಷರಿಗೆ ಇರುವ ಅಸ್ತ್ರ ಇದೊಂದೆ ಎಂದೆನಿಸುತ್ತದೆ. ಕುಂತಿ ಹೊಡೆಯಲೆಂದು ಎತ್ತಿದ ಪಾಂಡುವಿನ ಕೈಹಿಡಿದು "ನಿನ್ನಲ್ಲಿ ಈ ಅಹಂಕಾರಕ್ಕೆ ಬದಲಾಗಿ, ಇದ್ದುದನ್ನು ಇದ್ದಂತೆ ಒಪ್ಪಿಕೊಳ್ಳುವ ಬುದ್ಧಿ ಇದ್ದಿದ್ದರೆ ಒಳ್ಳೆಯದಾಗುತ್ತಿತ್ತು, ಕಾಮ ನಿನಗೂ ನನಗೂ"[೪೦] ಎಂದು ಪ್ರತಿಭಟಿಸುತ್ತಾಳೆ.

ಹೆಣ್ಣು ತನಗಿಷ್ಟವಿಲ್ಲದಿದ್ದರು ಬಯಸಿ ಬಂದವನಿಗೆ ಅಧೀನಳಾಗಿ ಮೌನವಹಿಸುವವಳು. ಅದೇ ಹೆಣ್ಣು ತಾನು ಬಯಸಿದಾಗ ಪತಿಯಿಂದ ಸಿಗದ ಸುಖದಿಂದ ವಂಚಿತಳಾದರು ಆಕೆ ಮೌನವಹಿಸಬೇಕೆಂದು ಬಯಸುವ ಸಮಾಜ ಪ್ರತಿಭಟಿಸಿದರೆ ತನ್ನ ದೌರ್ಬಲ್ಯವನ್ನು ಹೊರಗೆಡಹದೆ ಮತ್ತೊಂದು ಹೆಣ್ಣನ್ನೂ ವಿವಾಹವಾಗುವುದರ ಮೂಲಕ ಅವಳ ಬಾಯಿ ಮುಚ್ಚಿಸುತ್ತದೆ. ಪಾಂಡು ಕುಂತಿಗೆ ವಿರೋಧವಾಗಿ ಮಾದ್ರಿಯನ್ನು ಒಲಿಸಿ ತರುವುದು, ತನ್ನ ದೌರ್ಬಲ್ಯ ಅರಿತಿದ್ದರೂ ಮತ್ತೊಂದು ಹೆಣ್ಣಿಗೆ ಮಾಡುವ ದ್ರೋಹವಾಗುತ್ತದೆ. ನಿಜಸ್ಥಿತಿ ಅರಿತಿದ್ದ ಕುಂತಿ ಮಾದ್ರಿಯ ಯೋಗಕ್ಷೇಮ ಕೇಳಿದಾಗ ಮಾದ್ರಿ ನಿರಾಶಭಾವದಿಂದ "ತಮ್ಮ ದೌರ್ಬಲ್ಯವನ್ನು ಅರಿತಿದ್ದೂ ಹೆಣ್ಣಿನ ಮೇಲೆ ಹೆಣ್ಣನ್ನು ಮದುವೆಯಾಗಿ ಕೊಲ್ಲುವುದಕ್ಕೆ ಇವರಿಗೆ ನಾಚಿಕೆಯಾಗುವುದಿಲ್ಲವೆ"[೪೧] ಎಂದು ಹೇಳುತ್ತಾಳೆ. ಈ ಮೂಲಕ ನೇರವಾಗಿ ಕೇಳಲಾಗದಿದ್ದರು ಪುರುಷವರ್ಗದ ಮನದ ಇಂಗಿತವನ್ನು ಅರಿತವಳಾಗಿರುತ್ತಾಳೆ.

ತನ್ನ ದೌರ್ಬಲ್ಯವನ್ನು ತೋರ್ಗೊಡದೆ ಸ್ತ್ರೀ ದುರ್ಬಲತೆಯನ್ನು ಸಮಾಜಕ್ಕೆ ತೋರ್ಪಡಿಸುವ ಪುರುಷವರ್ಗದ ವಿರುದ್ಧ ಪ್ರತಿಭಟಿಸುವ ಮೂಲಕ ತಾಯ್ತನದ ಸುಖ ಕುಂತಿ, ಮಾದ್ರಿ ಪಾಲಿಗೆ

ದೊರೆಯುತ್ತದೆ. ಪಾಂಡುವಿನ ಸೂಚನೆ ಮೇರೆಗೆ ಋಷಿಮುನಿಗಳಿಂದ ಗರ್ಭಧರಿಸಿಯಾದರು ಸಮಾಜದ ದೃಷ್ಟಿಯಲ್ಲಿ ಕುಂತಿ–ಮಾದ್ರಿಯರ ತಪ್ಪಿಲ್ಲವೆಂಬುದನ್ನೂ, ಪುರುಷತ್ವ ಕಳೆದುಕೊಂಡಿದ್ದರು ಪೌರುಷತ್ವ ಮೆರೆಯುವ ಪುರುಷರ ದೌರ್ಜನ್ಯವನ್ನು ಎಸ್.ವಿ.ಪ್ರಭಾವತಿಯವರು ಬಿಂಬಿಸಿದ್ದಾರೆ.

ಪೌರಾಣಿಕ ಕಾದಂಬರಿಗಳಲ್ಲಿನ ಸ್ತ್ರೀಪಾತ್ರಗಳು ಆಧುನಿಕ ಕಾಲಗಟ್ಟಿನಲ್ಲಿ ಅಧೀನತೆಯನ್ನು ತಿರಸ್ಕರಿಸಿ ಬದುಕುವ ಪಾತಗಳಾಗಿವೆ. ಸೀತೆ–ರಾಮ–ರಾವಣ ಕಾದಂಬರಿಯಲ್ಲಿ ಸೀತೆ ತಪ್ಪು ಮಾಡದಿದ್ದರು ಸಾಯುವ ನಿರ್ಧಾರಕ್ಕೆ ಬರುತ್ತಾಳೆಂದರೆ ಸಾವಿಗೆ ಒಡ್ಡುವ ಸವಾಲು ಕಂಡುಬರುತ್ತದೆ. 'ವಿಮುಕ್ತಿ' ಕಾದಂಬರಿಯಲ್ಲಿ ಸೀತೆ ತಿರಸ್ಕೃತ ಹೆಣ್ಣಾಗದೆ, ತಿರಸ್ಕರಿಸುವ ಹಕ್ಕು ಚಲಾಯಿಸುತ್ತಾಳೆ. ಮಾಧವಿ, ದ್ರೌಪದಿ, ದುಶ್ಯಲೆ ಇವರೆಲ್ಲರು ಪ್ರತಿಭಟಿಸುವ ನೆಲೆ ಅಂತಿಮವಾಗಿ ಪಿತೃಪ್ರಧಾನ ಆಡಳಿತದಿಂದ ಬಿಡಿಸಿಕೊಳ್ಳುವುದೆ ಆಗಿದೆ. ಸ್ತ್ರೀ ಸ್ವತಂತ್ರ ಜೀವಿ. ತನ್ನ ಸ್ವಾತಂತ್ರ್ಯವನ್ನು ಚಲಾಯಿಸಬೇಕಾದರೆ ಪ್ರತಿಭಟಿಸುವ ಅಗತ್ಯವನ್ನು, ಆ ಮಾರ್ಗದಿಂದ ತಮ್ಮ ಹಕ್ಕು, ಸ್ವಾತಂತ್ರ್ಯ ಕಸಿದುಕೊಳ್ಳುವುದನ್ನು ಹೇಳುತ್ತವೆ. ಹೆಣ್ಣಿನ ಪ್ರತಿಭಟಿಸುವಿಕೆ ತನ್ನತನ ಉಳಿಸಿಕೊಳ್ಳುವುದಾಗಿದೆ. ಇದರಲ್ಲಿ ಪೌರಾಣಿಕ, ಸಾಮಾಜಿಕ ಎಂಬ ಭಿನ್ನತೆ ಕಂಡುಬರುವುದಿಲ್ಲ. ಮೋಸ, ವಂಚನೆ, ಅಂಧಕಾರ ಎಲ್ಲಿ ಆವರಿಸಿರುತ್ತದೊ ಅಲ್ಲಿ ಹೆಣ್ಣಿನ ಪ್ರತಿಭಟಿಸುವ ಹೆಜ್ಜೆ ಗುರುತುಗಳಿರುತ್ತವೆ.

ಸ್ತ್ರೀ ವಿಮೋಚನೆಗಾಗಿಯೆ ಪ್ರತಿಭಟಿಸುತ್ತ ತನ್ನ ಜೀವನವನ್ನು ರೂಪಿಸಿಕೊಳ್ಳುವ ಶಾಂತಿಯ ಪಾತ್ರ ವೀಣಾ ಶಾಂತೇಶ್ವರರವರ 'ಗಂಡಸರು' ಕಾದಂಬರಿಯಲ್ಲಿ ಬಿಂಬಿತವಾಗಿದೆ. ಪರಿಸ್ಥಿತಿಯ ಬೊಂಬೆಯಾಗಿ ನಾಲ್ಕು ಜನ ಗಂಡಸರ ಮುಷ್ಠಿಯೊಳಗೆ ಸಿಲುಕಿದವಳು ಶಾಂತಿ ಅವರೊಳಗೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳದೆ ಮೌನದಿಂದಲೇ ಪ್ರತಿಭಟಿಸುವ ಮುಗ್ಧ ಹೆಣ್ಣಾಗಿರುತ್ತಾಳೆ. "ನಮ್ಮ ಹಿಂದೂ ಹೆಂಗಸರು ಈ ಅನ್ಯಾಯ ಅತ್ಯಾಚಾರಗಳನ್ನು ಇನ್ನು ಸಹಿಸಬಾರದು, ಅವರಿನ್ನು ಈ ಕಟ್ಟು ಪಾಡುಗಳ ವಿರುದ್ಧ ಬಂಡೇಳಬೇಕು. ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕು. ಸ್ವಾತಂತ್ರ್ಯ ಸಿಗುವವರೆಗೂ ಹೋರಾಟ ನಿಲ್ಲಿಸಬಾರದು"[೨೨] ಎಂಬ ಪ್ರತಿಭಟನಾ ಆಲೋಚನಾ ರೂಪ ಕಾಲೇಜಿನ ಹಂತದಲ್ಲಿ ಮೊಳೆತಿದ್ದು ತನ್ನ ಜೀವನ ರೂಪಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾಳೆ ಎಂಬ ಮಾತು ಈ ಕಾದಂಬರಿಯ ಅಭಿವ್ಯಕ್ತಿಯ ಮೂಲಕ ತಿಳಿಯುತ್ತದೆ.

ಶಾಂತಿ ಆಧುನಿಕ ಕಾಲದವಳಾಗಿರುತ್ತಾಳೆ. ಮೊದಲ ಮೂವರು ಪ್ರೇಮಿಗಳಿಂದ ಮೋಸಹೋಗಿ ನೋವನ್ನು ಅನುಭವಿಸಿದರು ಅವರ ವಿರುದ್ಧ ಎಂದೂ ಕಠೋರವಾಗಿ ಪ್ರತಿಭಟಿಸಿದವಳಲ್ಲ ಬದಲಾಗಿ ಆ ನೋವಿನ ನೆಲೆಯಿಂದ ಹೊರಬಂದು ಬದುಕುವ ಹುಮ್ಮಸ್ಸು ತೋರುತ್ತಾಳೆ. ತನಗಾಗಿದ್ದ ಅನುಭವಗಳಿಂದ ಪುರುಷರ ಅಂತರಾಳ ಅರಿತು ಹೆಣ್ಣಿನ ಬುನಾದಿಗೆ

ಧಕ್ಕೆಯಾಗುವುದರ ಅರಿವು ಬಂದಾಕ್ಷಣ ಪ್ರತಿಭಟಿಸುತ್ತಾಳೆ. “ಹೆಂಗಸು ಒಬ್ಬ ಗಂಡಸಿನ ಗುಲಾಮಳಾಗಿ, ಪ್ರತಿಯೊಂದ್ರಲ್ಲೂ ಆತನನ್ನ ಅನುಸರಿಸಿಕೊಂಡು, ಆತ ಹೇಳಿದ ಹಾಗೆ ಕೇಳ್ಕೊಂಡು ನಾಯಿಬಾಳು ಬಾಳಬೇಕು”[೪೩] ಎಂದು ಸ್ತ್ರೀಸ್ವಾತಂತ್ರ್ಯ ಕುರಿತು ಮಾತನಾಡುತ್ತ ‘ಪ್ರತಿಯೊಬ್ಬರ ಭಾವನೆಗಳನ್ನು ವಿಚಾರಗಳನ್ನು ನಾವು ಗೌರವಿಸಬೇಕು’ ಎಂದು ಸ್ತ್ರೀ ಪರವಾದಿಯಾಗಿ ಮಾತನಾಡುವ ಅಶೋಕ್‌ಕುಮಾರ್‌ನ ನಿಜ ಬಣ್ಣ ಬಹುಬೇಗನೆ ಶಾಂತಿಗೆ ಅರಿವಾಗುತ್ತದೆ. ಶಾಂತಿ ಜಾನ್ ಪರವಾಗಿ ಕ್ಯಾನ್‌ವಾಸ್ ಮಾಡಲು ಹೋಗುವುದನ್ನು ತಪ್ಪು ಎಂಬಂತೆ “ನಿನಗ್ಯಾರು ಕ್ಯಾನ್‌ವ್ವಾಸ್ ಮಾಡ್ಲಿಕ್ಕೆ ತಿರುಗು ಅಂತ ಹೇಳಿದವರು?”[೪೪] ಎಂಬ ಪ್ರಶ್ನೆಗೆ ಒಂದು ಹೆಣ್ಣು ಕ್ಯಾನ್‌ವಾಸ್ ಮಾಡುವುದು ತಪ್ಪೇ? ಅದರಲ್ಲೂ ಮದುವೆಯಾಗುವವನ ಪರವಾಗಿ ನಿಲ್ಲುವುದು ಅಪರಾಧವೇ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಅಂತಿಮವಾಗಿ ದೊರಕುವ ಉತ್ತರ ಪುರುಷನು ವ್ಯಕ್ತಿ ಎನ್ನುವುದಕ್ಕಿಂತಲೂ ಗಂಡನ ದರ್ಪ ತೋರುತ್ತಾನೆ ಎಂಬುದು ಅರಿವಾಗುತ್ತದೆ. ಶಾಂತಿಗೆ ಜಾನ್ ಅಶೋಕ್‌ಕುಮಾರ್‌ನ ಮಾತುಗಳು ಆಶ್ಚರ್ಯವೆನಿಸಿದರು ‘ಪಾರ್ಟಿಯ ಮೆಂಬರು ನಾನು ಕ್ಯಾನ್‌ವಾಸ್ ಮಾಡುವುದು ನನ್ನ ಜವಾಬ್ದಾರಿಯೂ’ ಎಂಬಂತೆ ಮೊದಲ ಬಾರಿ ಪ್ರತಿಭಟಿಸುತ್ತಾಳೆ.

ಸ್ತ್ರೀ ಸಮಾನತೆ ಕುರಿತು ಮಾತನಾಡುವವರು ಮುಖವಾಡ ಧರಿಸಿರುವಂತೆ ಕಾಣುತ್ತಾರೆ. ಸ್ತ್ರೀ ಸ್ವಾತಂತ್ರ್ಯ ಪ್ರದರ್ಶಿಸಲು ಮುಂದಾದಾಗ ಸ್ತ್ರೀಪರವಾದಿಗಳ ಮುಖವಾಡ ಕಳಚಿ ನಿಜದರ್ಶನ ಗೋಚರಿಸುತ್ತದೆ. ಸ್ತ್ರೀ ವಿಮೋಚನೆ ಕುರಿತು ಹೋರಾಡುವ ಶಾಂತಿಯಂತಹ ಹೆಣ್ಣು ಪುರುಷರ ಅಧೀನಳಾಗಬೇಕಾದಂತಹ ಸನ್ನಿವೇಶಗಳು ಅವಳ ಜೀವನದಲ್ಲಿ ಎದುರುಗೊಂಡಾಗ ಮಣಿಯಲೇಬೇಕಾಗುವಂತಹ ಪರಿಸ್ಥಿತಿಯನ್ನು ನಮ್ಮ ಸಮಾಜ ರೂಪಿಸಿದೆ. ಸಮಾಜದ ಹೇಯ ಕೃತ್ಯಗಳನ್ನರಿತ ಶಾಂತಿ ಗಂಭೀರ ಸ್ವಭಾವದವಳಾಗಿ ಜಾನ್‌ನ ಅಭಿಪ್ರಾಯಗಳಿಗೆ ಸ್ಪಂಧಿಸುತ್ತಾಳಾದರು ಧರ್ಮ ಬದಲಾವಣೆಗಾಗಿ ಶಾಂತಿಯನ್ನು ಪೀಡಿಸುವ ವರ್ತನೆ ಹೆಣ್ಣಿನ ಇರುವಿಕೆಯ ಅಸ್ತಿತ್ವಕ್ಕೆ ಧಕ್ಕೆಯಾಗುವಂತಹದಾಗಿದ್ದು ಆತನನ್ನು ತಿರಸ್ಕರಿಸುವ ಮೂಲಕ ಅವಳ ಮೌನ ಪ್ರತಿಭಟನೆ ಎದ್ದು ಕಾಣುತ್ತದೆ.

ಎಚ್.ಎಸ್.ಪಾರ್ವತಿಯವರ ‘ಜಬಾಲಾ’ ಕಾದಂಬರಿಯಲ್ಲಿ ಪುರಾಣದ ವಿಷಯಗಳನ್ನು ಕೇಳಿತಿಳಿಯುತ್ತಿದ್ದ ಗೀತಾ ಸಮಾಜದಲ್ಲಿ ಗಂಡಸರ ವರ್ತನೆಯನ್ನು ಚೆನ್ನಾಗಿ ಅರಿತಿದ್ದವಳಾಗಿದ್ದಳು. ಮದುವೆಯಾದ ಮೇಲೂ ಓದಬಹುದೆಂಬ ತಾಯಿಯ ಮಾತಿಗೆ “ಗಂಡಸರು ಮಹಾ ಹೊಟ್ಟೆಕಿಚ್ಚಿನ ಜೀವಿಗಳು. ಬೇರೆ ಹೆಂಗಸರ ವಿಚಾರದಲ್ಲಿ ತುಂಬಾ ಉದಾರಿಗಳಾಗಿ ವರ್ತಿಸಿದರೂ, ಹೆಂಡತಿ ಮಾತ್ರ ತಮ್ಮ ಬಾಲವಾಗೇ ಇರಬೇಕೂ ಅಂತ ಇಷ್ಟಪಡ್ತಾರೆ”[೪೫] ಎಂದು ಸ್ತ್ರೀಯರ ಸ್ಥಾನಮಾನ

ಸಮಾಜದಲ್ಲಿ ಹೇಗಿದೆ ಎಂಬ ಅರಿವನ್ನು ತಾಯಿಗೆ ತಿಳಿಸುತ್ತಾ ಪುರುಷಪ್ರಧಾನ ಸಮಾಜದ ಅರಿವನ್ನು ಸಮಾಜಕ್ಕೆ ತೋರಿಸುವುದಾಗಿದೆ. ಹೆಣ್ಣು ಹೆಂಡತಿಯಂತಲೊ, ಹೆಂಡತಿ–ಹೆಣ್ಣು ಎಂತಲೊ ಒಟ್ಟಿನಲ್ಲಿ ತನಗೆ ಅಧೀನಳಾಗಿರಬೇಕೆಂದು ಬಯಸುವ ಪುರುಷರ ಪರಿಚಯವಾಗುತ್ತದೆ.

ಸ್ತ್ರೀವಾದಿ ಮನೋಭಾವದವಳಾದ ಗೀತಾ ತಾನು ಹೆಣ್ಣಾದರು ಗಂಡುಮಗನಿಗೆ ದೊರಕಬಹುದಾದ ಸ್ವಾತಂತ್ರ್ಯಗಳನ್ನು ಅನುಭವಿಸಿ ಬೆಳೆದವಳಾದ್ದರಿಂದ ಹೆಣ್ಣನ್ನು ಜರಿದು ಮಾತನಾಡುವವರ ವಿರುದ್ಧ ಪ್ರತಿಭಟಿಸುವಿಕೆ ಅವಳ ಅಂತಃಸತ್ವದಿಂದ ಭುಗ್ಗೆಂದು ಒಮ್ಮೆಲೆ ಉರಿಯತೊಡಗುತ್ತಿತ್ತು. ತನ್ನ ಸಹದ್ಯೋಗಿಗಳು ಗೀತಾಳ ಇರುವಿಕೆ ಗಮನಿಸಿ ಹೆಣ್ಣೆಂದರೆ ದುಡಿದು ಬರುವ ಗಂಡನಿಗೆ "ಕಾಫಿ ಬಟ್ಟಲು ಕೈಲಿ ಹಿಡ್ಕೊಂಡು ನಿಂತಿರಬೇಕು; ಅವಳ ತುಟಿಯಲ್ಲಿ ಸದಾ ನಗು ತುಳುಕುತ್ತಿರಬೇಕು"[೪೬] ಎಂದು ಕೊಂಕುನುಡಿದಾಗ ಅವರ ವಿರುದ್ಧ ನೇರವಾಗಿ ಸಿಡುಕುತ್ತಾಳೆ. ವಿದ್ಯಾವಂತರಾಗಿದ್ದರು ಹೆಣ್ಣಿನ ವಿಷಯದಲ್ಲಿ ಅನಾಗರಿಕರಾಗಿಯೇ ವರ್ತಿಸುವ ಸಹದ್ಯೋಗಿಗಳಾದ ವರದಯ್ಯ, ಜಯದೇವನಂತಹವರ ಆಲೋಚನೆಗಳು, ಹೆಣ್ಣೆಂದೆರೆ ತಮ್ಮ ಅಡಿಯಾಳಾಗಿರಬೇಕು, ತಮ್ಮ ಸೇವೆ ಮಾಡಿಕೊಂಡಿರಬೇಕು ಎಂದೇ ಯೋಚಿಸುವವರಾಗಿದ್ದು, ಅವರ ವಿರುದ್ಧ "ಹೆಂಗಸು ಕೇವಲ ಅಡಿಗೆ ಕೆಲಸ, ಮನೆ ಕೆಲಸ ಮಾಡ್ಕೊಂಡು ಬಿದ್ದಿರಬೇಕೂ ಅಂತ ನಿರ್ಧಾರ ಮಾಡಿರೋರು ನೀವೇ ಅಂದರೆ ನಿಮ್ಮಂಥ ಗಂಡಸರೇ ತಾನೇ"[೪೭] ಎಂದು ಹೆಣ್ಣನ್ನು ಹಿಂಜರಿದು ಮಾತನಾಡುವವರ ವಿರುದ್ಧ ಪ್ರತಿಭಟಿಸುತ್ತಾಳೆ ಇವಳ ಮಾತಿನಲ್ಲಿದ್ದ ಪ್ರತಿಭಟನೆ ಜೀವನದಲ್ಲೂ ಕಂಡುಬರುತ್ತದೆ. ಅದನ್ನು ಮೌನವಾಗಿ ಪ್ರತಿಭಟಿಸುವ ಮೂಲಕ ರೂಪಿಸಿಕೊಳ್ಳುವುದು ಬಿಂಬಿತವಾಗಿದೆ. ದೇಶ ಎಷ್ಟೇ ಆಧುನೀಕರಣಗೊಳ್ಳುತ್ತಿದ್ದರು ಹೆಣ್ಣಿನ ಮೇಲಿನ ತಾತ್ಸಾರದ ಮಾತುಗಳು ಹಿಂದಿನವರನ್ನು ಅನುಸರಿಸಿಕೊಂಡೇ ಬರುತ್ತಿವೆ. ವಿದ್ಯಾವಂತರೆನಿಸಿದ 'ಜಬಾಲಾ' ಕಾದಂಬರಿಯ ವರದಯ್ಯ, ಜಯದೇವರತಂಹವರು ಎಲ್ಲಾ ಕ್ಷೇತ್ರಗಳಲ್ಲೂ, ಕುಟುಂಬಗಳಲ್ಲೂ ಇರುವವರೆ. ಹೆಣ್ಣಾದವಳು ಚಿಕ್ಕಂದಿನಿಂದಲೂ ಇನ್ನೊಬ್ಬರ ಮಾತುಗಳಿಗೆ ಬೆಲೆಕೊಟ್ಟು ಬದುಕಬೇಕು, ಮಕ್ಕಳನ್ನು ಹೆತ್ತು ತಾಯಿಯಾಗಿ ತನ್ನ ಹೆಣ್ತನದ ಜವಾಬ್ದಾರಿಯನ್ನು ಪೂರ್ಣಗೊಳಿಸಬೇಕು. ಇಂತಹ ನಿರೀಕ್ಷೆಗಳೆಂದಲೆ ಹೆಣ್ಣನ್ನು ನೋಡುತ್ತಿರುವ ಸಮಾಜ ಅವುಗಳನ್ನು ನೆರವೇರಿಸದಿದ್ದಾಗ ಅವಳನ್ನು ನೋಡುವ ದೃಷ್ಟಿಕೋನವೆ ಬೇರೆಯಾಗಿರುತ್ತದೆ. ಹೆಣ್ತನಕ್ಕೆ ಧಕ್ಕೆಯಾದಾಗ ಅವರ ವಿರುದ್ಧ ಪ್ರತಿಭಟಿಸುತ್ತಿದ್ದ ಗೀತಾ ತಾಯ್ತನದ ಸುಖವಿಲ್ಲದೆ ಸಮಾಜದ ದೃಷ್ಟಿಯಲ್ಲಿ ಬಂಜೆಂಬ ಆಪಾದನೆಗೆ ಒಳಗಾಗಬೇಕಾಗುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯಡಿ ಬದುಕುತ್ತಿರುವ ಅತ್ತೆಯ ದಿನನಿತ್ಯದ ಮನನೋಯುವ ಮಾತುಗಳಿಗೆ ಬೇಸತ್ತಿದ್ದ ಗೀತಾ ಪಿಎಚ್.ಡಿ ವ್ಯಾಸಂಗಕ್ಕೆ ಮುಂದಾದರೂ ಅತ್ತೆಯ ಗೊಣಗಾಟ ನಿಲ್ಲಲಿಲ್ಲ. ಬಂಜೆ ಎಂದು ಮೂದಲಿಸುತ್ತಿದ್ದ ಅತ್ತೆ, ಒಮ್ಮೆ ಕಾಲೇಜಿಗೆ ಸೇರುವ ಆಸ್ಥೆ ತೋರಿದ ಗೀತಾ ಕುರಿತು 'ಸಂಸಾರ ನೋಡಿಕೊಂಡಿರಬಾರದೆ' ಎಂಬ ಧ್ವನಿಗೆ "ಸಂಸಾರ ನೋಡಿಕೊಳ್ಳೋದಕ್ಕೆ ಏನಿದೆ ಅತ್ತೆ? ಅಡಿಗೆ ಕೆಲಸ ಪ್ರತಿಯೊಂದು ನೀವು ನೋಡಿಕೊಳ್ತೀರಿ ಇನ್ನು ನಂಗೇನು ಮಕ್ಕಳೇ ಮರಿಯೇ?"[೪೮] ಎಂತಲೇ ಅತ್ತೆಯ ವಿರುದ್ಧ ವ್ಯಂಗ್ಯದಿಂದಲೇ ಪ್ರತಿಭಟಿಸುತ್ತಾಳೆ. ಅವಳ ಧ್ವನಿಯಲ್ಲಿ ನೈಜತೆ ವ್ಯಕ್ತವಾಗುತ್ತದೆ. ನಿಂದನೆಯ ಬೇಗೆಯಲ್ಲಿ ನಿತ್ಯವೂ ಬೇಯುತ್ತಾಳೆಂಬ ಪಾತ್ರಕ್ಕೆ ಲೇಖಕಿಯ ಈ ಪಾತ್ರವೇ ಸಾಕ್ಷಿಯಾಗಿದೆ. ಪುರುಷಪ್ರಧಾನ ಕುಟುಂಬದಡಿಯಲ್ಲಿ ಬದುಕುತ್ತಿರುವ ಅನೇಕ ಸ್ತ್ರೀಯರು ಪುರುಷರ ಹಾದಿಯಲ್ಲಿ ಚಲಿಸುತ್ತ ಮತ್ತೊಂದು ಹೆಣ್ಣಿನ ನೋವು–ಸಂಕಟ–ಪರಿಸ್ಥಿತಿಗಳನ್ನು ಅರಿಯದ ಕುರುಡರಾಗಿದ್ದಾರೆ. ತಾಯಿಯಾಗದ ಹೆಣ್ಣನ್ನು ದೂರುವ ಸಮಾಜ ಅದರಲ್ಲಿ ಪುರುಷನ ಪಾತ್ರವು ಇರುತ್ತದೆಂಬುದನ್ನು ಅರಿತಿದ್ದರು ಪುರುಷರ ಹೆಸರು ಬರದಂತೆ ಹೆಣ್ಣನ್ನು ನಿಂದಿಸುವುದು ಲೋಕರೂಢಿಯಾಗಿಬಿಟ್ಟಿದೆ. ತಾನು ವಾಸಿಸುತ್ತಿರುವ ಪುರುಷತ್ವ ಸಮಾಜದ ಪರವಾಗಿ ಮಾತನಾಡುವ ಅತ್ತೆ ನಿಂದಿಸುತ್ತಿದ್ದರೆ, ಸಮಾಜದ ನಿಂದನೆಯನ್ನು ಕೇಳಿಯು ಮೌನಿಯಾಗಿರುವ ನಿರ್ವೀರ್ಯನಾಗಿದ್ದ ಪತಿಯ ವಿರುದ್ಧ ಮತ್ತೊಬ್ಬನಿಂದ ಗರ್ಭಿಣಿಯಾಗುವ ಮೂಲಕ ಮೌನವಾಗಿ ಪ್ರತಿಭಟಿಸುತ್ತಾಳೆ. ಹೆಂಡತಿಯನ್ನು ತನ್ನ ಸ್ವತ್ತೆಂದು ಭಾವಿಸುವ ಗಂಡಸರು ಬೇರೊಬ್ಬರ ಮಗುವನ್ನು ತನ್ನ ಮಗುವೆಂದು ಒಪ್ಪಿಕೊಳ್ಳಲಾಗದೆ ಪಡುವ ರಾಜಶೇಖರನ ಯಾತನೆಯಿಂದ ಗೀತಾಳ ಪ್ರತಿಭಟನೆಗೆ ಸಾರ್ಥಕತೆ ಕಾಣುತ್ತದೆ. ತನ್ನದಲ್ಲದ ತಪ್ಪಿನಿಂದ ಸಮಾಜದ ಕಣ್ಣಿಗೆ ಬಂಜೆಯಂತಿದ್ದ ಗೀತಾ ತಾಯಿಯಾಗಿ ನಿರ್ದೋಷಿ ಎಂಬುದನ್ನು ಸಮಾಜಕ್ಕೆ ತೋರಗೊಡುವ ಮೂಲಕ ಮೌನವಾಗಿ ಪ್ರತಿಭಟಿಸುತ್ತಾಳೆ. ತನ್ನದಲ್ಲದ ಮಗುವನ್ನು ಒಪ್ಪಿಕೊಳ್ಳದೆ ಹೆಣ್ಣಿನ ಬಂಜೆತನಕ್ಕೆ ತಾನು ಕಾರಣ ಎಂದು ಧೈರ್ಯವಾಗಿ ತಪ್ಪನ್ನು ಒಪ್ಪಿಕೊಳ್ಳಲು ಎಲ್ಲಿಯವರೆಗೆ ಪುರುಷವರ್ಗ ಮುಂದೆ ಬರುವುದಿಲ್ಲವೋ ಅಲ್ಲಿಯವರೆಗೂ ನಮ್ಮ ಸಮಾಜ ಹೆಣ್ಣನ್ನು ದೂಷಿಸುತ್ತಿರುತ್ತದೆ. ಪುರುಷರಲ್ಲಿ ಫಲವಂತಿಕೆ ಇಲ್ಲದಾಗ ಸ್ತ್ರೀಯು ಗಂಡಿನ ಹಂಗಿಗೆ ಒಳಗಾಗುತ್ತಾಳೆ. ಆ ಹಂಗನ್ನು ಬಿಡಿಸಿಕೊಂಡ ಗೀತಾಳ ಪ್ರತಿಭಟನೆ ಸ್ತ್ರೀ ನೆಲೆಯನ್ನು ಸ್ಥಾಪಿಸುವುದಾಗಿದೆ.

ಗೀತಾ ತನಗರಿವಿದ್ದೇ ಪ್ರಿಯಕರನಿಂದ ಗರ್ಭಿಣಿಯಾಗಿ ಪತಿವಿರುದ್ಧ ಪ್ರತಿಭಟಿಸಿದರೆ ತನಗರಿವಿಲ್ಲದೆ ಅನಾಮಿಕ ವ್ಯಕ್ತಿಯಿಂದ ಗರ್ಭಿಣಿಯಾಗಿ ಅದನ್ನು ತೋರಗೊಡದೆ ಸಮಾಜದಲ್ಲಿ

ಬಂಜೆಂಬತನದಿಂದ ಮುಕ್ತಿ ಹೆಣ್ಣು ಬಿ.ಟಿ.ಲಲಿತಾ ನಾಯಕ್‌ರ 'ನೆಲೆಬೆಲೆ' ಕಾದಂಬರಿಯಲ್ಲಿ ಚಿತ್ರಿತವಾಗಿದೆ.

ನಗರವಾಗಿರಲಿ, ಹಳ್ಳಿ, ಊರುಗಳಾಗಿರಲಿ ಸ್ತ್ರೀ ಪಡುವ ವೇದನೆ ಒಂದೆ, ನೋವು ಒಂದೇ. ಗ್ರಾಮೀಣ ಜೀವನದ ಹೆಣ್ಣಾದರು ಅಕ್ಕನ ಬಾಣಂತನಕ್ಕೆಂದು ನಗರ ಪ್ರವೇಶಿಸಿದ ಜಯಾಳಿಗೆ ಆಕರ್ಷಿಸಿದ್ದು ರೇಖಾ ಕಟ್ಟಿದ್ದ 'ವಿಮೋಚನಾ ಮಹಿಳಾ ಸಂಘ' ಮಹಿಳೆಯರಿಗೆ ಆಗುವ ಅನ್ಯಾಯ ಕುರಿತು ಪ್ರತಿಭಟಿಸಲೆಂದೇ ಇರುವ ಈ ಸಂಘದ ವಿಚಾರಗಳಿಂದ ಪ್ರತಿಭಟಿಸುವ ನೆಲೆಯನ್ನು ಕಂಡುಕೊಂಡಳು. ಸ್ತ್ರೀಪರ ಆಸಕ್ತಿ ಹೊಂದಿದ್ದ ಜಯಾಳಿಗೆ ಸ್ತ್ರೀಯರ ಸಮಸ್ಯೆಗಳೇನು? ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ ಹೇಗಿದೆ? ಸ್ತ್ರೀ ವಿಮೋಚನೆ ಹೇಗೆ ಸಾಧ್ಯ? ಎಂಬುದನ್ನು ಸಂಘದ ಭಾಷಣ, ಚರ್ಚೆಗಳಿಂದ ತಿಳಿಯುತ್ತ ಸಂಘದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಹುರುಪು ಅವಳಲ್ಲಿ ಮತ್ತಷ್ಟು ಬೆಳೆಯುತ್ತದೆ. ಶೈಕ್ಷಣಿಕ ಲಭ್ಯತೆಯಿಂದ ಸ್ತ್ರೀಯರು ಸಮಾಜಮುಖಿ ಚಿಂತನೆಗೆ ಒಳಗೊಳ್ಳುವ ಸಂದರ್ಭ ಈ ಪಾತ್ರದ ಮೂಲಕ ವ್ಯಕ್ತವಾಗಿದೆ. ಗಂಡು ಹೆಣ್ಣಿಗಿಂತ ಮೇಲು ಎಂಬ ಭಾವನೆ ಸಮಾಜದಲ್ಲಿ ಬೇರೂರಿಬಿಟ್ಟಿದೆ. ಅದನ್ನು ಕನಕ ಹೆಣ್ಣು ಏನೇ ಮಾಡಿದರು ಗಂಡು ಆಗಲು ಸಾಧ್ಯವಿಲ್ಲ ಎಂಬರ್ಥದಲ್ಲಿ ಆಡುವ ಮಾತಿಗೆ "ಹೆಂಗಸು ಗಂಡಸಾಗಬೇಕು ಅಂತ ಹೊರಟಿಲ್ಲ ಕನಕಾ. ತಾನೂ ಎಲ್ಲರ ಹಾಗೆ ಮನುಷ್ಯಳು ಅನ್ನುವುದನ್ನು ಸಾಬೀತುಗೊಳಿಸುವುದಕ್ಕೆ ಪ್ರಯತ್ನಿಸ್ತಾ ಇದ್ದಾಳೆ! ಸಮಾಜದಲ್ಲಿ ಗಂಡಸಿಗೆ ಇರುವ ಸೌಲತ್ತು ಸ್ಥಾನಮಾನಗಳನ್ನು ಅವಳೂ ಯಾಕೆ ಪಡ್ಕೋಬಾರ್ದು?"[೩೯] ಎನ್ನುವಲ್ಲಿ ಪುರುಷಪ್ರಧಾನ ಸಮಾಜದ ವಿರುದ್ಧದ ಧ್ವನಿ ಕಾಣುತ್ತದೆ. ಹೆಣ್ಣಿಗೆ ಎಲ್ಲಾ ಅವಕಾಶಗಳಿವೆ ಏನು ಕಡಿಮೆ ಎಂಬ ಕನಕಾಳ ಮಾತಿಗೆ "ಹೌದು ಎಲ್ಲಾ ಮಾಡಬಹುದು. ಆದ್ರೆ ಅವಳಿಗೆ ಇದಕ್ಕೆಲ್ಲಾ ಅವಕಾಶ ಕೊಡೋರ್‍ಯಾರು? ಹೆಣ್ಣು ಹೆಂಗ್ಸು ಅದನ್ನ ಮಾಡಬಾರ್ದು, ಇದನ್ನ ಬಿಡಬಾರ್ದು, ಅಲ್ಲಿಗೆ ಹೋಗಬಾರ್ದು. ಇದನ್ನ ಕಲಿಬಾರ್ದು ಅಂತೆಲ್ಲ ಅವಳ ಮಟ್ಟಿಗೆ ನೂರಾ ಎಂಟು ಕಟ್ಟುಪಾಡುಗಳನ್ನು ಹಾಕಿ, ತಮ್ಮ ಇಚ್ಛೆಗೆ ಸರಿಯಾಗಿ ಅವಳು ಕುಣಿದುಕೊಂಡು ಬಿದ್ದಿರಲಿ ಅಂತ ಬಯಸುವ ಸ್ವಾರ್ಥಿಗಳ ಹಿಡಿತದಲ್ಲಿ ಅವಳು ಸಿಕ್ಕಿಹಾಕ್ಕೊಂಡಿರುವಾಗ ಹೆಚ್ಚಿಗೆ ಏನು ತಾನೇ ಸಾಧಿಸ್ತಾಳೆ ಹೆಣ್ಣು"?[೪೦] ಎಂದು ಸ್ತ್ರೀವಾದಿಯಾಗಿ ಹೇಳುವ ಮಾತುಗಳಲ್ಲಿ ಪ್ರತಿಭಟಿಸುವ ರೂಪ ತಳೆದಿದೆ. ಹೆಣ್ಣಿನ ಸ್ಥಾನ ಸಮಾಜದಲ್ಲಿ ಹೇಗಿದೆ? ಸ್ವತಂತ್ರವಾಗಿ ಮನಬಂದಂತೆ ಬದುಕಲು ಆಗದೆ ಒದ್ದಾಡುತ್ತಿರುವ ಹೆಂಗಳೆಯರ ಒಟ್ಟಾರೆ ಧ್ವನಿಯಾಗಿ ಹೇಳುವ ಮಾತುಗಳಾಗಿವೆ. ಪರೋಕ್ಷವಾಗಿ ನಿರ್ಬಂಧಗಳಿಂದ ಬಿಡುಗಡೆ ಬಯಸುವುದಾಗಿದೆ. ಹೆಣ್ಣೆಂದರೆ ಅವಳಿಗೆ ಅವಳದೇ ಆದ ಸ್ಥಾನ ಮಹತ್ವ ಇರುತ್ತವೆ.

ಅವುಗಳನ್ನು ಅವಳಿಗೆ ಬಿಟ್ಟುಬಿಡುವಂತೆ ಎಚ್ಚರಿಸುವುದಾಗಿದೆ. ಮಹಿಳಾಪರ ಮಾತನಾಡುವ ಜಯಾ ತಾಯ್ತನದ ಸುಖವಿಲ್ಲದೆ ದೂಷಿಸುವ ಬಂಜೆ ಎಂಬ ಆಪಾದನೆಗೆ ಒಗ್ಗಿಕೊಂಡು ಕಾಲ ಕಳೆಯುತ್ತಿದ್ದವಳು. ಅತ್ತೆಯ ಹೃದಯಬಿರಿವ ಮಾತುಗಳನ್ನು ಕೇಳಿಸಿಕೊಂಡು ಸುಮ್ಮನಿರಲಾಗದೆ ಪಟ್ಟಣದಲ್ಲಿದ್ದು ಮಹಿಳೆಯರ ಸ್ಥಾನ–ಮಾನ ಅರಿತಿದ್ದರಿಂದ "ಯಾಕತ್ತೆ ಹೆಣ್ಣು ಮಕ್ಳನ್ನ ಕಂಡ್ರೆ ಇಷ್ಟೊಂದು ಉರಿದು ಬೀಳ್ತೀಯಲ್ಲ.... ನಿನ್ನನ್ನ ಹೆತ್ತೋಳೂ ಒಬ್ಬ ಹೆಣ್ಣೇ ಅಲ್ವಾ?"[೫೧] ಎಂದು ಪ್ರತಿಭಟಿಸುತ್ತಾಳೆ. ಇದೆಲ್ಲವನ್ನು ತಾತ್ವಿಕವಾಗಿ ಯೋಚಿಸುವ ಸಾಮರ್ಥ್ಯವಿಲ್ಲದ ಪುರುಷಪ್ರಧಾನ ಸಮಾಜದ ಪರಿಪಾಲಕರಾಗಿರುವ ಅತ್ತೆ ಜಯಾಳ ಬೆನ್ನಿಗೆ ಗುದ್ದುವ ಮೂಲಕ ಅವಳ ಪ್ರತಿಭಟನೆಗೆ ತಣ್ಣೀರೆರೆಚುತ್ತಾಳೆ. ಜಯಾ ಅತ್ತೆಯ ವಿರುದ್ಧ ಪ್ರತಿಭಟಿಸುವ ಸೊಸೆಯಾಗಿ ಕಾಣಸಿಗುತ್ತಾಳೆ. ಅತ್ತೆ ಹೇಳಿದಂತೆ ಕೇಳಬೇಕು ಎನ್ನುವ ಕಾಲದಲ್ಲಿ ಜಯಾ ತಿರುಗಿ ಬೀಳುವುದು ಬೇಸತ್ತ ನೋವಿನ ದನಿಯಾಗಿ ತಾನು ಅತ್ತೆಯ ಕಾಲದವಳಲ್ಲ ಎಂಬುದನ್ನು ಸ್ಥಾಪಿಸಿದ್ದಾಳೆ.

ನಮ್ಮ ಸಮಾಜ ಮಹಿಳಾಪರ ಮಾತನಾಡುವವರನ್ನು ನೋಡುವ ದೃಷ್ಟಿಕೋನವೆ ಬೇರೆಯಾಗಿರುತ್ತದೆ. 'ವಿಮೋಚನಾ ಮಹಿಳಾ ಸಂಘ' ನಡೆಸುತ್ತಿರುವ ರೇಖಾಳ ಅಂತರಾಳ ಒಳಹೊಕ್ಕು ನೋಡದ ಅವಳನ್ನು ನಡತೆಗೆಟ್ಟವಳು ಎಂದು ತಮ್ಮ ಬೇಳೆ ಬೇಯಿಸಿಕೊಳ್ಳಲು ಮತ್ತೊಂದು ಹೆಣ್ಣನ್ನು ದೂಷಿಸುವ ಪುರುಷವರ್ಗದ ಸಮಾಜದಲ್ಲಿ ಬದುಕುತ್ತಿರುವ ಸ್ತ್ರೀವರ್ಗವು ಆಕೆಯನ್ನು ಅದೇ ದೃಷ್ಟಿಕೋನದಿಂದ ನೋಡುವ ಮನೋಭಾವದವರಾಗಿ ಬಿಡುತ್ತಾರೆ. ಇಂಥ ಆಪಾದನೆಗೆ ವಿಮೋಚನಾ ಮಹಿಳಾ ಸಂಘದ ರೇಖಾ ಗುರಿಯಾಗಬೇಕಾಗುತ್ತದೆ. ರೇಖಾಳ ಅಂತರಾಳ ಒಳಹೊಕ್ಕು ನೋಡದ ಶಾಂತಮ್ಮ, ಕನಕರಂತಹವರು ಮನೆಯ ಗಂಡು ಮಕ್ಕಳೇ ನಮ್ಮ ಪ್ರಪಂಚ, ಬೇರೆ ವಿಚಾರ ತಿಳಿದು ಯಾವ ರಾಜ್ಯ ಆಳಬೇಕಾಗಿದೆ. ಗಂಡ, ಮನೆ, ಸಂಸಾರದಲ್ಲಿ ಕಾಲ ಕಳೆಯುತ್ತಿರುವ ಶಾಂತಮ್ಮನಂತಹವರು ಹೊರಜಗತ್ತಿಗೆ ಕಣ್ಣು ಹಾಯಿಸದವರಲ್ಲ. ಸಂಸಾರವನ್ನು ನಿಭಾಯಿಸಿಕೊಂಡು ಹೋಗುವುದರಲ್ಲೇ ಹೆಣ್ಣಿನ ಕರ್ತವ್ಯ ಅದಕ್ಕಿಂತಲೂ ಹೆಚ್ಚಾಗಿ ಅಪೇಕ್ಷಿಸುವುದು ತಪ್ಪೆಂದು ಭಾವಿಸಿದ್ದ ಅವಿದ್ಯಾವಂತರಾಗಿದ್ದವರು. ಅಕ್ಷರ ಕಲಿಯುವ ಹೆಣ್ಣುಮಕ್ಕಳ ಬಗ್ಗೆ ರೇಖಾಳ ನಡೆತೆ ಬಗ್ಗೆ ಕೀಳಾಗಿ ಮಾತನಾಡುವ ಶಾಂತಮ್ಮ ವಿರುದ್ಧ ಜಯಾ ಪ್ರತಿಭಟಿಸುತ್ತಾಳೆ. "ದಾರಿ ತಪ್ಪಿರೋದು ರೇಖಾ ಅಂತಹವರಲ್ಲ ಶಾಂತಮ್ಮ–ನಿಮ್ಮಂತಹವರು! ನಿಮ್ಮ ಕಣ್ಣಿಗೆ ಬರೀ ಹೆಣ್ಣಿನ ದೋಷಗಳಷ್ಟೇ ಕಾಣಿಸತ್ವೆ ಓದಿದ ಹೆಂಗಸರು ಕೆಡ್ತಾರೆ–ಓದಿದ ಗಂಡಸರು ಕೆಡೋಲ್ಲ! ಓದಿದ ಹೆಂಗಸರು ಗಂಡನ್ನ ಬಿಟ್ಟು ಓಡ್ಹೋಗ್ತಾರೆ. ಆದ್ರೆ ಪಾಪ! ಓದಿದ ಗಂಡಸರು ಮತ್ತೊಬ್ಬಳ ಕಡೆ ಕಣ್ಣೆತ್ತಿಯೂ ನೋಡೋಲ್ಲ! ನೋಡಿ ಮೊದಲು ನಿಮ್ಮ ದೃಷ್ಟೀಲಿರುವ ದೋಷವನ್ನ

ಗುಣಪಡಿಸಿಕೊಳ್ಳಿ ಆಮೇಲೆನಾದ್ರೂ ಒಂದಿಷ್ಟು ಒಳ್ಳೆಯದನ್ನ ಗುರುತಿಸೋದಕ್ಕೆ ನಿಮ್ಮಿಂದ ಸಾಧ್ಯವಾಗಬಹುದು!”[೫೨] ಎಂದು ರೋಷದಿಂದ ಗುಡುಗುತ್ತಾಳೆ. ಒಂದು ಹೆಣ್ಣಿನ ವಿಚಾರದಲ್ಲಿ ಕೇವಲವಾಗಿ ಮಾತನಾಡಿದ ಜಯಾಳಿಗೆ ಸಹಿಸಲಾಗುವುದಿಲ್ಲ. ರೇಖಾಳ ಜೀವನದ ಹಿನ್ನೆಲೆ ತಿಳಿದಿದ್ದ ಜಯಾ ರೇಖಾಳ ವಿರುದ್ಧ ಅಸಭ್ಯವಾಗಿ ಮಾತನಾಡಿದಾಗ ಶಾಂತಮ್ಮನಿಗೆ ‘ಒಂದು ಹೆಣ್ಣನ್ನು ಮತ್ತೊಬ್ಬ ಹೆಣ್ಣು ದೂಷಣೆ ಮಾಡೋದು ಸರಿಯಲ್ಲ’ ಎಂಬ ಬುದ್ಧಿಮಾತಿನಿಂದಲೂ ಪ್ರತಿಕ್ರಿಯಿಸುವಿಕೆ ಪಿತೃಪ್ರಧಾನತೆಯ ಹೊರನಿಂತ ಹೆಣ್ಣಿನ ಮಾತುಗಳಾಗಿ ಹೊರಹೊಮ್ಮಿವೆ.

ಕಾದಂಬರಿಯಲ್ಲಿ ಜಯಾ ತನಗಾಗಿ ಎಂದೂ ಪ್ರತಿಭಟಿಸದವಳಲ್ಲ. ಸ್ತ್ರೀಪರ ಕಾಳಜಿಯಿಂದ ಸ್ತ್ರೀ ವಿರೋಧಿಗಳ ವಿರುದ್ಧ ಪ್ರತಿಭಟಿಸುತ್ತಾಳೆ. ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ ಪುರುಷರಷ್ಟೇ ಇರುವುದನ್ನು ಮನಗಂಡಿದ್ದ ಜಯಾ ತನಗರಿವಿಲ್ಲದೆಯೆ ಪರಪುರುಷನಿಂದ ಗರ್ಭಿಣಿಯಾದಾಗ ಧೈರ್ಯ ತಂದುಕೊಂಡು ನಿಜ ಹೊರಹಾಕದೆ ಮೌನಿಯಾಗುತ್ತಾಳೆ. ಶಿವಮಲ್ಲು ತನ್ನ ಮಗುವೆಂದೇ ಮನೆ–ಮಂದಿ ಸಂಭ್ರಮಿಸಿದರೆ ಜಯಾ ಸತ್ಯ ತಿಳಿದರೆ ಜರಿದಾಡಬಹುದೆಂದುಕೊಳ್ಳುತ್ತಾ ಸಮಾಜದ ದೃಷ್ಟಿಯಲ್ಲಿ ತಾನು ಬಂಜೆ ಅಲ್ಲವೆಂಬ ಶಬ್ಧದಿಂದ ತೃಪ್ತಿಹೊಂದಿ ಗುಟ್ಟನ್ನು ಗುಟ್ಟಾಗಿಯೇ ಇಡುವ ಮೂಲಕ ಮೌನಿಯಾಗುತ್ತಾಳೆ. ತಾನು ಬಂಜೆ ಅಲ್ಲ ಎಂಬಂತೆ ಪುರುಷಪ್ರಧಾನ ಸಮಾಜಕ್ಕೆ ಪ್ರತಿಭಟಿಸುವ ನೆಲೆ ಅವಳ ಮೌನದಿಂದಲೆ ತಿಳಿಯುತ್ತದೆ.

ಸಂಪ್ರದಾಯಸ್ಥ ಕುಟುಂಬದಲ್ಲಿ ಬೆಳೆದು ಸಂಪ್ರದಾಯವಾದಿಗಳ ಮನಃಪರಿವರ್ತಿಸುವ ಪ್ರತಿಭಟನಾ ರೂಪವನ್ನು ವೈದೇಹಿಯವರ ‘ಅಸ್ಪೃಶ್ಯರು’ ಕಾದಂಬರಿಯಲ್ಲಿ ಕಾಣಬಹುದು. ಹಿರಿಯರಾದ ವಾಸುದೇವರಾಯರಾದಿಯಾಗಿ ಪುರುಷವರ್ಗ ಜಾತಿ ಹಿನ್ನಲೆಯಲ್ಲಿ ಪ್ರತಿಭಟಿಸಿದರೆ ಸರೋಜಳಂತಹ ಹೆಣ್ಣು ಜಾತಿ ವ್ಯವಸ್ಥೆಯ ಜೊತೆಗೆ ಜಾತಿ ವ್ಯವಸ್ಥೆಗಿಂತ ಕೀಳಾಗಿ ಕಾಣುವ ಹೆಣ್ಣಿನ ಅಸ್ತಿತ್ವಕ್ಕಾಗಿ ಪ್ರತಿಭಟಿಸುತ್ತಾಳೆ. ಕಾದಂಬರಿಯ ಸ್ತ್ರೀಯರು ಪಿತೃಪ್ರಧಾನ ಸಮಾಜದ ಪ್ರತಿರೂಪವಾಗಿ ತಮ್ಮ ಮೇಲೆ ಹೇರಿರುವ ಪುರುಷಪ್ರಧಾನತೆಯ ಮೌಲ್ಯಗಳನ್ನು ಚಾಚು ತಪ್ಪದೆ ಪಾಲಿಸುವವರಾಗಿರುತ್ತಾರೆ. ಇವರ ಆಚರಣೆಗಳಿಗೆ ಆಸ್ಪದ ನೀಡದ ಸರೋಜ ವಿದ್ಯಾವಂತೆಯಾಗಿದ್ದು ಅಮಾನವೀಯ ಮೌಲ್ಯಗಳ ವಿರುದ್ಧ ಪ್ರತಿಭಟಿಸುವಂತವಳಾಗಿದ್ದಾಳೆ.

ಹೊರಹೋಗಿ ಸಂಪಾದಿಸುವ ಗಂಡು, ಸಮಾಜದಲ್ಲಿ ವಿಶೇಷ ಮಾನ್ಯತೆ ಪಡೆದಿದ್ದು ತಾವು ದುಡಿಯುವುದೆ ರುಚಿ ರುಚಿಯಾದ ಭಕ್ಷ್ಯ ಭೋಜನಕ್ಕಾಗಿ ಅವುಗಳನ್ನು ಮಾಡಿಬಡಿಸುವುದೇ ಹೆಂಡತಿಯರ ಕರ್ತವ್ಯವೆಂದು ಪಾಲಿಸುವ ಪುರುಷ ವರ್ಗಕ್ಕೆ ರತ್ನಳ ಗಂಡ ಸೇರಿದವನಾಗಿರುತ್ತಾನೆ. ಊಟದ ವಿಷಯವಾಗಿ ರಂಪಾಟ ಮಾಡುವ ಭಾವನನ್ನು ಕುರಿತು “ನಾನಾಗಿದ್ದಿದ್ದರೆ ಅದೇ

ಪ್ಲೇಟನ್ನು ಎತ್ತಿ ಅವರ ಮುಖಕ್ಕೆ ಬೀಸಿ ಬೀಡುತ್ತಿದ್ದೆ"[೫೩] ಎಂದುಕೊಳ್ಳುತ್ತ ಪ್ರತಿಭಟಿಸುವ ಹೆಣ್ಣು ಸರೋಜ ಗಂಡಿನ ದಬ್ಬಾಳಿಕೆ ದೌರ್ಜನ್ಯಗಳನ್ನರಿತಿದ್ದರಿಂದ ಅಂತಹ ಗಂಡನ್ನು ಪತಿಯಾಗಿ ಪಡೆಯುವುದನ್ನು ನಿರಾಕರಿಸುತ್ತಾಳೆ. ಕೆಳ ಜಾತಿಯವನಾದರು ಸರಿಯೇ ಹೃದಯ ವೈಶಾಲ್ಯತೆ ಇರಬೇಕಾದ ಹುಡುಗನನ್ನು ಬಯಸುವ ಮೂಲಕ ಕುಟುಂಬದವರ ಮನಃಪರಿವರ್ತಿತಳಾಗಿ ಗಮನ ಸೆಳೆಯುತ್ತಾಳೆ.

ಜಾತಿಪದ್ಧತಿಯನ್ನು ತೀವ್ರವಾಗಿ ಖಂಡಿಸುವ ಸರೋಜ ಕೀಳುಜಾತಿಯವರೆನಿಸಿದ ಕೂಸ, ರುಕ್ಕುರವರ ನಡುವೆಯೇ ಮೇಲು–ಕೀಳೆಂಬ ಅಂತರವಿರುವುದರಿಂದ ಕೂಸ ಕುಡಿದ ಕಾಫಿಲೋಟ ತೊಳೆಯಲು ರುಕ್ಕು ಹಿಂದೆ ಸರಿದಾಗ ತಾನೆ ತೊಳೆಯಲು ಮುಂದಾಗುವ ಮೂಲಕ ಜಾತಿ ವ್ಯವಸ್ಥೆಯನ್ನು ಖಂಡಿಸುವ ಪ್ರಬುದ್ಧತೆ ಕಂಡುಬರುತ್ತದೆ. ಇವಳ ವರ್ತನೆ ಸಂಪ್ರದಾಯಸ್ಥರಿಗೆ ಸಿಡಿಮಿಡಿಯಾದರು ಅವಳ ಉಪದೇಶಗಳಿಗೆ ಮಾನ್ಯತೆ ಕೊಡುತ್ತಿರುವುದು ಪಾರ್ತಕ್ಕನಾದಿಯಾಗಿ ಕಂಡುಬರುತ್ತದೆ. ಭಾಸ್ಕರನು ಕೂಸ ಜಾತಿಯ ಹೆಣ್ಣನ್ನು ಮದುವೆಯಾಗಿದ್ದರಿಂದ ಸರೋಜಾಳ ಮದುವೆಗೆ ಅಡ್ಡಿಯಾಗಿದೆ ಎಂಬ ಪಾರ್ತಕ್ಕನ ಮಾತಿಗೆ "ಇಲ್ಲಿ ಕಾಣಿ ಪಾರ್ತಕ್ಕ, ನನ್ನ ಮದುವೆ ಬಾಸ್ಕರಣ್ಣನ ದೆಸೆಯಿಂದ ಮುಂದೆ ಹೋಗಿರುವುದಾದರೆ ಹೋಗಲಿ ಅವ ಆ ರೀತಿ ಮದುವೆಯಾದದ್ದಕ್ಕೆ, ಕೊರಕೂಸಾಳುಗಳಿಗಾಗಿ ಕೆಲಸ ಮಾಡುತ್ತಿರುವುದಕ್ಕೆ ಮತ್ತು ನನ್ನ ಮದುವೆಗೆ ಗಂಟು ಹಾಕಿ ಆ ಕಾರಣದಿಂದ ನನ್ನನ್ನು ಬೇಡ ಎನ್ನುವ ಯಾವುದೇ ನಾಮರ್ದ ಗಂಡಸನ್ನು ಮದುವೆಯಾಗಲು ನಾನೂ ಇಲ್ಲಿ ರೆಡಿಯಿಲ್ಲ"[೫೪] ಎನ್ನುವಲ್ಲಿ ಹೆಣ್ಣೆಂದರೆ ಗಂಡಿಗಾಗಿ ಕಾದು ಕುಳಿತಿರುವ ಸಜೀವ ಬೊಂಬೆಯಲ್ಲ ಹೆಣ್ಣಿಗೂ ಅವಳದೇ ಆದ ಮನಸ್ಸಿದೆ ಎಂಬ ಆಶಯ ತೋರುತ್ತಾಳೆ.

ಉತ್ತಮ ಸಂಸ್ಕೃತಿಯನ್ನು ಉಳಿಸಿಬೆಳೆಸಿಕೊಂಡು ಬರುವ ಭಾರವನ್ನು ಜವಾಬ್ದಾರಿಯನ್ನು ಸಮಾಜವು ಸ್ತ್ರೀಯರ ಮೇಲೆ ಹೇರಿದೆ. ಜಿಡ್ಡುಗಟ್ಟಿದ ಸಂಪ್ರದಾಯಕ್ಕೆ ಅಲ್ಲಿನ ಸ್ತ್ರೀಯರು ಅಂಟಿಕೊಂಡವರಾಗಿದ್ದು ಪಾರ್ತಕ್ಕ, ಗೌರಮ್ಮನಂತಹವರ ಬಗ್ಗೆ ಕನಿಕರ ಹುಟ್ಟಿಸುತ್ತದೆ. ಮದುವೆ ಎಂಬ ಮಾತು ಬಂದಾಗ ಹೆಣ್ಣಿನ ಮನಸ್ಸಿಗಿಂತ ಮನೆತನ ನೊಡುವುದನ್ನು ಪುರುಷ ತತ್ವವಾದಿಯಾಗಿ ಮಾತನಾಡುವ ಪಾರ್ತಕ್ಕ, ಗೌರಮ್ಮನವರ ಮಾತುಗಳು ತಪ್ಪೆನಿಸುವುದಿಲ್ಲ. ಇದಾವುದಕ್ಕು ಸರೋಜ ತಲೆ ಕೆಡಿಸಿಕೊಳ್ಳುವುದಿಲ್ಲ. ಶಿಕ್ಷಿತರಾದ ವಾಸುದೇವರಾಯರು, ಭಾಸ್ಕರ, ಸೀನ, ಪುಟ್ಟರೆಲ್ಲರೂ ಉದಾರವಾದಿಗಳಾಗಿ ಕಾಣಸಿಗುತ್ತಾರೆ. ಸ್ತ್ರೀಸಮಾಜದ ನಡುವೆ ಸರೋಜ ಬಾಸ್ಕರಣ್ಣ ಜೈಲುವಾಸಿಯಾದಾಗ ಬಸುರಿಯಾಗಿದ್ದ ಆತನ ಹೆಂಡತಿಯನ್ನು ಮನೆಗೆ ಕರೆದುಕೊಂಡು

ಬರುವಂತಹ ಸಲಹೆ ಮೂಲಕ ಪ್ರತಿಭಟಿಸುತ್ತಾಳೆ. ಸರೋಜ ಪ್ರತಿಭಟಿಸುವ ಹಾದಿ ಸಮಾಜ ಬದಲಾವಣೆಗೆ ಪೂರಕವಾಗಿದೆ.

ನಾನಾ ರೀತಿಯ ನೆಲೆಯಲ್ಲಿ ಶೋಷಿತರಾಗುವ ಹೆಂಗೆಳೆಯರು ಪ್ರತಿಭಟಿಸುವ ಮೂಲಕ ತಮ್ಮ ಬದುಕನ್ನು ಕಟ್ಟಿಕೊಳ್ಳುವುದನ್ನು ಗೀತಾ ನಾಗಭೂಷಣರವರ 'ಬದುಕು' ಕಾದಂಬರಿಯಲ್ಲಿ ಕಾಣುತ್ತೇವೆ. ಮೇಲ್ಜಾತಿಯ ಪುರುಷರ ಅಕ್ರಮ ಚಟುವಟಿಕೆಗಳಿಗೆ ಅಧೀನರಾಗಿ ಬದುಕುತ್ತಿರುವ ಸ್ತ್ರೀಯರ ನಡುವೆ ಕಾಶಮ್ಮ, ಬೆಳ್ಳಿ, ತುಳಜಾನಂತಹವರು ಪ್ರತಿಭಟಿಸುವ ಹಾದಿ ಶೋಷಿಸುವವರ ವಿರುದ್ಧ ತಮ್ಮ ಬದುಕನ್ನು ಕಟ್ಟಿಕೊಳ್ಳುವ ಎದೆಗಾರಿಕೆ ಇವರಲ್ಲಿ ಕಂಡುಬರುತ್ತದೆ. ಹೆಣ್ಣನ್ನು ಭೋಗದ ವಸ್ತುವಾಗಿ ಪರಿಗಣಿಸುವ ಸಮಾಜದಲ್ಲಿ ಮೇಲ್ಜಾತಿಯ ಪುರುಷರು ಕೆಳಜಾತಿಯ ಹೆಣ್ಣನ್ನು ತಮ್ಮ ಕಾಮದಾಹದ ತೃಪ್ತಿಗಾಗಿ ಬಳಸಿಕೊಳ್ಳುತ್ತಿದ್ದದ್ದು ನಮ್ಮ ಸಮಾಜದ ದುಸ್ಸಂಗತಿ. ಅವಳಿಗೆ ಯಾವುದೇ ಸ್ಥಾನಮಾನ ನೀಡದೆ ಯೌವ್ವನ ಇರುವವರೆಗೂ ಕಾಶಮ್ಮ-ಲಿಂಗರಾಜರಂತಹ ನಿಜ ಪ್ರೇಮಕ್ಕೂ ಕಡಿವಾಣ ಬೀಳುತ್ತದೆ. ತಮಾಷೆಯ ಮಾತುಗಳಿಗೂ ತನ್ನತನವನ್ನು ಉಳಿಕೊಳ್ಳುವ ಗಟ್ಟಿಗಿತ್ತಿ ಕಾಶಮ್ಮ. 'ಹೆಂಡತಿ ತಂಗಿ ಅರ್ಧ ಹೆಂಡತಿ ಇದ್ದ ಹಾಗೆ' ಎಂಬ ಅಕ್ಕನ ಗಂಡನ ಮಾತಿಗೆ "ಏ, ಮಾಮಾ ನೀನಗ್ಯಾರು ಮಾಡ್ಕೋತ್ತಾರೋ? ನನಗ ವರಾಗೋಳು ಬಂದು ನಮ್ಮಪ್ಪನ ಮನಿಮುಂದ ಪಾಳಿ ಹಚ್ಚಿ ನಿಂದರತಾರ. ಹಿಂದಕ್ಕ ರಾಜಾ ಮಾರಾಜರ ಕಾಲದಾಗಿತ್ತಂತಲ್ಲ ಸೋಯವರಾನೋ ಏನೋ........ ಅದರಂಗ ನಾನೇ ಗಂಡನ ಆರಸ್ಗೋತಿನಿ ತಿಳಿತೇನು? ನಿನ್ನಂತಾ ಮುದುಕಗ, ಗೇಟಪಾಸ್ ಕುಡ್ತಿನೋ, ಮಾಮಾ........ ಏನಂತ ತಿಳ್ಕೊಂಡಿದ್ದಿ ನನಗಾ"?[೫೫] ಎಂದು ಎಲ್ಲರ ಸಮ್ಮುಖದಲ್ಲೇ ಸಿಡಿಮಿಡಿಗೊಳ್ಳುವ ಕಾಶಮ್ಮಳಲ್ಲಿ ಪ್ರತಿಭಟಿಸುವ ಕಲೆ ಮೈಗೂಡಿಸಿಕೊಂಡಿರುವುದು ತಿಳಿಯುತ್ತದೆ.

ಕೆಳಜಾತಿಯ ಹೆಣ್ಣನ್ನು ಕಾಮಿಸುವ ಮೇಲ್ವರ್ಗ ಭೋಗಿಸುವುದಕ್ಕಾಗಿಯೆ ಸೀಮಿತಗೊಳಿಸಿ ಸುಖಿಸುವವರೇ ಹೊರತು ಅವರನ್ನು ಮದುವೆಯಾಗಿ ಸಮಾಜದಲ್ಲಿ ಒಂದು ಸ್ಥಾನಮಾನ ನೀಡುವ ಗೋಜಿಗೆ ಹೋಗುತ್ತಿರಲಿಲ್ಲ. ಕಾಶಮ್ಮ-ಲಿಂಗರಾಜರ ಪ್ರೀತಿ ಜಾತಿ-ಅಂತಸ್ತನ್ನು ಮೀರಿದ್ದಾಗಿದ್ದಿತ್ತು. ಇವರಿಬ್ಬರು ಮದುವೆಯಾಗುವ ನಿರ್ಧಾರ ಇತರರಿಗೆ ಹುಸಿ ಎನಿಸುತ್ತದೆ. ಊರಿಗೆ ಊರೇ ಇವರಿಬ್ಬರ ಪ್ರೀತಿಯನ್ನು ಕೆಳರ್ಥದಲ್ಲಿ ಅರ್ಥೈಸಿದಾಗ ಮಲ್ಲವ್ವಳು "ಹಾದರಗಿತ್ತಿಗೊಯ್ದು ಊರ ಮುಂದಿನ ಹೊಳ್ಯಾಗ ಹಾಕ್ರೋ ಯಪ್ಪಾ"[೫೬] ಎಂದು ಗೋಳಿಡುತ್ತಾಳೆ. ತಾನು ಮೆಚ್ಚಿದವನನ್ನು ಮದುವೆಯಾಗುವ ದೃಢನಿರ್ಧಾರದಂತೆ "ನಾ ಯೇನು ಹಾದರಗಿತ್ತಿಯಲ್ಲ! ಲಿಂಗರಾಜಾ ನನಗೆ ಮದಿಮಾಡ್ಕೋತಿನೆಂತ ಭಾಷಾ ಕೊಟ್ಟಾನ...... ನಾವಿಬ್ಬರೂ ಮದಿ ಮಾಡ್ಕೊಂಡು ದೂರ ದೇಶಾಂತ್ರ

ಹೊರಟೋಗ್ತಿವೆಂತ ನೀವೆಲ್ಲರೂ ಇಲ್ಲಿ ಸುಕವಾಗಿರ್ರಿ"[೫೭] ಎಂದು ಮೊದಲಿಗೆ ಪ್ರತಿಭಟಿಸುತ್ತಾಳೆ. ಇವಳ ಈ ಸ್ಥೈರ್ಯ, ಧೈರ್ಯ ಬೇರೆ ಬೇರೆ ಮದುವೆಯಾಗಿದ್ದರು ಕಾಶಮ್ಮ-ಲಿಂಗರಾಜ ಒಟ್ಟಿಗೆ ಸಂಸಾರ ಪ್ರಾರಂಭಿಸುವಲ್ಲಿ ಸಾರ್ಥಕಗೊಂಡಿದೆ. ಕಾಶಮ್ಮನ ಮನದಲ್ಲಿ ಹಸಿಯಾಗಿದ್ದ ಪ್ರೇಮ ಒಬ್ಬನಿಗೆ, ದೇಹ ಒಬ್ಬನಿಗೆ ಒಪ್ಪಿಸಲು ಇಚ್ಛಿಸದೆ ಮಾರ್ತಂಡನಿಂದ ದೂರವಾಗುತ್ತಾಳೆ. ಮನೆತನದ ಮಾನ ಮರ್ಯಾದೆ ಲೆಕ್ಕಿಸದೆ ಲಿಂಗರಾಜನೊಟ್ಟಿಗೆ ಬದುಕುವ ಮೂಲಕ ತನಗೆ ಅರುಹಿದ್ದ ಸುಳ್ಳಿನ ವಿರುದ್ಧ ಪ್ರತಿಭಟಿಸುವಂತೆ ತೋರುತ್ತಾಳೆ.

ಕಾಶಮ್ಮ ಪುರುಷಪ್ರಧಾನ ವ್ಯವಸ್ಥೆಗೆ ಸವಾಲೆಸೆಯುವಂತೆ ಲಿಂಗರಾಜನೊಟ್ಟಿಗೆ ಜೀವನ ಸಾಗಿಸುವ ಮೂಲಕ ಪ್ರತಿಭಟಿಸಿದರೆ, ಬೆಳ್ಳಿ ಕಾಮುಕರ ಕಣ್ಣನ್ನು ತಪ್ಪಿಸಲು ಪ್ರತಿಭಟಿಸುತ್ತಾಳೆ. ಒಂಟಿ ಹೆಂಗಸರಿಗೆ ಆಸರೆಯ ನೆಪದಲ್ಲಿ ಸೂಳೇ ಪಟ್ಟ ಕಟ್ಟುವ ಪುರುಷರ ವಿರುದ್ಧ ಬೆಳ್ಳಿ ಪ್ರತಿಭಟಿಸುತ್ತಲೆ ತನ್ನ ದೇಹ- ಮನಸ್ಸು ಕಾಯ್ದುಕೊಳ್ಳುವುದು ಹೋರಾಟವೆ ಆಗಿರುತ್ತದೆ. ಜೈಲುವಾಸಿಯಾದ ಗಂಡ ಕಲ್ಯಾಣಿ ಇಲ್ಲದೆ ಮನೆಯ ಜೀವನ ಸಾಗಿಸುವುದು ಕಷ್ಟವಾಗಿರುತ್ತದೆ. ಬೆಳ್ಳಿ ಮೂರೊತ್ತು ದುಡಿಯದೆ ವಿಧಿ ಇರಲಿಲ್ಲ. ಬೆಳ್ಳಿಯ ಚೆಲುವಿಗೆ ಸೋತ ಇರಪಾಗಸೆಪ್ಪಗೌಡನ ಕಚ್ಚೇಹರುಕತನದ ಮಾತಿಗೆ "ಯಪ್ಪ ಗೋಡ ನೀ ನೋಡ್ದರ ನಮ್ಮಪ್ಪ ಇದ್ದಂಗಿದ್ದೀ ನಿನ್ನಂಥವನ ಬಾಯಿಲಿಂದ ಹಿಂತಾ ಮಾತು ಬರಬಾರ್ದು. ನನ್ನ ವಾರಗಿ ಮಗಳಾಳಲ್ಲ ನಿನಗ........ ತೆಗಿ ಅಕಾಡಿ ಏನು ಮಾತಂತ ಆಡ್ತಿ"[೫೮] ಎಂದು ಏಟಿಗೆ ಎದುರೇಟು ಎಂಬಂತೆ ಮೃದುವಾಗಿಯೆ ಕಡ್ಡಿ ತುಂಡಾಗುವಂತಹ ಮಾತುಗಳನ್ನಾಡುತ್ತಾಳೆ.

ಗಂಡು ದಿಕ್ಕಿಲ್ಲದ ಮನೆಯಲ್ಲಿ, ಹೆಣ್ಣಿಗೆ ಅಭದ್ರತೆ ಇರುತ್ತದೆ ಎಂದು ಹೇಳುವ ಸಮಾಜ ಆ ಅಭದ್ರತೆಗೆ ಗಂಡು ಕಾರಣಕರ್ತ ಎಂಬುದನ್ನು ಮುಚ್ಚಿ ಹಾಕುತ್ತದೆ. ಇಲ್ಲಿ ಗಂಡಿಗೆ-ಗಂಡು ಹೆದರುತ್ತಾರೆಂಬುದನ್ನು ಬಿಂಬಿಸುತ್ತದೆಯೆ ಹೊರತು ಮನುಷ್ಯತ್ವ ಕಾಣುವುದಿಲ್ಲ. ಇಂತಹವರ ವಿರುದ್ಧ ಹೆಣ್ಣು ಪ್ರತಿಭಟಿಸಿದಾಗ ಮಾತ್ರ ತಪ್ಪಿಸಿಕೊಳ್ಳಲು ಸಾಧ್ಯ ಎಂಬುದಂತು ಸತ್ಯ. ಈ ರೀತಿಯಾಗಿಯೆ ಇರಪಾಗಸಪ್ಪಗೌಡನ ಪರವಾಗಿ ಜೋಗಣಿ ಮುರುಗವ್ವ ಬೆಳ್ಳಿ ಮನಃ ಪರಿವರ್ತಿಸಲು ಮುಂದಾದಾಗ "ಥೂ ನಿನ್ನ........ಹಲ್ಕಟ್ ರಂಡೀ.... ಬಾಯಿ ಮುಚ್ಕೊಂಡೋಗಿಲ್ಲಿಂದ........... ಇಲ್ಲಂದ್ರ ನಿನಗ ಹಗ್ಗಾ ಕಟ್ಟಿ ಎಳ್ಕೊಂಡೋಯ್ದು ನಾ ನಿನಗ ಚಾವಡಿ ಮುಂದಿನ ಗಿಡಕ್ಕ ಕಟ್ಟ್ಯಾಕಿ ಪಂಚಾಯ್ತಿ ನೆರಸ್ತೀನಿ........ಆವಾಗ ಆ ನಿನ್ನ ಗೌಡನೂ ಬಂದು ಪಂಚರ ಮುಂದ ಕೈ ಕಟ್ಕೊಂಡು ಅಪರಾಧಿ ಆಗಿ ನಿಂದಿರಬೇಕಾದೆತ್ತು, ಹುಷಾರ್"[೫೯] ಎನ್ನುವಲ್ಲಿ ಹೆಣ್ಣು ಮೌನಿಯಾಗಿದ್ದರೆ, ಬದುಕು ಕಷ್ಟ. ಅದನ್ನು ಬುಡಸಮೇತ ಕೀಳಬೇಕಾದರೆ

ಪ್ರತಿಭಟಿಸಲೇಬೇಕು. ಅದಕ್ಕೆ ಬೆಳ್ಳಿ ತನ್ನ ರಕ್ಷಣೆಯನ್ನು ತಾನೇ ಮಾಡಿಕೊಂಡಿರುವುದೇ ಸಾಕ್ಷಿಯಾಗಿದೆ.

ಇರಪಾಗಸೆಪ್ಪಗೌಡನ ನಂತರ ಅನೇಕರು ಒಂಟಿ ಹೆಣ್ಣಿನ ಮೇಲೆ ಕಾಮುಕ ಕಣ್ಣು ಬೀಸಿ ತೆಕ್ಕೆಗೆ ಎಳೆದುಕೊಳ್ಳಲು ಪ್ರಯತ್ನಿಸಿದವರೆ. ಯೌವ್ವನದ ಹರೆಯವನ್ನು ಸವಿದು ಕೈಬಿಡುವ ಪುರುಷ ವರ್ಗ ಅವಳ ಹೆಸರನ್ನು ಕೆಡುಹಿ ತಾನು ಮಾತ್ರ ರಸಿಕ ಎನಿಸಿಕೊಳ್ಳುವ ಕಪಟಿಗಳು. ಅದಕ್ಕೆಂತಲೇ ಯಾವ ಅಡ್ಡಿ–ಆತಂಕಗಳಿಲ್ಲದೆ ರಾಜಾರೋಷವಾಗಿ ಹೆಣ್ಣಿನ ಶೀಲ ಕಳೆಯುವ ಕಚ್ಚೆಹರುಕರು ಇಂದಿಗೂ ಮೆರೆಯುತ್ತಿದ್ದಾರೆ.

ವಯಸ್ಸಿಗೆ ಕಾಲಿಡುವ ಕೆಳ ವರ್ಗದ ಹೆಣ್ಣು ಮಕ್ಕಳಿಗಾಗಿ ಶ್ರೀಮಂತ ಮೇಲ್ವರ್ಗದ ಪುರುಷರು ಜೋಗಣಿ ಹೆಸರಲ್ಲಿ ಸುಖಿಸುತ್ತಾರೆ. ಅವಳಿಗೆ ಇಷ್ಟವಿರಲಿ–ಇಲ್ಲದಿರಲಿ ದೇವರ ಹೆಸರಿನಲ್ಲಿ ಭಯ–ಭಕ್ತಿಯಿಂದ ಪುರುಷನ ಮಗ್ಗುಲಿಗೆ ಹಾಕುವಂಥ ಹಿರಿಯರು ಸಂಪ್ರದಾಯ–ಮೂಢನಂಬಿಕೆಗಳಲ್ಲಿ ಕಾಮತೃಷೆಯನ್ನು ನೀಗಿಸುತ್ತಾ ಕಾಲಕಳೆಯಬೇಕಾಗುತ್ತದೆ. ಇಷ್ಟವಿಲ್ಲದಿದ್ದರು ಈ ದಂಧೆಗೆ ಒಳಗಾಗುವ ಹೆಣ್ಣು ಮಕ್ಕಳು ಅರಿಯದ ವಯಸ್ಸಿನಲ್ಲಿ ಶೋಷಣೆಗೆ ಒಳಗಾಗಿ ಬುದ್ಧಿ ಬಲಿಯುವಷ್ಟರಲ್ಲಿ ಶೀಲ ಕಳೆದುಕೊಂಡು ಹೊಂದಿಕೊಳ್ಳಲೇಬೇಕಾದರೆ, ಕೆಲವರು ಕಣ್ಣೀರಿನಲ್ಲೇ ಬದುಕುತ್ತಾರೆ. ತುಳಜಾ ಎಲ್ಲ ಜೋಗಣೇರ ಪ್ರತಿಭಟನಾ ಮೂರ್ತಿಯಾಗಿದ್ದಾಳೆ. ನಿಂಬೆವ್ವನ ಮಾತುಗಳಿಂದ ಜೋಗಣಿಯಾಗಲು ನಿರಾಕರಿಸಿದರು ಬಲವಂತದಿಂದ ಆ ಪದ್ಧತಿಗೆ ಪುರುಷರ ಕೈವಾಡದಿಂದ ಒಳಗಾಗುತ್ತಾಳೆ. ಕಾಮುಕರ ಜಗತ್ತಿನಲ್ಲಿ ಸ್ತ್ರೀ ಹಿತೈಷಿಯಂತಹ ಹುಸನಪ್ಪನಂತಹವನು ಹೃದಯ ವೈಶಾಲ್ಯತೆಯಿಂದ ತುಳಜಾಳಂತ ಜೋಗಣಿಗೆ ಬಾಳು ಕೊಡುತ್ತಾನೆ. ಬಾಂಬೆಯಲ್ಲಿ ಹೊಸ ಜೀವನ ಶುರುಮಾಡಿದ್ದ ಇವರು ತಂದೆ–ತಾಯಿ ನೋಡಲು ಊರಿಗೆ ಬಂದಾಗ ಪಂಚಾಯ್ತಿ ಸೇರಿಸಿ ಅವರನ್ನು ಅವಮಾನಗೊಳಿಸುವಂತಹ ಅಮಾನವೀಯತೆ ಕಂಡುಬರುತ್ತದೆ. ಹೆಣ್ಣಾದ ಮಾತ್ರಕ್ಕೆ ಸುಮ್ಮನಿರದ ತುಳಜಾ ಅಲ್ಲಿನ ಪೂಜಾರಿ–ಶ್ರೀಮಂತರ ವಿರುದ್ಧ ಪ್ರತಿಭಟಿಸುತ್ತಾಳೆ.

'ಬೇಲಿಯೇ ಎದ್ದು ಹೊಲ ಮೇಯುವಂತೆ' ದೇವರ ಹೆಸರು ಹೇಳಿ ದೇವರು ಮೈಮೇಲೆ ಬಂದಂತೆ ಅಭಿನಯಿಸಿ, ವಯಸ್ಸಿಗೆ ಬರುವ ಹೆಣ್ಣಿನ ಗುರುತು ಹಚ್ಚಿ ಸಾವ್ಕಾರರ ಮಗ್ಗುಲಿಗೆ ಹಾಕುವ ತಲೆಹಿಡುಕ ಪೂಜಾರಿ. ಅವನನ್ನುದ್ದೇಶಿಸಿ ತುಳಜಾ "ಆ ಕುರಿಕೋಳಿ ಗೋಳೇನೋ ನೀವು ಹಾಕೊ ಕೊಡಲಿಯೇಟಿಗಿ ಒಂದೇ ಸರ್ತಿ ಕುತುಗಿ ಕತ್ತರಸ್ಕೊಂಡು ಸತ್ತು ಬೀಳ್ತಾವ! ಆದರ ನಮ್ಮ ಬಾಳ್ಯಾ ಹಾಂಗಲ್ಲ. ನಮಗ ಈ ಹಲ್ಕಟ್ ಧಂಧಾಕ್ಕೆ ಹಚ್ಚಿ ದಿನಾ ಈಟೀಟು ನೆಳ್ಳೀ ನೆಳ್ಳೀ

ಸಾಯಂಗ ಚಿತ್ತರ ಹಿಂಸಿ ಕುಡ್ತೀರಿ. ಒಮ್ಮೇ ನಮ್ದೂ ಕುತುಗಿ ಕತ್ತರಿಸಿಬಿಟ್ಟರ ಒಂದ ರೀತಿಲಿಂದ ಛಲೋ ಆಗ್ತದ....... ಮುತ್ಯಾ ಖರೆ ಹೇಳು ನೀನು ಆ ಮಾಪುರ ತಾಯಿ ನಿನ್ನ ಮೈಯಾಗ ಬಂದು ನಮ್ಮ ಕೇರ್‍ಯಾಗಿನ ಹರೇದ, ಚೆಲುವಿನ ಪೋರಿಗೋಳಿಗಿ ಸೂಳೇರು ಆಗಲಿ ಅಂತ ಹೇಳ್ತಾಳೇನು? ನೀ ಖರೇ ಅಕಿನ ಭಕ್ತ ಇದ್ದೆಂದ್ರ ಆ ದೇವಿಮ್ಯಾಲ ಅಣಿ ಮಾಡಿ ಹೇಳು ನೀನೂ"[೬೦] ಎಂಬುದಾಗಿ ಶಾಂತಿಯಿಂದಲೇ ಜನಸಮೂಹದಲ್ಲಿ ಕೇಳುವ ಪ್ರಶ್ನೆಗಳು ಹೆಣ್ಣಿನ ಮೇಲೆ ಹೇರುವ ಅಮಾನವೀಯ ಕೃತ್ಯಗಳ ವಿರುದ್ಧ ಪ್ರತಿಭಟಿಸುವಂತದಾಗಿದೆ.

ಹಲವು ಜೋಗಣೇರ ನೋವು ಹತಾಶೆ, ಜಿಗುಪ್ಸೆಗಳನ್ನು ಒಮ್ಮೆಲೆ ತುಳಜಾ ಹೊರಹಾಕುತ್ತಾಳೆ. ಜೋಗಣೇರ ಯೌವ್ವನ ಇರುವವರೆವಿಗೂ ಆಕೆಯೊಂದಿಗೆ ಸುಖಿಸುವವರು ಹರೆಯ ದಾಟಿ ವೃದ್ದಾಪ್ಯ ಸಮೀಪಿಸುವವರತ್ತ ಸುಳಿದು ಹೋಗುವುದಿಲ್ಲ. ಅವಳಿಂದ ಸುಖಾಪೇಕ್ಷಿಗಳಾಗಿರುತ್ತಾರೆಯೇ ಹೊರತು ಆನಂತರದಲ್ಲಿ ಅನುಭವಿಸುವ ಯಾತನೆಗಳಿಗೆ ಜವಾಬ್ದಾರರಾಗಿರುವುದಿಲ್ಲ. ಮಾನಸಿಕವಾಗಿ– ದೈಹಿಕವಾಗಿ ಅಸ್ವಸ್ಥರಾಗುವ ಜೋಗಣೇರು ಕೊನೆಯ ಕಾಲದಲ್ಲಿ ಪಡುವ ಯಾತನೆಯನ್ನು ಕಂಡಿದ್ದ ತುಳಜಾ "ಮುಪ್ಪಿನ ಕಾಲಕ್ಕೆ ಬ್ಯಾನಿಗೂಡಾಗಿ ಈ ಜೋಗಣೇರು ತುತ್ತು ಕೂಳಿಗಾಗಿ ಗೋಳ್ಯಾಡಮುಂದ ಯಾ ನನ್ ಹಾಟ್ಯಾನೂ ಬರಂಗಿಲ್ಲ! ಅವಾಗೇನು ಮಾಡ್ತಾಳ ನಿನ್ನ ದೇವಿ? ಏನು ಮಾಡ್ತಿ ನೀನು? ಡಾಕಟರಗಾ ಹಕೀಮಗಾ ಕರ್‍ಸಿ ಇವ್ರೀಗಿ ಇಲಾಜ ಮಾಡಸ್ತ್ಯಾ ನೀನು? ಅವರ ಹೊಟ್ಟೀಗಿ ಬಟ್ಟೀಗೆ ಕೊಟ್ಟು ಅವರಿಗೆ ಬದಕಲಕ್ಕ ಆಸರಿ ಆಗ್ತ್ಯಾ ಏನ್ಮಾಡ್ತಿ ನೀನು ಪೂಜಾರಿಯಾಗಿ?...... ದೇವಿ ಹೆಸರ ಮ್ಯಾಲ ತಲೆಹಿಡಕ್ ದಂಧಾ ಮಾಡ್ತಾನ ......ಬಂಬೈದಾಗಿನ ಸೂಳಿಗೇರ್‍ಯಾಗಿನ ದಲಾಲರಂಗ ಕುಂಟಲತನ ಮಾಡ್ತಾನ.... ನನ್ನ ಮುಂದು ನಿನ್ನ ಬಾಲಾ ಬಿಚ್ಚಬ್ಯಾಡೋ ಭೂತಾಳೀ. ನಿನ್ನ ಹುಳಿಕೆಲ್ಲಾ ಕಂಡಕ್ಕಿದ್ದೀನಿ ನಾನೂ"[೬೧] ಎಂದು ಪ್ರತಿಭಟಿಸುವಲ್ಲಿ ಈ ಪದ್ಧತಿ ವಿರುದ್ಧ ದನಿ ಎತ್ತಿದ ಮೊದಲ ಹೆಣ್ಣಾಗಿದ್ದಾಳೆ.

ಇವಳ ಪ್ರತಿಭಟನಾರೂಪದಿಂದ ಜೋಗಣೇರು ಎಚ್ಚೆತ್ತುಕೊಂಡು ಮಾಪುರತಾಯಿ ಸೇವೆಯ ಹೆಸರಲ್ಲಿ ತಮಗೆ ಸಿಗುತ್ತಿದ್ದ ಸೇವೆಗೆ ಕಡಿವಾಣ ಬೀಳಬಹುದೆಂದು ಮನಗಂಡವರು ತುಳಜಾ ಗರತಿಯಾಗಿ ಬದುಕುವುದನ್ನು ಸಹಿಸಲಿಲ್ಲ. 'ಮಗಳು ಮಾಡಿದ ತಪ್ಪಿಗೆ ನೂರಾಒಂದು ರುಪಾಯಿ ದಂಡ ಕಟ್ಟಿ ಕ್ಷಮೆಯಾಚಿಸುವಂತೆ ಇಲ್ಲದಿದ್ದರೆ ಯಾವ ಸಹಾಯವೂ ಇಲ್ಲದಂತೆ ಊರಿನ ಹೊರಗೆ ಹಾಕುವುದಾಗಿ ಬೆದರಿಕೆ ಹಾಕುತ್ತಾರೆ' ಆ ತೀರ್ಮಾನಕ್ಕೆ ತುಳಜಾ ಸೆಡ್ಡು ಹೊಡೆಯುತ್ತಾಳೆ. "ನೀವು ನಮ್ಮಪ್ಪಗೇನು ಕುಲದಲಿಂದ, ಕೇರಿಲಿಂದ ಹೊರಗಿಡ್ತೀರಿ? ನಾನೇ ನಮ್ಮಪ್ಪಾ ಅವ್ವಗ ಈ ಊರುಕೇರಿಲಿಂದ ದೂರ ಮಾಡಿ ನನ್ನ್ ಜೋಡಿ ಕರ್‍ಕೊಂಡು ಹೋಗ್ತೀನಿ........ ನಿಮಗಾ ನಿಮ್ಮ

ನ್ಯಾಯಕ್ಕಾ ದೊಡ್ಡ ನಮಸಗಾರ್‍್ರೀ ಯಪ್ಪಾ"[೬೭] ಎಂದು ಪುರುಷಷಾಹಿ ಪಂಚಾಯ್ತಿ ವಿರುದ್ಧ ಕಿಡಿಕಾರುತ್ತ ತಂದೆ–ತಾಯಿಗೆ ಆಸರೆಯಾಗಿ, ಗಂಡನಿಗೆ ಗರತಿಯಾಗಿ ಬಾಳುವ ನಿರ್ಧಾರದೊಂದಿಗೆ ಹೊರ ನಡೆಯುತ್ತಾಳೆ. ಹೆಣ್ಣು ಮೌನಿಯಾದಷ್ಟು ಪುರುಷಪರವಾದ ಆಲೋಚನೆಗಳನ್ನು ಅವಳ ಮೇಲೆ ಸಮಾಜ ಹೇರುತ್ತದೆ. ಅದರ ಅರಿವು ಬರುತ್ತಿದ್ದಂತೆ ಅದನ್ನು ಬೇರು ಸಹಿತ ತೆಗೆಯುವ ಪ್ರಯತ್ನ ಮಾಡಬೇಕು, ಆದಾಗ್ಯೂ ಸಾಧ್ಯವಿಲ್ಲವಾದಾಗ ಆ ಸ್ಥಳದಿಂದ ಹೊರನಡೆದರೆ ಹಿಂದಿನವರಿಗೆ ಮಾರ್ಗವಾಗಿ ಆಚರಣೆಗಳನ್ನು ಬುಡಮೇಲು ಮಾಡುವಂತೆ ತುಳಜಾ ಪ್ರತಿಭಟನೆ ಕಂಡುಬಂದಿದೆ.

ಕಾಶಮ್ಮ ಮೆಚ್ಚಿದವನೊಂದಿಗೆ ಸಂಸಾರ ಹೂಡಿದರೆ, ಬೆಳ್ಳಿ ತನ್ನ ರಕ್ಷಣೆ ಮಾಡಿಕೊಳ್ಳುತ್ತಾಳೆ. ತುಳಜಾ ಕುರುಡು ಪಂಚಾಯ್ತಿ ತೀರ್ಮಾನಗಳಿಂದ ಊರ ಹೊರಗೆ ನಡೆಯುವಲ್ಲಿ ಮೂವರಲ್ಲಿಯೂ ಪ್ರತಿಭಟಿಸುವ ನೆಲೆ ಸಾಕ್ಷಾತ್ಕಾರಗೊಂಡಿದೆ. ಹೆಣ್ಣಿನ ದೇಹ ಗಂಡಿನ ಸ್ವತ್ತಲ್ಲ. ಅದನ್ನು ಕಾಪಾಡಿಕೊಳ್ಳುವ ತೀವ್ರತೆಯಲ್ಲಿ ಪ್ರತಿಭಟಿಸುವಿಕೆಯಿಂದ ತನ್ನ ಮೇಲಿನ ಹಕ್ಕನ್ನು ಸಾಬೀತು ಪಡಿಸಿದ್ದಾರೆ. ಇಂತಹವರ ಸಾಲಿಗೆ ಸೇರುವ ನಾದಿರಾ ತನ್ನ ದೇಹವನ್ನು ಮತ್ತೊಬ್ಬನಿಗೆ ಒಪ್ಪಿಸುವಲ್ಲಿ ಬೆಳ್ಳಿ, ತುಳಜಾಳಂತೆ ಧೈರ್ಯವಿಲ್ಲದಿದ್ದರು ಸಾವಿನ ಮೂಲಕ ಧರ್ಮದ ವಿರುದ್ಧ ಪ್ರತಿಭಟಿಸುವುದನ್ನು ಸಾರಾ ಅಬೂಬಕ್ಕರ್‌ರವರ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯಲ್ಲಿ ಅಭಿವ್ಯಕ್ತವಾಗಿದೆ. ಮುಸ್ಲಿಂ ಜನಾಂಗದ ಸಂಪ್ರದಾಯಬದ್ಧ ಕುಟುಂಬದಲ್ಲಿ ಪುರುಷತ್ವ ಅಧಿಕಾರ ಎದ್ದು ಕಾಣುತ್ತದೆ. ಮನೆಯ ಹಿರಿಯ ತಪ್ಪು ನಿರ್ಧಾರ ತೆಗೆದುಕೊಂಡರು ಕುಟುಂಬದ ಸ್ತ್ರೀಯರು ತಮಗಿಷ್ಟವಿದ್ದರು, ಇಲ್ಲದಿದ್ದರು ಪ್ರತಿಭಟಿಸುವಂತಿರಲಿಲ್ಲ. ಎಲ್ಲರೂ ಅವನ ನಿರ್ಧಾರಕ್ಕೆ ಬದ್ಧರಾಗಿಯೇ ಇರಬೇಕಾದಂತಹ ಸಂಪ್ರದಾಯದಲ್ಲಿರುತ್ತಾರೆ. ನಾದಿರಾ ತನ್ನ ತಂದೆಯ ಕಪಟತನದಿಂದ ಗಂಡನಿಂದ ದೂರವಾದಾಗ, ಮಗುವಿನಿಂದ ದೂರವಾದಾಗ ಕಣ್ಣೀರು ಮಿಡಿಯುವುದನ್ನು ಬಿಟ್ಟರೆ ತಂದೆಯೊಂದಿಗೆ ಯಾವ ಮಾತುಗಳನ್ನು ಆಡದೆ ಮೂಕಳಾಗಿಯೇ ಇರುತ್ತಾಳೆ. ಮಗಳ ಸಂಕಟ ಕಂಡರೂ ಫಾತಿಮಾ ಪತಿ ವಿರುದ್ಧ ಮಾತನಾಡುವ ಧೈರ್ಯ ತೋರುವುದಿಲ್ಲ. ಮುಸ್ಲಿಂ ಜನಾಂಗ ಧರ್ಮದ ಹೆಸರಿನಲ್ಲಿ ಸ್ತ್ರೀಯರ ಬಾಯನ್ನು ಕಟ್ಟಿಹಾಕುತ್ತದೆ.

ಧರ್ಮ ಯಾವುದಾದರೂ ಹೆಣ್ಣಿನ ಮನಸ್ಸು ಒಂದೇ ಆಗಿರುತ್ತದೆ. ನಾದಿರಾಳ ಯಾವುದೇ ತಪ್ಪಿಲ್ಲದೆ ಖಾನ್ ಪಡೆದ ತಲಾಖ್‌ನಿಂದ ಸಂಬಂಧ ಕಡಿದುಕೊಂಡಾಗ ಗಂಡನ ಮೇಲಿನ ಪ್ರೀತಿಯನ್ನು ಕಡಿದುಕೊಳ್ಳಲು ನಾದಿರಾಗೆ ಅಷ್ಟು ಸುಲಭವಾಗಿರಲಿಲ್ಲ. ಆ ವೇಳೆಯಲ್ಲಿಯೆ ತಂದೆ ವಯಸ್ಸಿನ ಶ್ರೀಮಂತ 'ಸಲೀಂ'ನನ್ನು ನಿಖಾಹ್ ಮಾಡಿಕೊಳ್ಳುವುದಾಗಿ ಮಹಮ್ಮದ್‌ಖಾನ್ ಪ್ರಸ್ತಾಪ

ಪಡಿಸಿದಾಗ "ಅಬ್ಬಾ!" ಎಂದು ತಂದೆಯಂತೆ ಗರ್ಜಿಸುವ ಮೂಲಕ ಮೊದಲ ಬಾರಿಗೆ ಮೌನ ಒಡೆದು ಪ್ರತಿಭಟಿಸುತ್ತಾಳೆ. ಮತ್ತೊಂದು ಮದುವೆಯಾಗುವುದಿಲ್ಲವೆಂಬುದನ್ನು ಸಾರಿ ಹೇಳುವಂತೆ ಪ್ರತಿಭಟಿಸುತ್ತಾಳೆ. ಸಲೀಂ ಮನೆಯಿಂದ ಬರುತ್ತಿದ್ದ ಹಣ್ಣುಗಳನ್ನು ತಿಂಡಿಗಳನ್ನು ಕಡೆಗಣ್ಣಿನಿಂದಲೂ ನೋಡದ ನಾದಿರಾ 'ಅಮ್ಮನಿಗೆ "ಇದೇ ರೀತಿ ಅವರು ಕಳಿಸುವುದನೆಲ್ಲಾ ನೀವು ಎತ್ತಿಟ್ಟುಕೊಂಡರೆ ನಾನು ಚಂದ್ರಗಿರಿಯ ಆಶ್ರಯ ಪಡೆಯುತ್ತೇನೆ!"[೬೩] ಎಂದೂ ಪ್ರತಿಭಟಿಸುವ ಮೂಲಕ ತಂದೆಗೆ ತಪ್ಪಿನ ಅರಿವು ಮೂಡಿಸುತ್ತಾಳೆ.

ಪುರುಷಪ್ರಧಾನ ವ್ಯವಸ್ಥೆಯು ಹೆಣ್ಣನ್ನು ಭೋಗಿಸಲು ಸುಲಭ ಮಾರ್ಗಗಳನ್ನು ಕಂಡುಕೊಂಡು ಧರ್ಮದ ಕಟ್ಟುಪಾಡುಗಳನ್ನು ವಿಧಿಸಿ ಅವನ್ನು ಆಟದ ವಸ್ತುವಾಗಿ ಮಾಡಿಕೊಳ್ಳುವುದು ಎಲ್ಲಾ ಧರ್ಮದಲ್ಲೂ ಸಾಮಾನ್ಯವಾಗಿಯೇ ಇದೆ. ತಲಾಖ್ ಕೊಟ್ಟ ಗಂಡನನ್ನೇ ಮತ್ತೊಮ್ಮೆ ನಿಖಾಹ್ ಆಗಲು ಬೇರೊಬ್ಬನನ್ನು ಒಂದು ರಾತ್ರಿಯ ವಿವಾಹವಾಗಿ ಆತನೊಂದಿಗೆ ಒಂದು ರಾತ್ರಿ ಕಳೆದು ತಲಾಖ್ ಪಡೆದು ಮೊದಲ ಗಂಡನನ್ನು ಸೇರುವ ಸಂಪ್ರದಾಯ ಕುರಿತು ನಾದಿರಾ ಮನದೊಳಗೆ ಧರ್ಮದ ವಿರುದ್ಧ ಪ್ರತಿಭಟಿಸುತ್ತಾಳೆ. "ಒಂದು ಹೊತ್ತು ತನ್ನ ದೇಹವನ್ನು ಇನ್ನೊಬ್ಬನಿಗೆ ಒಪ್ಪಿಸಲು ತಾನೇನು ದನವೇ ಹೃದಯ, ಭಾವನೆಗಳೊಂದೂ ಇಲ್ಲದ ಮೃಗ ತಾನು ಎನ್ನುವಂತೆ ಇವರು ವರ್ತಿಸುತ್ತಾರಲ್ಲ?"[೬೪] ಎಂದುಕೊಂಡು ಯಾವ ಹೆಣ್ಣು ಒಂದು ರಾತ್ರಿಯ ಮಟ್ಟಿಗೆ ತನ್ನ ದೇಹನ್ನೊಪ್ಪಿಸಲು ಇಚ್ಛಿಸದಂತಹ ಕಠೋರ ಶಿಕ್ಷೆಯಿಂದ ಸಾವಿನ ಬೆನ್ನು ತಟ್ಟುವ ಮೂಲಕ ಮೌನ ಪ್ರತಿಭಟನೆ ಪುರುಷಪ್ರಧಾನ ಸಮಾಜದ ಧರ್ಮಕ್ಕೆ ನ್ಯಾಯ ಕೇಳುವಂತದ್ದಾಗಿದೆ.

ನಾದಿರಾಳನ್ನು ಗಂಡನಿಂದ ದೂರಮಾಡಿ ಸ್ವಾರ್ಥಕ್ಕಾಗಿ ಮನೆಯಲ್ಲಿ ತಂದಿಟ್ಟುಕೊಂಡಾಗಲೆ ತಂದೆಯ ವಿರುದ್ಧ ಪ್ರತಿಭಟಿಸಿದ್ದರೆ ಬೇರೊಂದು ಮಾರ್ಗದಲ್ಲಿ ಅವಳ ಜೀವನ ಸಾಗುತ್ತಿತ್ತೇನೊ ಎಂಬ ಭಾವನೆ ಸಹೃದಯರಲ್ಲಿ ಮೂಡುತ್ತದೆ. ಧರ್ಮದ ಬಂಧನದಲ್ಲಿ ಸಿಲುಕಿದ್ದ ಸ್ತ್ರೀಯರು ಯಾವುದೇ ಪ್ರತಿಮಾತಾಡದೆ, ಬಂದಿದ್ದನ್ನು ಅನುಭವಿಸುತ್ತಿರುತ್ತಾರೆ. ನಾದಿರಾ ಗಂಡನನ್ನು ಬಿಟ್ಟಿರಲಾರದೆ ಕುರೂಪಿ ವ್ಯಕ್ತಿಗೆ ತನ್ನ ದೇಹವನ್ನು ಅರ್ಪಿಸಿ ಧರ್ಮದ ಮಾರ್ಗದಲ್ಲಿಯೇ ನಡೆದರೆ ಹೆಣ್ಣಿಗೆ ಹೃದಯ ಇಲ್ಲವೆ? ಅವಳ ಅಭಿವ್ಯಕ್ತಿಗೆ ಬೆಲೆ ಇಲ್ಲವೆ ಇಂತಹವುಗಳ ಒಳಸೂಚನೆ ನಾದಿರಾಳ ಸಾವು ಸೂಚಿಸುತ್ತದೆ. ಸಾವಿನ ಮೂಲಕ ಧರ್ಮದ ಬಂಧನದಿಂದ ಬಿಡುಗಡೆ ಪಡೆಯುತ್ತಾಳೆ.

ಎಂ.ಕೆ.ಇಂದಿರಾವರ ಫಣಿಯಮ್ಮ ಕಾದಂಬರಿಯಲ್ಲಿ ಬಾಲವಿಧವೆಯರ ಕಂಬನಿ, ಸಂಕಟ, ನೋವು ಬಿತ್ತರಗೊಂಡಿದೆ. ಏನೂ ಅರಿಯದ ವಯಸ್ಸಿನಲ್ಲಿ ಮದುವೆಯಾಗಿ ವಿಧವೆಯಾದರೆ

‘ಮಡಿ’ ಪದ್ದತಿಗೆ ಒಳಗಾಗಿ ಜೀವನಪರ್ಯಂತ ತನ್ನ ಆಯಸ್ಸನ್ನು ಕಳೆಯುವ ವಿಧವೆಯರ ಸ್ಥಿತಿ ಗಂಭೀರ. ಫಣಿಯಮ್ಮ ಕಾದಂಬರಿ ಒಳ ಬಂಡಾಯದ ಸೂಚ್ಯ. ಕಾದಂಬರಿಯ ನಾಯಕಿ ಬಾಲವಿಧವೆಯಾದ ಫಣಿಯಮ್ಮಳನ್ನು ಮಡಿಮಾಡಿಸಿ ಬೋಳುತಲೆ ಹೊದ್ದು ಕೂರಿಸಿದಾಗ ಅದೇ ಜೀವನಕ್ಕೆ ಒಗ್ಗಿಕೊಂಡು ಕಟ್ಟಾ ಸಂಪ್ರದಾಯಸ್ಥೆಯಾಗುತ್ತಾಳೆ. ಸಂಬಂಧಿಕರ ಬಸುರಿ–ಬಾಣಂತನ ಆರೈಕೆ ಮಾಡಿಕೊಂಡು ಕಾಲ ಕಳೆಯುತ್ತಾ ಬದುಕುವುದರಲ್ಲೇ ತೃಪ್ತಿಕಾಣುತ್ತಾಳೆ. ಫಣಿಯಮ್ಮ ಸಂಪ್ರದಾಯ ಮೂರ್ತಿಯಾದರೆ, ಇವಳ ಪ್ರತಿರೂಪವೆಂಬಂತೆ ದಾಕ್ಷಾಯಿಣಿ ಪ್ರತಿಭಟನಾ ಮೂರ್ತಿಯಾಗಿದ್ದಾಳೆ.

ಸಮಾಜ ಬದಲಾದಂತೆ ಹೆಣ್ಣಿನ ಭಾವನೆಗಳು ಬದಲಾಗತೊಡಗಿದವು. ಆಕೆಯ ಭಾವನೆಗಳಿಗೆ ಮಾತ್ರ ಸ್ಪಂದಿಸುವವರಿಲ್ಲ. ಸಂಪ್ರದಾಯದ ಹೆಸರಿನಲ್ಲಿ ವಿಧವೆಯಾದವಳಿಗೆ ಮಡಿ ಮಾಡಿ ಅವಳ ಭಾವನೆಗಳನ್ನು ಸುಟ್ಟು ಬದುಕುವಂತಹ ಶಿಕ್ಷೆಗೆ ಆಕೆಯನ್ನು ದೂಡುತ್ತಿದ್ದರು. ಅತ್ತೆ ಮನೆಸೇರಿ ತಲೆಬೋಳಿಸಿಕೊಂಡು ಹೊರಗಿನವರ ಕಣ್ಣಿಗೆ ಬೀಳದೆ ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ತಲ್ಲೀನ ಆಗುವುದು ಒಂದು ರೀತಿಯಲ್ಲಿ ಜೈಲುವಾಸವಾಗಿತ್ತು. ಇಂತಹ ಪದ್ಧತಿಗೆ ತಾನು ಒಳಗಾಗುವುದಿಲ್ಲವೆಂದು ವಿಧವೆಯಾದ ದಾಕ್ಷಾಯಿಣಿ ಪ್ರತಿಭಟಿಸುತ್ತಾಳೆ. “ನಾನಂತೂ ಮಡಿ ಮಾಡಿಸ್ಕಳ್ಳೂದಿಲ್ಲ. ಹಾಂಗೆ ಬಲವಂತ ಮಾಡಿ ಮಾಡಿದ್ರೂ ನಾನು ಅವರ ಮನಿಗೆ ಹೋಗೂದಿಲ್ಲ. ಗಂಡಿಲ್ಲದ ಮ್ಯಾಲೆ ನಂಗೇನ್ಕೆಲಸ? ಅವರ ಮನೇಲಿ ಅವರ ಮನೆ ಚಾಕ್ರಿ ಬಡಿಯೂದಕನು ನಾನೂ ಹುಟ್ಟಿರೂದು? ನಾ ಇಲ್ಲೇ ಇರ್ತನಿ”[೬೫] ಎಂದು ಕಣ್ಣೀರು ಮಿಡಿದರು ಹದಿನಾರನೇ ವಯಸ್ಸಿನ ಬಾಲವಿಧವೆಯಾದ ದಾಕ್ಷಾಯಿಣಿಯನ್ನು ಬಲವಂತದಿಂದ ಮಡಿ ಮಾಡಿಸುವುದರಿಂದ ಹರೆಯದ ಹೆಣ್ಣಿನ ಗೋಳು ಹೆಚ್ಚಾಗುತ್ತದೆ.

ಫಣಿಯಮ್ಮ ವಿಧವೆಯಾದವರು ಮಡಿ ಜೀವನಕ್ಕೆ ಹೊಂದಿಕೊಳ್ಳಬೇಕು ಎಂದುಕೊಂಡು ಸ್ವೀಕರಿಸಿದರೆ ಮೂರು ತಲೆಮಾರಿನ ನಂತರದ ದಾಕ್ಷಾಯಿಣಿ ಮಡಿ ವಿರುದ್ಧ ಪ್ರತಿಭಟಿಸುತ್ತಾಳೆ. ಬಯಸದೆ ಜರುಗುವ ಗಂಡನ ಮರಣದಿಂದ ಬದುಕಿದ್ದೂ ಸಾಯುವ ವಿಧವೆಯರು ದೈಹಿಕವಾಗಿ, ಮಾನಸಿಕವಾಗಿ ಜರ್ಜರಿತವಾಗಬೇಕಾದಂತಹ ದಂಡನೆಗೆ ಸಮಾಜ ಹೆಣ್ಣನ್ನು ಗುರಿಮಾಡಿದೆ. ಸಾಮಾನ್ಯ ಸ್ತ್ರೀಯರಂತೆ ಬದುಕುವ ಅವಕಾಶವಿಲ್ಲದ್ದರಿಂದ ಊಟ–ಉಪಚಾರಗಳಿಂದ ಮಂತ್ರ–ಘೋಷಗಳವರೆಗೂ ನಿಯಮಬದ್ಧವಾಗಿ ಬದುಕಬೇಕಿದ್ದರಿಂದ ದಾಕ್ಷಾಯಿಣಿ ಪ್ರತಿಭಟಿಸುತ್ತಾಳೆ. ತನ್ನಿಂದ ಉಪವಾಸ ಮಾಡಲಾಗಲು ಸಾಧ್ಯವಿಲ್ಲ ಎಂಬ ಕಾರಣ ಅವಳ ಮುಗ್ಧತೆಯನ್ನು ತೋರಿಸುತ್ತದೆ.

ಮಡಿ ಮಾಡಿಸಿಕೊಳ್ಳುವುದಿಲ್ಲವೆಂಬ ದಾಕ್ಷಾಯಿಣಿ ಪ್ರತಿಭಟನೆಗೆ ಸ್ವರ್ಗ–ನರಕ, ಪಾಪ–ಪುಣ್ಯ, ಪುನರ್ಜನ್ಮದ ಬೋಧನೆಗಳಿಂದ ಮನದಲ್ಲಿ ಯಾವುದೋ ದೃಢ ನಿಶ್ಚಯ ಮಾಡಿಕೊಂಡಂತೆ ತಲೆಬೋಳಿಸಿಕೊಳ್ಳಲು ನಿರ್ಧರಿಸುತ್ತಾಳೆ. ಇಷ್ಟವಿಲ್ಲದ ವಿಧವೆಗೆ ಮಡಿ ಮಾಡುವುದಕ್ಕಿಂತ ಸುಮ್ಮನಿರುವುದು ಲೇಸೆಂಬ ಅರಿವು ಜನರಲ್ಲಿ ಮೂಡುವಂತೆ ಯಾವ ಹೆಣ್ಣು ಮಾಡದಂತಹ ಕಾರ್ಯವನ್ನು ದಾಕ್ಷಾಯಿಣಿ ಮಾಡುತ್ತಾಳೆ. ಎರಡು ವರ್ಷದಲ್ಲಿಯೇ ಮೈದುನನಿಂದ ಬಸಿರಾಗಿ ಗಂಡುಮಗುವಿನ ತಾಯಾಗಿ ಅತ್ತೆಯೇ ಆರೈಕೆ ಮಾಡುವಂತೆ ಪ್ರತಿಭಟಿಸುತ್ತಾಳೆ. "ನಿಮ್ಮ ಮಗನೇ ಬಸಿರು ತುಂಬಿದವರು. ನಾ ಯಾಕೆ ತೌರಿಗೆ ಹೋಗ್ಲಿ? ನೀವೇ ಬಾಣಂತನ ಮಾಡಿ. ಆ ಮಗನ ಬದ್ಲಿಗೆ ಈ ಮಗ ಅಷ್ಟೇ ಸೈಯಲ್ಲ"[೬೬] ಎಂದು ದೃಢವಾಗಿ ಹೇಳುತ್ತಾಳೆ. 'ಮಡಿ' ಪದ್ಧತಿಗೆ ಒಳಗಾದ ಹೆಣ್ಣು ತಾಯಿಯಾಗುವ ಮೂಲಕ ದಾಕ್ಷಾಯಿಣಿಯ ಪ್ರತಿಭಟನೆ ತನ್ನ ಅಸ್ತಿತ್ವವನ್ನು ಭದ್ರಗೊಳಿಸುವುದಾಗಿದೆ.

ವಿಧವೆ ಸ್ತ್ರೀಯರನ್ನು ಸಮಾನವಾಗಿ ಕಾಣುವ ಪರಿಸರಬೇಕು. ಹೆಣ್ಣು ತಾಯಿಯಾಗುವುದನ್ನು ಸಹಿಸದ ಸಮಾಜ ವಿಧವೆ ಹೆಣ್ಣಿನ ಭಾವನೆಗಳನ್ನು ಅರಿಯದೆ ಬಹಿಷ್ಕಾರ ಹಾಕಲು ಮುಂದಾದಾಗ ದಾಕ್ಷಾಯಿಣಿ ಮನುಷ್ಯ ಧರ್ಮದಿಂದ ಪ್ರತಿಭಟಿಸುತ್ತಾಳೆ. "ಹ್ಯಾಂಗ ಬಹಿಷ್ಕಾರ ಹಾಕ್ತಾರೋ ನಾ ನೋಡ್ತನಿ. ಕಡೀಗೂ ಬಹಿಷ್ಕಾರ ಹಾಕಿದ್ರೆ ನಿಮ್ಮನೆಲ್ಲ ಮನಿಯಿಂದ ಅಟ್ಟಿ ನಾನೊಬ್ಳೇ ಇರ್ತನಿ ಏನ್ಮಾಡ್ತೀರ? ಇನ್ನೂ ನೀವು ಮಿತಿಮೀರಿದ್ರೆ ಹೊಲೇರ್ನೆಲ್ಲ ಮನೆ ಒಳಗೆ ಕರಕಂಡು ಬರ್ತನಿ, ಗೊತ್ತಾ"[೬೭] ಎಂಬ ಮಾತಿಗೆ ಕೆಲವರು ಹುಚ್ಚು, ದೆವ್ವ, ಭೂತ ಎಂದೆಲ್ಲಾ ಮಾತನಾಡಿದರು, ಹರೆಯದ ಹೆಣ್ಣಿನ ಭಾವನೆ, ಅವಳ ಆಂತರ್ಯವನ್ನು ಅರ್ಥಮಾಡಿಕೊಂಡಿದ್ದ ಹಿರಿಯರಾದ ಕಿಟ್ಟಪ್ಪ (ಫಣಿಅಣ್ಣ)ನಂತಹವರು 'ಹುಡುಗಿ ಭಲೋ ಕೆಲಸ ಮಾಡಿದ್ಲು'. ಬದಲಾವಣೆಯನ್ನು ಒಪ್ಪಿಕೊಳ್ಳುವುದರಲ್ಲಿ ದಾಕ್ಷಾಯಿಣಿಯ ಪ್ರತಿಭಟನೆ ಸಾರ್ಥಕಗೊಂಡಿದೆ.

ಶಿಕ್ಷಣದ ಅರಿವು ಎಲ್ಲಾ ಮಾನವರಿಗೂ ತುರ್ತು ಅಗತ್ಯ ಎಂಬ ಸಂದೇಶ ಈ ಕಾದಂಬರಿಗಳ ಅಧ್ಯಯನದಿಂದ ತಿಳಿಯುತ್ತದೆ. ಸ್ತ್ರೀ ಸಾಮಾಜಿಕ ನಿಲುವಿನಲ್ಲಿ ತನ್ನ ಅರಿವಿನಿಂದ ಬೆಳಕಿನತ್ತ ಸಾಗಿ ಒಂದು ಸದೃಢವಾದ ಸಮಾಜ ನಿರ್ಮಿಸಿ ಆಕೆಯ ಅಸ್ತಿತ್ವ ಪಡೆದುಕೊಳ್ಳುವ ಸ್ಥಿತಿಗಳು, ಈ ಅಧ್ಯಯನದಲ್ಲಿ ನಿರೂಪಿಸಿರುವ ಕಾದಂಬರಿ ಪಾತ್ರಗಳ ಮೂಲಕ ತಿಳಿದುಬರುತ್ತದೆ. ಶಿಕ್ಷಣಕ್ಕೆ ಅಂಥ ಶಕ್ತಿಯಿದೆ ಎಂಬ ಅಂಶ ವೇದ್ಯವಾಗುತ್ತದೆ.

ಶಿಕ್ಷಣ ಮಾನವನ ಜೀವನಕ್ಕೆ ಅಡಿಪಾಯವಾದರೆ, ಉದ್ಯೋಗ ಜೀವನದ ಮಾರ್ಗವಾಗಿದೆ. ಶಿಕ್ಷಣ ವಿವೇಕವನ್ನು ಹೇಳಿಕೊಟ್ಟರೆ, ಉದ್ಯೋಗ ಸ್ವಾವಲಂಬಿತನವನ್ನು, ಪ್ರತಿಭಟನೆ ಅಸ್ತಿತ್ವವನ್ನು

ಸ್ಥಾಪಿಸಲು ಪೂರಕವಾಗಿವೆ. ಇವುಗಳ ಸದ್ಬಳಕೆ ಪಡೆದವರು ಸಂಪೂರ್ಣವಾಗಿ ಸ್ತ್ರೀತನವನ್ನು ಸ್ಥಾಪಿಸಿದರೆ. ಸಾಮಾಜಿಕ ಕಾದಂಬರಿಗಳಲ್ಲಿನ ಸ್ತ್ರೀ ಪಾತ್ರಗಳಲ್ಲಿ ಆಧುನಿಕ ಕಾಲದವರ ನಡುವೆ ಸಂಪ್ರದಾಯಸ್ಥ ಸ್ತ್ರೀಪಾತ್ರಗಳು, ಪೌರಾಣಿಕ ಕಾದಂಬರಿಗಳಲ್ಲಿ ಸ್ತ್ರೀಪಾತ್ರಗಳು ಇವೆ ಎಂದರೆ ಅಲ್ಲಿ ಸ್ತ್ರೀಯರ ಸ್ವಸಾಮರ್ಥ್ಯ ಬಿಂಬಿತವಾಗಿದೆ. ಈ ಕಾದಂಬರಿಗಳಲ್ಲಿ ಕೆಲವರಿಗೆ 'ಜಬಾಲಾ' ಕಾದಂಬರಿಯ ಗೀತಾ, 'ಗಂಡಸರು' ಕಾದಂಬರಿಯ ಶಾಂತಿ ಇವರಿಗೆ ಶಿಕ್ಷಣ ಸುಲಭವಾಗಿ ದಕ್ಕಿದರ ಫಲವಾಗಿ ಸ್ತ್ರೀತನವನ್ನು ಸ್ಥಾಪಿಸಲು ನೆರವಾದರೆ ಉಳಿದಂತೆ ಸಂಪ್ರದಾಯಸ್ಥ ಕುಟುಂಬದಲ್ಲಿನ, ಪೌರಾಣಿಕ ಕಾದಂಬರಿಗಳಲ್ಲಿನ ಸ್ತ್ರೀಪಾತ್ರಗಳು ಜೀವನಾನುಭವವನ್ನೆ ಶಿಕ್ಷಣವನ್ನಾಗಿ ಮಾಡಿಕೊಂಡು ಪ್ರತಿಭಟಿಸುತ್ತಲೆ ಅನ್ಯಾಯದ ಅರಿವು ಮೂಡಿಸುತ್ತ ಸ್ತ್ರೀತನವನ್ನು ಸ್ಥಾಪಿಸಿದ್ದಾರೆ. (ಫಣಿಯಮ್ಮ, ಪೌರಾಣಿಕ ಕಾದಂಬರಿಗಳ ಎಲ್ಲಾ ನಾಯಕಿಯರು) ಇದರ ಒಳ ತಿರುಳು ಸ್ತ್ರೀಯರಿಗೆ ಬದುಕಲು ಶಿಕ್ಷಣ, ಉದ್ಯೋಗ, ಪ್ರತಿಭಟಿಸುವಿಕೆ ಮೂರೂ ಅಗತ್ಯವೆನಿಸಿದರು, ದಕ್ಕದಿರುವಾಗ ಹೆಣ್ಣು ಬಂದನದಿಂದ ಹೊರಬರಲು ಇವುಗಳಲ್ಲಿ ಒಂದು ನೆಲೆಯನ್ನು ಗಟ್ಟಿಗೊಳಿಸಿಕೊಂಡರೂ ತನ್ನತನ ರೂಪಿಸಿಕೊಳ್ಳುತ್ತಾಳೆ ಎಂಬ ಅಂಶ ಈ ಅಧ್ಯಾಯದಿಂದ ವೇದ್ಯವಾಗುತ್ತದೆ.

## ಕೊನೆಟಿಪ್ಪಣಿಗಳು

೧. ಎಂ.ಎಸ್.ವೇದಾ, ಆರ್ದ್ರಗರ್ವದ ಹುಡುಗಿ, ಪು. ೧೫೫

೨. ಎಂ.ಎಸ್.ಆಶಾದೇವಿ, ಬಿಡುಗಡೆಯೆಂಬುದುಂಟೇ ಹೇಳಾ ಕೆಳದಿ, ಪ್ರಜಾವಾಣಿ ದಿನಪತ್ರಿಕೆ, ಸಾಪ್ತಾಹಿಕ ಪುರವಣಿ, ೨/೩/೨೦೧೪, ಪು. ೩

೩. ಹೇಮಲತಾ ಎಚ್.ಎಂ. ಮಹಿಳಾ ಅಧ್ಯಯನ–೬, ಪು. ೯

೪. ಜ್ಯೋತಿ ಶಶಿಕುಮಾರ್, ಮಹಿಳಾ ಸಾಮಾಜಿಕತೆ, ಪು. ೮೪

೫. ಸ.ಉಷಾ, ಕಸೂತಿ, ಪು. ೭೨

೬. ಅದೇ, ಪು. ೪೦

೭. ಅದೇ ಪುಟ ಕಸೂತಿಗೊಂದು ಹೊಲಿಗೆ

೮. ತಿವೇಣಿ, ಹಣ್ಣೆಲೆ ಚಿಗುರಿದಾಗ, ಪು. ೬೧

೯. ಅದೇ, ಪು. ೧೦೭

೧೦. ಅದೇ, ಪು. ೧೦೭–೧೦೮

೧೧. ಅದೇ, ಪು. ೧೧೧

೧೨. ಅದೇ, ಪು. ೧೭೯

೧೩. ಎಚ್.ಎಸ್.ಪಾರ್ವತಿ, ಜಬಾಲಾ, ಪು. ೩೬

೧೪. ಅದೇ, ಪು. ೩೭

೧೫. ಬಿ.ಟಿ.ಲಲಿತಾ ನಾಯಕ್, ನೆಲೆ–ಬೆಲೆ, ಪು. ೭೧

೧೬. ಅದೇ, ಪು. ೮೦

೧೭. ಎಂ.ಎಸ್.ವೇದಾ, ಆರ್ದ್ರಗರ್ವದ ಹುಡುಗಿ, ಪು. ೧೦೧

೧೮. ವೈದೇಹಿ, ಅಸ್ಪೃಶ್ಯರು, ಪು. ೪೦

೧೯. ಸಬಿಹಾ ಭೂಮಿಗೌಡ (ಸಂ), ಪ್ರತಿರೋಧದನೆಲೆಗಳು, ಪು. ೭೮

೨೦. ಎಸ್.ಇಂದಿರಾ, ಮಹಿಳೆ ಮತ್ತು ಸವಾಲುಗಳು, ಪು. ೧೧

೨೧. ಸ.ಉಷಾ, ಕಸೂತಿ, ಪು. ೫೩

೨೨. ಅದೇ, ಪು. ೧೨೪

೨೩. ಬಿ.ಟಿ.ಲಲಿತಾ ನಾಯಕ್, ನೆಲೆ–ಬೆಲೆ, ಪು. ೮೮

೨೪. ವೀಣಾ ಶಾಂತೇಶ್ವರ, ನಡೆದದ್ದೇ ದಾರಿ, ಪು. ೩೭೦.

೨೫. ಎಂ.ಕೆ.ಇಂದಿರಾ, ಫಣಿಯಮ್ಮ, ಪು. ೪೧

೨೬. ಅದೇ, ಪು. ೫೫

೨೭. ಎಚ್.ವಿ.ಸಾವಿತ್ರಮ್ಮ, ಸೀತೆ–ರಾಮ–ರಾವಣ, ಪು. ೧೦೩

೨೮. ಅದೇ, ಪು. ೧೦೮

೨೯. ಅದೇ, ಪು. ೩೨೫

೩೦. ಅನುಪಮಾ ನಿರಂಜನ, ಮಾಧವಿ, ಪು. ೭೧

೩೧. ಬೋಳಂತ ಕೋಡಿ ಈಶ್ವರಭಟ್ಟ (ಪು.ಸಂ.), ವಿ.ಬಿಮೊಳೆಯಾರ, ವಿ.ಬಿ.ಅರ್ತಿಕಜೆ(ಸಹಸಂ), ಅನುಪಮಾ ಅಭಿನಂದನ, ಪು. ೨೪೯

೩೨. ಅನುಪಮಾ ನಿರಂಜನ, ಮಾಧವಿ, ಪು. ೧೭೮.

೩೩. ಬೋಳಂತಕೋಡಿ ಈಶ್ವರಭಟ್ಟ (ಪ್ರ.ಸಂ), ಅನುಪಮಾ ಅಭಿನಂದನ, ಪು. ೧೯೫.

೩೪. ಎಂ.ಎಸ್.ವೇದಾ, ಜಯ, ಪು. ೩೪

೩೫. ಅದೇ, ಪು. ೩೪

೩೬. ಅದೇ, ಪು. ೧೦೩, ೧೦೪

೩೭. ಅದೇ, ಪು. ೧೦೫

೩೮. ಅದೇ, ಪು. ೧೩೨

೩೯. ಹೇಮಲತಾ ಎಚ್.ಎಂ, ಮಹಿಳಾ ಅಧ್ಯಯನ–೭, ಪು. ೧೩೦

೪೦. ಎಸ್.ವಿ.ಪ್ರಭಾವತಿ, ಕುಂತಿ, ಪು. ೧೫

೪೧. ಅದೇ, ಪು. ೧೯

೪೨. ವೀಣಾ ಶಾಂತೇಶ್ವರ, ನಡೆದದ್ದೇ ದಾರಿ, ಪು. ೩೩೫

೪೩. ಅದೇ, ಪು. ೩೭೦

೪೪. ಅದೇ, ಪು. ೩೭೭

೪೫. ಎಚ್.ಎಸ್.ಪಾರ್ವತಿ, ಜಬಾಲಾ, ಪು. ೧೯

೪೬. ಅದೇ, ಪು. ೩೫

೪೭. ಅದೇ, ಪು. ೩೬

೪೮. ಅದೇ, ಪು. ೮೭

೪೯. ಬಿ.ಟಿ.ಲಲಿತಾ ನಾಯಕ್, ನೆಲೆ–ಬೆಲೆ, ೩೪

೫೦. ಅದೇ, ಪು. ೩೪

೫೧. ಅದೇ, ಪು. ೮೪

೫೨. ಅದೇ, ಪು. ೭೨

೫೩. ವೈದೇಹಿ ಅಸ್ಪೃಶ್ಯರು, ಪು.೪೭

೫೪. ಅದೇ, ಪು. ೯೨

೫೫. ಗೀತಾ ನಾಗಭೂಷಣ, ಬದುಕು, ಪು. ೪೫

೫೬. ಅದೇ, ಪು. ೧೧೦

೫೭. ಅದೇ, ಪು. ೧೧೦

೫೮. ಅದೇ, ಪು. ೪೨೯

೫೯. ಅದೇ, ಪು. ೪೫೦

೬೦. ಅದೇ, ಪು. ೨೨೧

೬೧. ಅದೇ, ಪು. ೨೨೪

೬೨. ಅದೇ, ಪು. ೨೨೫

೬೩. ಸಾರಾ ಅಬೂಬಕ್ಕರ್, ಚಂದ್ರಗಿರಿಯ ತೀರದಲ್ಲಿ, ಪು. ೫೭

೬೪. ಅದೇ, ಪು. ೬೭

೬೫. ಎಂ.ಕೆ.ಇಂದಿರಾ, ಫಣಿಯಮ್ಮ, ಪು. ೮೨

೬೬. ಅದೇ, ಪು. ೮೫

೬೭. ಅದೇ, ಪು. ೮೬